Papers laid on the Table

Sri RAMAKRISHNA HEGDE (Minister for Finance, Planning and Youth Welfare).—I beg to lay Notification No. HD 24 EFL 68 dated 16th January 1969—The Mysore Excise (Manufacture of Wines from Grapes) Rules, 1968 under sub-section (4) of Section 71 of the Mysore Excise Act. 1965.

Sri H. V. KOUJALGI (Minister for Revenue).—I beg to lay Order No. RD 33 GST 62 dated 18th February 1969 Reduction or Remission of Stamp duties chargeable under sub-section (2) of Section 9 of the Mysore Stamp Act, 1957.

Mr. SPEAKER.—The Notification and the order are laid on the Table.

Sri RAMAKRISHNA HEGDE.—Sir, on behalf of the Minister for Industries, Information and Publicity, I beg to lay Annual Report for 1967–68—Tungabhadra Steel Product Limited, Bellary, under section 619 (A) of the Companies Act, 1956.

Mr. ...rt is laid on the Table.

Budget Estimate for 1969-70
General Discussion

(Debate Continued)

Mr. SPEAKER.—Now, the General Discussion on the Budget Estimates will continue. Sri T. R. Shamanna will continue his speech.

†**ಶ್ರೀ ಟಿ. ಆರ್. ಶಾಮಣ್ಣ.**—ಮಾನ್ಯ ಅಧ್ಯಕ್ಷರೇ, ಈ ಬಡ್ಜೆಟ್ ಮೇಲೆ ಮೊನ್ನೆ ಮಾತನಾಡುತ್ತಾ ಬೆಂಗಳೂರು ನಾಗರೀಕರಿಗೆ ಒದಗಬೇಕಾಗಿದ್ದ ಉಚಿತ ನೀರಿನ ಸೌಲಭ್ಯ 1965 ರಿಂದಲೂ ಜಾರಿಗೆ ಬರಬೇಕೆಂದು ಹೇಳುತ್ತಿದ್ದೆ. ಅದಕ್ಕೆ ಕಾರಣವಾದರೂ ಇಷ್ಟೆ, ಮನೆ ಕಂದಾಯದ ಮೇಲೆ ಹೆಚ್ಚಿನ ತೆರಿಗೆಯನ್ನು ಉಚಿತ ನೀರನ್ನು ಕೊಡುವ ಉದ್ದೇಶದಿಂದ 1965ರಲ್ಲಿ ಹಾಕಿದರು. ಆದರೂ ಸಹ ವಿನಾಕಾರಣವಾಗಿ ನೀರಿನ ದರವನ್ನು 1965ರಿಂದ ಹೆಚ್ಚು ಮಾಡಿದ್ದಾರೆ. ಇದು ಸರಿಯಲ್ಲ. ಈಗ ಕೊಟ್ಟಿರುವ ಉಚಿತ ನೀರಿನ ಸೌಲಭ್ಯವನ್ನು 1965ರಿಂದಲೂ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಚರ್ಚೆ ಮಾಡಬೇಕಾದ ಅವಶ್ಯಕತೆ ನನಗೆ ಕಾಣುತ್ತಿಲ್ಲ.

ಇನ್ನು ದೇಶದ ಹಣಕಾಸಿನ ಪರಿಸ್ಥಿತಿ ಅಷ್ಟೊಂದು ಹಿತಕರವಾಗಿಲ್ಲ. ಹಣಕಾಸಿನ ಉಳಿತಾಯದ ಬಗ್ಗೆ ಸಾಧ್ಯವಾದ ಎಲ್ಲಾ ವ್ಯವಸ್ಥೆಗಳನ್ನು ಮಾಡುವುದಕ್ಕೆ ಮತ್ತು ಹಣಕಾಸಿನ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಮಂತ್ರಿಮಂಡಲದವರು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆಂಬ ಭರವಸೆ ನನಗಿದೆ. ಕಳೆದ ಎರಡು ದಿನಗಳಿಂದ ಸುಭಾಸ್ ನಗರದ ಭೂಮಿಯ ಬಗ್ಗೆ ಚರ್ಚೆ ನಡೆದಿದೆ. ಈ ಜಾಗ 5 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಬೆಲೆ ಬಾಳುತ್ತದೆ. ಈ ಜಾಗವನ್ನು ವಿಲೇವಾರಿ ಮಾಡುವ ಬಗ್ಗೆ ಈ ಸಭೆಯಲ್ಲಿ ಸಾಕಷ್ಟು ಚರ್ಚೆ ಮತ್ತು ಮಾತುಕತೆಗಳು ನಡೆದಿವೆ. ಇದರ ಔಚಿತ್ಯದ ಬಗ್ಗೆ ನಾನು ಹೋಗುವುದಿಲ್ಲ. ನನ್ನ ಒಂದು ಸಲಹೆ ಎಂದರೆ ಬೆಂಗಳೂರು ನಗರಕ್ಕೆ ಹೊರಗಿನಿಂದ ಅನೇಕ ಪ್ರಯಾಣಿಕರು ವ್ಯಾಪಾರಕ್ಕಾಗಿ, ಕೋರ್ಟು ಕಛೇರಿಗಳ ಕೆಲಸಕ್ಕಾಗಿ ಬರುತ್ತಾರೆ. ಅನೇಕ ವಿದ್ಯಾರ್ಥಿಗಳು ಹೊರಗಡೆಯಿಂದ ಬೆಂಗಳೂರಿಗೆ ಬಂದರೆ ಇಳಿದುಕೊಳ್ಳುವುದಕ್ಕೆ ಸಾಕಷ್ಟು ಜಾಗವಿಲ್ಲ. ಆದ್ದರಿಂದ ಈ ಜಾಗದಲ್ಲಿ ಸರ್ಕಾರದ ಮುಖೇನ ವಸ್ತುಪ್ರದರ್ಶನವನ್ನು ಏರ್ಪಡಿಸಲು ಮಳಿಗೆಗಳನ್ನು ಕಟ್ಟಿಸಬೇಕು. ಈ ಮಳಿಗೆಗಳ ಮೇಲೆ

ರೂಮುಗಳನ್ನು ಕಟ್ಟಿಸಬೇಕು. ಈ ಜಾಗ ರೈಲ್ವೇಸ್ಟೇಷನ್‌ಮತ್ತು ಬಸ್‌ಸ್ಟ್ಯಾಂಡ್‌ಗೆ ಹತ್ತಿರವಿರುವುದರಿಂದ ಕ್ಯಾಂಟಿನ್ ಮತ್ತು ಮಾರ್ಕೆಟ್‌ನ್ನು ನಡೆಸುವುದಕ್ಕೆ ಏರ್ಪಾಡು ಮಾಡಬೇಕು. ಈ ರೀತಿ ಮಾಡಿಸಿದರೆ ಪ್ರಯಾಣಿಕರು ಬಂದು ಇಳಿದುಕೊಳ್ಳುವುದಕ್ಕೆ ಮತ್ತು ವಿದ್ಯಾರ್ಥಿಗಳು ಇಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿ ಮಾಡಿಸಿದರೆ ಸರ್ಕಾರಕ್ಕೆ ವರ್ಷಕ್ಕೆ 10 ಲಕ್ಷ ರೂಪಾಯಿಗಳ ವರಮಾನ ಬರುತ್ತದೆಂದು ಹೇಳುತ್ತೇನೆ. ಆದ್ದರಿಂದ ಸರ್ಕಾರದವರು ಈ ಜಾಗವನ್ನು ತಮ್ಮ ಪಕ್ಷದವರಿಗೆ ಕೊಟ್ಟು ತಮ್ಮ ಪಕ್ಷವನ್ನು ಬಲಗೊಳಿಸಿಕೊಳ್ಳುವುದಕ್ಕೆ ಅವಕಾಶ ಕೊಡದೆ ದೇಶದ ಹಣಕಾಸಿನ ಪರಿಸ್ಥಿಯನ್ನು ಬಲಗೊಳಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು, ನನಗೆ ಈ ಬಗ್ಗೆ ತಿಳಿದಿರುವಂತೆ ಸರ್ಕಾರದವರು ಈ ಜಾಗದಲ್ಲಿ ಕಾಂಗ್ರೆಸ್ ಪಕ್ಷದ ಮೂಲಕ ವಸ್ತು ಪ್ರದರ್ಶನದ ಕಟ್ಟಡವನ್ನು ಕಟ್ಟಿಸಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಂದು ತಿಳಿದು ಬಂದಿದೆ. ಇದು ಸಾರ್ವಜನಿಕರ ಸ್ವತ್ತಾಗಿರಬೇಕೇ ಹೊರತು ಕಾಂಗ್ರೆಸ್ ಪಕ್ಷದ ಸ್ವತ್ತಾಗಿರಬಾರದು ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಬೆಂಗಳೂರಿನಲ್ಲಿ ಸೋಷಿಯಲ್ ಕ್ಲಬ್‌ಗಳನ್ನು ನಡೆಸುವುದಕ್ಕೆ ಸರ್ಕಾರದವರು ಲೈಸೆನ್ಸ್ ಕೊಡುತ್ತಿದ್ದಾರೆ. ಇವು ಸೋಷಿಯಲ್ ಕ್ಲಬ್‌ಗಳು ಆಗದೆ ಜೂಜಿನ ಕಟ್ಟೆಗಳಾಗಿವೆ. ಇಂತಹ ಕ್ಲಬ್‌ಗಳು ಬೆಂಗಳೂರಿನಲ್ಲಿ 200ಕ್ಕೂ ಹೆಚ್ಚು ಇವೆ. ಒಂದೊಂದು ಕ್ಲಬ್‌ನಲ್ಲಿಯೂ ಸಾವಿರಾರು ರೂಪಾಯಿಗಳ ಜೂಜು ನಡೆಯುತ್ತಿರುತ್ತದೆ. ಇಂತಹ ಕ್ಲಬ್‌ಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಅನೇಕ ಮನೆಗಳು ಹಾಳಾಗುತ್ತವೆ. ಆದ್ದರಿಂದ ಸರ್ಕಾರದವರು ಇವುಗಳ ಬಗ್ಗೆ ಸೂಕ್ತ ಕ್ರಮ ಕೈಕೊಂಡು ಜೂಜಾಟವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಸಂಪಾದನೆಯಾಗುವುದರಲ್ಲಿ ಮುಕ್ಕಾಲು ಭಾಗವನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿದರೆ ಸುಮಾರು 10 ಲಕ್ಷ ರೂಪಾಯಿಗಳಷ್ಟು ವರಮಾನ ಸರ್ಕಾರಕ್ಕೆ ಬರುತ್ತದೆಂದು ಸಲಹೆ ಕೊಡುತ್ತೇನೆ. ಸರ್ಕಾರದ ಗಮನ ಈ ಕಡೆಗೆ ಏತಕ್ಕೆ ಹೋಗಿಲ್ಲ ಎಂಬ ಬಗ್ಗೆ ಆಶ್ಚರ್ಯಪಡಬೇಕಾಗಿದೆ. ಸೋಷಿಯಲ್ ವೆಲ್‌ಫೇರು ಇನ್‌ಸ್ಟಿಟ್ಯೂಷನ್‌ಗಳು ಎಂದು ಹೆಸರು ಇಟ್ಟು ಕೊಂಡು ಇದರಲ್ಲಿ ಜೂಜಾಟ ನಡೆಯುತ್ತಿದೆ. ಟೋಕನ್ ಸಿಸ್ಟಂ ಎಂದು ಮಾಡಿಕೊಂಡು ಇದರಲ್ಲಿ ಸಾವಿರಾರು ರೂಪಾಯಿಗಳಷ್ಟು ಅವ್ಯವಹಾರಗಳು ನಡೆಯುತ್ತಿವೆ. ಇದನ್ನು ತಪ್ಪಿಸುವುದಕ್ಕೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಇದರಿಂದ ಸರಕಾರಕ್ಕೂ ಹೆಚ್ಚು ದುಡ್ಡು ಸಂಪಾದನೆ ಮಾಡುವುದಕ್ಕೆ ಒಂದು ದಾರಿ ಮಾಡಿಕೊಟ್ಟಂತಾಗುತ್ತದೆ ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ನಮ್ಮ ಬೆಂಗಳೂರು ನಗರದಲ್ಲಿ ಸುಮಾರು 15 ಲಕ್ಷ ಜನರಿದ್ದಾರೆ. ಇಲ್ಲಿ ಕಾರ್ಪೊರೇಷನ್ ಸ್ವಿಮಿಂಗ್ ಪೂಲು ಒಂದನ್ನು ಬಿಟ್ಟರೆ ಬೇರೆ ಯಾವ ಕಡೆಯಲ್ಲೂ ಒಂದು ಸ್ವಿಮಿಂಗು ಪೂಲು ಇಲ್ಲ ಮತ್ತು ಒಂದು ಸುವ್ಯವಸ್ಥಿತವಾದ ಸ್ವಿಮಿಂಗು ಪೂಲನ್ನು ಈ ನಗರದ ನಾನಾ ಭಾಗಗಳಲ್ಲಿ ಮಾಡಿದರೆ ಜನಕ್ಕೆ ಅನುಕೂಲವಾಗುತ್ತದೆ. ಅನೇಕ ದೊಡ್ಡ ಪಟ್ಟಣಗಳಲ್ಲಿ ಇಂತಹ ವ್ಯವಸ್ಥೆ ಇದೆ. ಆದುದರಿಂದ ನಮ್ಮ ಬೆಂಗಳೂರು ನಗರದಲ್ಲೂ ಇಂತಹ ಒಂದು ಸುವ್ಯವಸ್ಥಿತವಾದ ಸ್ವಿಮಿಂಗು ಪೂಲನ್ನು ಮಾಡಲು ಸರಕಾರ ಸೂಕ್ತ ಗಮನ ಕೊಡಬೇಕು ಎಂದು ಇಲ್ಲಿ ಸಲಹೆ ಮಾಡುತ್ತೇನೆ

ನಮ್ಮ ಬೆಂಗಳೂರು ನಗರದಲ್ಲಿ ಯಾವುದೋ ಕಾಲದಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿದರು. ಈಗ ಇಲ್ಲಿನ ಜನಸಂಖ್ಯೆ ಸುಮಾರು 15 ಲಕ್ಷಕ್ಕೂ ಮೀರಿ ಹೋಗಿದೆ. ಬೆಂಗಳೂರು ನಗರದಲ್ಲಿ ಕೇಂದ್ರದ ಕೈಗಾರಿಕೆಗಳು ಹೆಚ್ಚಾಗುತ್ತಿರುವುದರಿಂದ ಇಲ್ಲಿನ ಜನರ ನಿಬಿಡ ಹೆಚ್ಚಾಗುತ್ತಿದೆ. ಇದಕ್ಕಾಗಿ ಅಲ್ಲಲ್ಲಿ ಕಾರ್ಪೊರೇಷನ್ನಿನವರು ಆದಷ್ಟೂ ರಸ್ತೆಗಳನ್ನು ದೊಡ್ಡದು ಮಾಡಬೇಕೆಂದು ಅಲ್ಲಲ್ಲಿ ಮಾಡುತ್ತಿದ್ದಾರೆ. ಇದರಿಂದಲೂ ಜನರಿಗೆ ತೊಂದರೆಯಾಗುತ್ತಿದೆ. ಅದರಲ್ಲೂ ಜನರು ರಸ್ತೆಗಳಲ್ಲಿ ಸುಖವಾಗಿ ಪ್ರಯಾಣ ಮಾಡಲು ತಕ್ಕ ಸೌಕರ್ಯಗಳನ್ನು ಮಾಡಿಕೊಡುತ್ತಿಲ್ಲ. ಇದರಲ್ಲೂ ಬೆಂಗಳೂರು ನಗರದಲ್ಲಿ ಬಿ. ಟಿ. ಎಸ್. ಬಸ್ಸುಗಳ ಹಾವಳಿ ಹೇಳತೀರದು. ಒಂದು ಕಡೆ ಈ ಬಸ್ಸುಗಳು ಫುಟ್‌ಪಾತ್ ಮೇಲೆ ಹತ್ತಿ ಜನರ ಪ್ರಾಣಕ್ಕೆ ಹಾನಿ ಉಂಟುಮಾಡುತ್ತವೆ ಮತ್ತು ಇನ್ನೊಂದು ಕಡೆ ಬಸ್ಸು ದಾರಿಯಲ್ಲಿ ರಸ್ತೆ ಅಂಚಿನಲ್ಲಿರುವ ಕಾಂಪೌಂಡು ಒಳಕ್ಕೆ ನುಗ್ಗುತ್ತವೆ. ಇದರಿಂದ ಎಷ್ಟೋ ಅನಾಹುತಗಳಾಗುತ್ತವೆ ಅನೇಕರ ಪ್ರಾಣ ಹಾನಿಗಳೂ ಆಗುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಜನರು ಓಡಾಡುವುದೇ ಕಷ್ಟವಾಗುತ್ತಿದೆ. ಇದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಇಲ್ಲಿ ಒತ್ತಿ ಹೇಳುತ್ತೇನೆ. ಇನ್ನೊಂದು ದಿನ ಬುಲ್ ಟೆಂಪಲ್ ರಸ್ತೆಯಲ್ಲಿ ನಾನು ಬಸವನಗುಡಿಯಲ್ಲಿ ಕಾರು ತೆಗೆದುಕೊಂಡು ಹೋಗುತ್ತಿದ್ದಾಗ ನನ್ನ ಪ್ರಾಣವೂ ಹೋಗುವುದರಲ್ಲಿತ್ತು. ಆದುದರಿಂದ ಇಂತಹ ಅಪಘಾತಗಳು ಬಿ. ಟಿ. ಎಸ್. ಬಸ್ಸುಗಳಿಂದಾಗುತ್ತಿರುವುದರ ಕಡೆಗೆ ಸೂಕ್ತವಾದ ಗಮನ ಕೊಡಬೇಕು.

(ಶ್ರೀ ಟಿ. ಆರ್. ಶಾಮಣ್ಣ)

ಮತ್ತೆ ಬೆಂಗಳೂರು ನಗರದಲ್ಲಿ ಈಗ್ಗೆ ಎರಡು ವರ್ಷಗಳ ಹಿಂದೆ ಕಾರ್ಪೊರೇಷನ್‌ನಲ್ಲಿ ಎಷ್ಟು ಸ್ಲಂಗಳು ಇದ್ದವೋ ಅಷ್ಟೇ ಈಗಲೂ ಇವೆ. ಇವನ್ನು ಕ್ಲೀಯರ್ ಮಾಡಲು ಇನ್ನೂ ಆಗಲಿಲ್ಲ. ಈ ಬೆಂಗಳೂರು ನಗರದಲ್ಲಿ ಸುಮಾರು ನೂರೆಂಟು ಸ್ಲಂಗಳಿವೆ. ಇದರಿಂದ ಬೆಂಗಳೂರು ನಗರ ಸುಂದರ ನಗರವಾಗುವುದಕ್ಕೆ ಬದಲಾಗಿ ಸ್ಲಂಗಳ ನಗರವಾಗುತ್ತಿದೆ. ಇಂತಹ ಸ್ಲಂಗಳನ್ನು ಬೇಗನೆ ಕ್ಲೀಯರು ಮಾಡಲು ಸೂಕ್ತವಾದ ಕಾರ್ಯಕ್ರಮಗಳನ್ನು ಸರಕಾರದವರು ತೆಗೆದುಕೊಳ್ಳಬೇಕೆಂದು ನಾನು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಸ್ಲಂಗಳು ಹೆಚ್ಚಾಗುತ್ತಿರುವುದರಿಂದ ಈ ನಗರದಲ್ಲಿ ಸೊಳ್ಳೆ ಕಾಟ ಬಹಳ ಜಾಸ್ತಿಯಾಗುತ್ತಿದೆ. ಸ್ಲಂಗಳನ್ನು ಕ್ಲೀಯರು ಮಾಡಿದ ಹೊರತು ಸೊಳ್ಳೆ ಕಾಟ ತಡೆಯಲು ಆಗುವುದಿಲ್ಲ. ಬೆಂಗಳೂರಿನಲ್ಲೇ ಈಚೆಗೆ ಸೊಳ್ಳೆ ಕಾಟ ಬಹಳ ಜಾಸ್ತಿಯಾಗಿದೆ. ನಾನು ಕೆಲವು ದಿನಗಳ ಹಿಂದೆ ಇಲ್ಲಿನ ದೊಡ್ಡ ಆಸ್ಪತ್ರೆಯೊಂದರಲ್ಲಿ 8–10 ದಿನಗಳು ಇರಬೇಕಾಗಿ ಬಂತು. ಅಗ ಅಲ್ಲಿದ್ದಂತಹ ಸೊಳ್ಳೆ ಕಾಟವನ್ನು ತಡೆಯಲು ನನಗೇ ಅಸಾಧ್ಯವಾಯಿತು. ಇಂತಹ ಸೊಳ್ಳೆ ಕಾಟವನ್ನು ತಡೆಯಲು ಇಲ್ಲಿರುವ ಆಸ್ಪತ್ರೆಗಳವರು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಸೊಳ್ಳೆ ಕಾಟ ಎನ್ನುವುದು ಹಿಂದೆ ಮಂಡ್ಯದಲ್ಲಿತ್ತು. ಅಲ್ಲಿ ಕಡಿಮೆ ಮಾಡಿದರು, ಮಲೆನಾಡಿನಲ್ಲಿ ಸೊಳ್ಳೆ ಕಾಟ ಕಡಿಮೆ ಮಾಡಿದರು ಹಾಗೂ ಇನ್ನು ಇತರ ಕಡೆ ಕಡಿಮೆ ಮಾಡಿದರು. ಆದರೆ ಬೆಂಗಳೂರು ಹತ್ತಿರ ಮಾತ್ರ ಈ ಸೊಳ್ಳೆ ಕಾಟವನ್ನು ತಪ್ಪಿಸಲು ಈ ಸರಕಾರಕ್ಕೆ ಆಗಲಿಲ್ಲ. ಈ ಸೊಳ್ಳೆ ಕಾಟವನ್ನು ತಪ್ಪಿಸುವ ಜವಾಬ್ದಾರಿಯನ್ನು ಕಾರ್ಪೊರೇಷನ್ನಿನವರ ಮೇಲೆ ಬಿಟ್ಟರೆ ಅವರೇನೂ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಸರಕಾರದವರೇ ಸೊಳ್ಳೆಕಾಟವನ್ನು ತಪ್ಪಿಸುವುದಕ್ಕೆ ಇನ್ನೂ ಹೆಚ್ಚು ಆಸಕ್ತಿ ವಹಿಸಬೇಕೆಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಆಮೇಲೆ ರಸ್ತೆಗಳು ಹಾಗೂ ದೀಪಗಳ ದೋಷಗಳು ಅಲ್ಲಲ್ಲಿ ಹೆಚ್ಚಾಗುತ್ತಿವೆ. ಅದರಲ್ಲೂ ಕಾರ್ಪೊರೇಷನ್ನಿಗೆ ಸೇರಿರುವ ಅನೇಕ ಭಾಗಗಳು ಬಹಳ ಹಿಂದುಳಿದ ಪ್ರದೇಶಗಳಾಗಿವೆ. ಇಲ್ಲಿಗೆ ಬೇಕಾದ ನೀರು ದೀಪಗಳ ಸೌಕರ್ಯವನ್ನು ಒದಗಿಸಿಕೊಡುತ್ತಿಲ್ಲ. ಇಂತಹ ಹಿಂದುಳಿದಿರುವ ಭಾಗಗಳಿಗೆ ಸರಕಾರ ಹಾಗೂ ಕಾರ್ಪೊರೇಷನ್ನಿನವರು ಆಸಕ್ತಿ ವಹಿಸದೇ ಇದ್ದರೆ ಮುಂದೆ ಇಲ್ಲಿರುವ ಜನರು ದಂಗೆ ಏಳಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇನ್ನು ರೆವಿನ್ಯೂ ಪಾಕೆಟ್ಸ್‌ನಲ್ಲಿದ್ದ 34 ಹಳ್ಳಿಗಳನ್ನು ಕಾರ್ಪೊರೇಷನ್ನಿಗೆ ಸೇರಿಸಿದರು ಆದರೆ ಇಲ್ಲಿಗೆ ನೀರು ದೀಪಗಳ ಸೌಕರ್ಯ ಸರಿಯಾಗಿ ಇನ್ನೂ ಕೊಟ್ಟಿಲ್ಲ. ಹಾಗೇ ತ್ಯಾಗರಾಜನಗರ ಮತ್ತು ಕಾರ್ಪೊರೇಷನ್ನಿಗೆ ಸೇರಿದ ಇನ್ನೂ ಅನೇಕ ಹಳ್ಳಿಗಳಿಗೆ ಕೂಡ ಸರಿಯಾದ ನೀರು ಹಾಗೂ ದೀಪಗಳ ವ್ಯವಸ್ಥೆ ಮಾಡಿಲ್ಲ. ಅಲ್ಲಿಗೆ ಕೂಡಲೇ ತಕ್ಕ ವ್ಯವಸ್ಥೆ ಮಾಡಬೇಕು ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಬೆಂಗಳೂರು ನಗರದಲ್ಲಿ ಈಚೀಚೆಗೆ ಕಳ್ಳತನ ಎನ್ನುವುದು ದಿನೇ ದಿನೇ ಹೆಚ್ಚಾಗುತ್ತಿದೆ ಹಗಲಿನಲ್ಲೇ ದರೋಡೆಗಳು ಆಗುತ್ತಿವೆ. ಯಾರಾದರೂ ಬಸವನಗುಡಿಯಲ್ಲಿ ಸಂಜೆ ಹರಿಕಥೆ ಕೇಳಲು ಹೋದರೆ ಅವರು ವಾಪಸು ಬರುವುದರೊಳಗಾಗಿ ಅವರ ಮನೆಗಳಲ್ಲಿ ಕಳ್ಳತನವಾಗಿರುತ್ತದೆ. ಮನೆಗಳಲ್ಲಿ ಹೆಂಗಸರು ಒಬ್ಬರೇ ಇರುವಾಗ ಕಳ್ಳತನವಾಗುತ್ತದೆ ಹಾಗೂ ದರೋಡೆಗಳಾಗುತ್ತಿರುತ್ತವೆ. ಇದರ ಬಗ್ಗೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಂಡು ಇಂತಹ ಕಳ್ಳತನಗಳನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರಿನಲ್ಲಿ ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್ ಇವನ್ನು ಇಂಪ್ರೂವ್ ಮಾಡುವುದಕ್ಕೆ ಸ್ವಲ್ಪ ಹಣ ಒದಗಿಸಿದ್ದೇವೆ ಎಂದು ಹೇಳಿದ್ದಾರೆ ಅದರಂತೆ ಬೇರೆ ಪಾರ್ಕ್‌ಗಳನ್ನಾಗಲಿ, ಗಾರ್ಡನ್ ಆಗಲಿ ಇಂಪ್ರೂವ್ ಮಾಡಿದ್ದಾರೆಯೇ? ಬೆಂಗಳೂರು ಒಂದು ದೊಡ್ಡ ನಗರ ಎಂದು ಹೇಳಿಕೊಳ್ಳುತ್ತಿದ್ದಾರೆ. ಇಲ್ಲಿ ಒಂದು ಪ್ರೋಗ್ರಾಂ ಇಟ್ಟುಕೊಂಡು ಕೆಲಸ ಮಾಡಬೇಕಾಗಿತ್ತು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನು ವಿದ್ಯಾಭ್ಯಾಸಕ್ಕಾಗಿ ಸುಮಾರು 46 ಕೋಟಿ ರೂಪಾಯಿಗಳನ್ನು ಈ ಬಡ್ಜೆಟ್ಟಿನಲ್ಲಿ ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ಹೋದ ವರ್ಷ 36 ಕೋಟಿ ಇದ್ದುದು ಈ ವರ್ಷ 10 ಕೋಟಿ ರೂಪಾಯಿ ಜಾಸ್ತಿ ಒದಗಿಸಿದ್ದಾರೆ. ಇಷ್ಟು ದುಡ್ಡು ಹೆಚ್ಚು ಕೊಟ್ಟರೂ ತಂದೆತಾಯಿಗಳಿಗೆ ವಿದ್ಯಾಭ್ಯಾಸದ ಹೊರೆ ಏನೂ ಕಡಿಮೆಯಾಗದೇ ಇರುವುದು ತುಂಬಾ ಶೋಚನೀಯವಾದ ವಿಚಾರ. ಇದರಲ್ಲಿ ಏನಾಗಿದೆ ಎಂದರೆ ಸರ್ಕಾರದವರು ಸಾಕಾದಷ್ಟು ದುಡ್ಡು ಖರ್ಚು ಮಾಡಿದರೂ ಕೂಡ ವಿದ್ಯಾಭ್ಯಾಸದ ಸೌಲಭ್ಯ ನಿಜವಾಗಿಯೂ ಸಾಮಾನ್ಯವಾಗಿ ನಗರದಲ್ಲಿರತಕ್ಕಂಥವರಿಗೆ ಒದಗುತ್ತಾ

ಇಲ್ಲ. ಇಲ್ಲಿ ಏನಾಗಿದೆ ಎಂದರೆ ಸರ್ಕಾರಿ ಶಾಲೆಗಳು ದೊಡ್ಡಿ ಇರುವಹಾಗೆ ಇವೆ. ಆದುದರಿಂದ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಖಾಸಗಿ ಶಾಲೆಗಳಿಗೆ ಕಳುಹಿಸಿಕೊಡುತ್ತಿದ್ದಾರೆ. ಖಾಸಗಿ ಶಾಲೆಗಳು ಯಾವ ರೀತಿ ಇವೆ ಎಂದರೆ ನನ್ನ ಮೊದಲನೆ ಹುಡುಗ ಒಬ್ಬ ಹೈಸ್ಕೂಲ್‌ನಲ್ಲಿ ಓದುತ್ತಿದ್ದಾನೆ. ಅವನು ಮೊದಲೇ ಸೇರುವಾಗ ಕಾಂಟ್ರಿಬ್ಯೂಷ್ಯನ್ ಫೀಸ್, ಎಜುಕೇಷನ್ ಫೀಸ್ ಎಂದು 76 ರೂಪಾಯಿಗಳನ್ನು ತೆಗೆದುಕೊಂಡರು. ಇನ್ನೊಬ್ಬ ಚಿಕ್ಕ ಹುಡುಗ ಪ್ರೈಮರಿ ಸ್ಕೂಲ್‌ಗೆ ಹೋಗುತ್ತಿದ್ದಾನೆ. ಅದು ರೆಕಗ್ನೈಸ್ ಆಗಿದೆ. ಅವನಿಗೆ ತಿಂಗಳಿಗೆ 10 ರೂಪಾಯಿ ಫೀಸ್. 12 ತಿಂಗಳೂ ಫೀಸ್ ಕೊಡಬೇಕು, ಒಟ್ಟು 120 ರೂಪಾಯಿ ಇದರ ಜೊತೆಗೆ ಇನ್ನು ಬೇರೆ ಬೇರೆ ವಸೂಲ್ಮಾಡುತ್ತಾರೆ. ಈ ರೀತಿ ಹೆಸರಿಗೆ ಮಾತ್ರ ಉಚಿತ ವಿದ್ಯಾಭ್ಯಾಸವಾದರೆ ತಂದೆತಾಯಿಗಳಿಗೆ ಆಗಿರತಕ್ಕಂಥ ತೊಂದರೆ ಮಾತ್ರ ತಪ್ಪುವಂತಿಲ್ಲ, ಆದುದರಿಂದ ಇದನ್ನು ಗಮನಿಸದೇ ಹೋದರೆ ಸರ್ಕಾರ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವಂಥ ದುಡ್ಡು ನಿಜವಾಗಿಯೂ ಯಾರು ಉಪಯೋಗಿಸಬೇಕೋ ಅವರಿಗೆ ಉಪಯೋಗವಾಗುತ್ತಾ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು.

ಇನ್ನು ಪ್ರೈಮರಿ ಕ್ಲಾಸ್‌ಗೆ ಕಟ್ಟಡಗಳು ಇಲ್ಲ, ಬೆಂಚು, ಕುರ್ಚಿಗಳು ಇಲ್ಲ. ಇಂತಹ ಸಂದರ್ಭದಲ್ಲಿ ಉಪಾಧ್ಯಾಯರುಗಳು ಅವರಿಗೆ ಹೇಗೆ ಪಾಠ ಹೇಳಬೇಕು, 46 ಕೋಟಿ ರೂಪಾಯಿ ಖರ್ಚು ಮಾಡುವುದು ಮುಖ್ಯವಲ್ಲ. ನಿಜವಾಗಿಯೂ ಹೇಳುವುದಾದರೆ ಪ್ರೈಮರಿ ಸ್ಕೂಲ್‌ಗಳಲ್ಲೆಲ್ಲ ಪ್ರೈಮರಿ ಹಂತದಲ್ಲೇ ಗಮನವಿಟ್ಟು ಹುಡುಗರಿಗೆ ಕಾಗುಣಿತ, ಬರವಣಿಗೆ ಕಲಿಸಿದರೆ ಅದು ಒಂದು ಸರಿಯಾದ ಅಸ್ತಿಭಾರ ಇದ್ದಹಾಗೆ ಆಗುತ್ತದೆ. ಇದರಲ್ಲಿ ಸಾಕಾದಷ್ಟು ಅನ್ಯಾಯ ನಡೆಯುತ್ತಾ ಇದೆ. ಆದುದರಿಂದ ವಿದ್ಯಾಭ್ಯಾಸದ ಕ್ರಮದಲ್ಲಿ ಕ್ವಾಂಟಿಟಿಗಿಂತ ಕ್ವಾಲಿಟಿ ಕಡೆ ಹೆಚ್ಚು ಗಮನ ಇಟ್ಟರೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಕೊನೆಯದಾಗಿ ಒಂದು ವಿಷಯ ಮಾತ್ರ ಹೇಳುತ್ತೇನೆ. ಸರ್ಕಾರದ ಸಾಲ ದಿನೇ ದಿನೇ ಹೆಚ್ಚಾಗುತ್ತಾ ಇದೆ. ಇದರ ಬಗ್ಗೆ ನಾವು ತೆಗೆದುಕೊಂಡ ದುಡ್ಡಿಗೆ 20 ಕೋಟಿ ರೂಪಾಯಿಯಷ್ಟು ಬಡ್ಡಿಯನ್ನು ಕೊಡಬೇಕಾಗುತ್ತದೆ. ಸಾಲ ಮಾಡಬೇಡಿ ಎಂದು ಹೇಳುವುದಿಲ್ಲ. ಸಾಲಮಾಡಿ ಬಂದ ಹಣವನ್ನು ಸರಿಯಾಗಿ ಉಪಯೋಗಿಸಬೇಕು. ಸರಿಯಾದ ರೀತಿಯಲ್ಲಿ ವಿನಿಯೋಗಿಸಬೇಕು. ಅದಕ್ಕೆ ತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕು. ಬರೀ ಸಾಲ ಮಾಡಿ ಸಾಲಗಾರರ ಮಕ್ಕಳನ್ನಾಗಿ ಮಾಡುವುದು ಲಕ್ಷಣವಲ್ಲ ಎಂದು ಹೇಳುತ್ತೇನೆ.

3-30 P.M.

ಮಾನ್ಯ ಅರ್ಥ ಸಚಿವರು ಸರ್ಕಾರಿ ನೌಕರರ ಬಗ್ಗೆ ಒಂದು ಕನಿಕರವನ್ನು ತೋರಿಸಿದ್ದಾರೆ. ಅವರಿಗೆ ಒಂದು ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ. ನೌಕರರು ಅವರು ತೆಗೆದುಕೊಳ್ಳತಕ್ಕ ಸಂಬಳಕ್ಕೆ ಸರಿಯಾಗಿ ಕೆಲಸ ಮಾಡಬೇಕು ಎಂದು ಒಂದು ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ. ನಾನೂ ಕೂಡ ಹೊಟ್ಟೆ ತುಂಬ ನಮ್ಮ ಸರ್ಕಾರಿ ನೌಕರರಿಗೆ ಕೊಡಿ, ಹೊಟ್ಟೆ ತುಂಬ ಕೊಟ್ಟು ಸರಿಯಾದ ರೀತಿಯಲ್ಲಿ ಕೆಲಸವನ್ನೂ ತೆಗೆದುಕೊಳ್ಳಿ ಎಂದು ಈ ಸಂದರ್ಭದಲ್ಲಿ ಹೇಳಿ ಮೊನ್ನೆ ಮತ್ತು ಈವೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri M. SRINIVASA NAIK** (Mangalore-I).—I rise to congratulate the Hon. Finance Minister for the very fine budget he has placed before this House. The figures he has furnished and his realistic approach to solve the problems are commendable. Ever since he took over the portfolio of Finance, he has been able to reduce the Central over-draft and brought it down to 15 crores from 50 crores. The sales tax has been increased from 12 to 14 crores to 28 to 30 crores. The receipt on the income side by tax and others has been increased. He has strived hard to increase the assets of the State. On the whole our State's financial postion is very stable and we are progressing in all directions. Particular emphasis has been laid on the development of agriculture. The Government have already taken such measures as are necessary to increase the agricultural production of this State which will ultimately improve the economic conditions of the people of the villages. I agree with the Finance

(SRI M. SRINIVASA NAYAK)

Minister that the taxation measures have already reached the saturation point. The State has realised that it is very necessary to form capital of its own so that it may not depend upon the Centre. I agree with the idea of taxing the Rural Sector which has been greatly benefifed by the measures taken for improving agriculture by way of providing cheap electricity, education, pumpsets, manure, etc. We should definitely expect something for all these measures taken for the benefit of the rural sector. In the year 1930 the price of rice was nearly Rs. 2-4-0 a mura. To-day, the price of rice has gone up to Rs. 50 a mura. The people in the rural sector are greatly benefited by the rise in prices. But the land revenue has not been increased and it is more or less constant and it is not in proportion to the increase in price of rice and other commodities. What I suggest is that the land revenue may be continued and we should get adequate return from the rural sector by way of agricultural income tax. The agriculturists will not grudge paying the tax. They know without paying the land revenue and any other tax that is leviable, the Government cannot run. They know these are necessary for the development of rural side. It is also necessary to increase the land revenue to make up for the revenue that is necessary to carry on our agricultural operations and other things.

I would like to mention in this connection that small savings schemes are better suited for the rural areas. Our people in the rural areas are very shy to go to the Bank and invest money. Therefore, it is very necessary that small savings scheme has to be carried to the very doors of the villagers. If we carry it to the doors of the villagers, the people will definitely come forward to invest money. What is going on now with regard to the savings scheme? A target has been fixed for the small Savings Department. The people will be induced and they will come forward just to please the officers, invest money and withdraw it after some time. The money that is being collected this way is meant for investment for the development of the State. Now the State is not getting much benefit out of this scheme, because most of the money will be withdrawn. Therefore, the habit of saving has to be inculcated at the stage of Primary School level. We will have ample business if we put earnest offorts to inculcate the habit of savings in the mind of children. They can begin with 25 paise and thereby multiply with any amount. The children should be given attractive Pass Book and when the Pass Book shows the credit of Rs. 5, the child should be given a certificate. If we inculcate the habit of saving in the mind of child in the primary level, later on, he develops that habit of saving something in the Bank. This scheme, I think, will go a long way to attract money.

This year Rs. 40.07 crores have been allotted for Education. As per the present set up in the country, the policy of the Government is to give free education up to the Secondary level. When that is the position, you may not be in a position to meet the entire requirements

with this amount of Rs. 40.07 crores. It is very necessary that we have to go into the question of giving education in a scientific manner. Now let us go into the question of collecting examination fees. The students have to pay the public examination fees for the 7th standard. Again they have to pay as examination fees for 10th and 11th standards also. When the Government has got the intention of giving free education, why should they charge public examination fees.? This is a hardship inflicted on the parents of the children. This has to be looked into. There are several colleges in the State. There are several electives. The students are in the habit of selecting only P. C. M. and P. C. B. The other electives are not favoured by the students. It is very necessary that a Committee should go into this question and see that electives which are not favoured by the students, are removed, so that the expenditure could be minimised to the barest minimum. We can save so much because the salary of the concerned Professors and staff is saved. Another thing is about changing of Text Books every year. We are having a wing to look after these text books. This a very important thing. There are some complaints about text books. This work can only be done by an expert Committee. Results are poor in Schools and efficiency is going down. Everybody is keen on improving the results of the Schools. All efforts should be made to improve the standard of education and at the same time we must see that wastage that is occurring in every school should be minimised. All these things could be looked into by the Committee. If any schools are found in excess or if any school has got students who are not up to the required standard such schools have to be examined by this committee. Recently, the Hon. Minister for Education has enunciated a policy that the Government would not give grants to newly opened private schools for first five years. I think Sir, it would be much advisable for the Government, not to permit any school or college to be opened newly, till the Expert Committee gives its report. After receiving the report of the Expert Committee, the Government could examine the question of permitting the opening of fresh schools and colleges.

Sir, though the Budget Speech refers to both Rural Water Supply and Urban Water Supply and drainage, I think, the Government has not bestowed enough thought on providing water supply to all the towns and villages in the State. It is quite necessary that people should be given protective water supply, and if necessary, the Water Supply and Sewerage Boards could be constituted in four divisions of the State and those Boards my be permitted to rise funds by taking loans from District Banks, and provide water supply to all villages.

Government has given good treatment for development of fisheries. The present number of mechanised boats which is about 510 and another 120 boats that are going to be sanctioned during 1969-70 is not adequate for the development of fisheries on our Coasts. We have a coast line of nearly 250 miles and huge quantity of fish is available for catching on our coasts. The only handicap in this behalf is money.

(SRI M. SRINIVASA NAYAK)

Now the Government is giving 50 per cent of the subsidy on the purchase of boats by the fishermen. This scheme was introduced when the Government wanted to popularise mechanised boats. Formerly they thought the fishes will run away on hearing the sound of these mechanised boats. But later it has been found that the fish is a deaf animal and it does not run away. Further each of the mechanised boat costs about Rs. 50,000. Now these boats have become very popular and the fishermen are coming forward to purchase them, but Government are not able to meet the demand. When there is so much of demand for these mechanised boats, it is necessary for the Government to withdraw the subsidy and give a guarantee to the fishermen to borrow the required amount from the Scheduled Banks. I think this would help fishermen very much. As at present the fishermen have to meet 50 per cent of the amount, many of them are not able to have boats and many of them are dissatisfied with the present policy of Government. It would be necessary for the Government to consider this aspect.

As regards industries, I would like to say, that the finances of the State could be augmented not only from taxes and revenues, but also from the income of the industries. Sir, Mysore State is a pioneer in industries and the industries that exist in our State are very valuable ones. In regard to the suggestion put forward by Government as to whether the industries are to be handed over to the private agencies or to be continued to be run by the Government, as far as I am concerned, I would very much like that Government alone should continue to run these industries. The failure to get the required return from these industries is only due to the paucity of technical personnel that are placed in charge of these industries. The Government is posting, at present, the IAS officers to man the industries and they have no background of the management of industries. Therefore, it is very necessary to have a cadre of trained technical personnel created to handle industries in the State. Further the persons who are put in charge of various industries have not been given sufficient powers to act on their own initiative. They have to seek orders from the Director of Industries on each and every matter and they are placed only in the position of a mere clerk. It is necessary the Government applies its mind and tries to create a cadre of technically trained personnel to man these industries. In this connection, I would like to mention that the Mandya Paper Mills has made a huge profit within the course of five months. Therefore Sir, in order to improve the working of the industries and earn profits from these industries, it would be advisable for the Government, to consider the question of having a cadre of trained technical personnel and also to give them sufficient powers as are necessary to manage and run the industries in the State.

I conclude and thank the hon. Chair for the opportunity given to me to speak.

ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ನಾನು 1969-70ನೇ ಸಾಲಿನ ಆಯವ್ಯಯ ಪಟ್ಟಿಯನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಮಾನ್ಯ ಸಭೆಯ ಗಮನಕ್ಕೆ ತರ ಬಯಸುತ್ತೇನೆ. ಈ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಮುಂಚೆ ಒಂದು ವಿಷಯವನ್ನು ಬಹಳ ಕೋಪದಿಂದ ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳು ತಮ್ಮ ಭಾಷಣದ 16ನೆಯ ಪ್ಯಾರಾ ದಲ್ಲಿ ಹೀಗೆ ತಿಳಿಸಿದ್ದಾರೆ. "1967 ರಿಂದ ಕೆಲಕೆಲವು ರಾಜ್ಯಗಳು ತಮಗೆ ಉಪಲಬ್ಧವಿರುವ ಆದಾಯ ಜನಾನುರಾಗವನ್ನು ಗಳಿಸಿಕೊಳ್ಳುವ ಹಂಬಲದಿಂದ ಅತಿ ವೆಚ್ಚದ ಏರ್ಪಾಡುಗಳನ್ನು ಕೈಕೊಂಡಿವೆ. ಇದರಿಂದ, ಈ ರಾಜ್ಯಗಳ ಆರ್ಥಿಕ ಸ್ಥಿತಿಯು ಹದಗೆಡುವುದಷ್ಟೇ ಅಲ್ಲದೆ, ಬೇರೆ ರಾಜ್ಯ ಗಳಲ್ಲೂ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ" ಇದನ್ನು ಓದಿದಮೇಲೆ ಬಹಳ ಕೆಟ್ಟದು ಅನ್ನಿಸಿತು. ಮಂತ್ರಿಗಳು ಇತರ ರಾಜ್ಯಗಳ ಆಯವ್ಯಯ ಪಟ್ಟಿಗಳ ಮೇಲೆ ನೇರವಾಗಿ ಟೀಕೆಮಾಡಿದ್ದಾರೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇಂಥ ಒಂದು ಅಭಿಪ್ರಾಯವನ್ನು ಅವರು ಸೂಚಿಸಬಹುದೇ ? ಅವರು ತಮ್ಮ ಆಯವ್ಯಯ ಎಷ್ಟುಮಟ್ಟಿಗಿದೆ ಎಂದು ನೋಡಿಕೊಂಡು ಎರಡನೆಯವರು ಆಯವ್ಯಯ ಪಟ್ಟಿಯ ವಿಚಾರವನ್ನು ತುಲನಾತ್ಮಕ ದೃಷ್ಟಿಯಿಂದ ತಿಳಿಸಿದ್ದರೆ ಚೆನ್ನಾಗಿತ್ತು. ತಮ್ಮ ಪಕ್ಷದ ಚೀಪ್ ಪಾಪ್ಯುಲಾರಿಟಿಗಾಗಿ ಇಂಥ ಉಲ್ಲೇಖನಗಳನ್ನು ಕೊಡಲಾಗಿದೆ ಎಂದು ನಾನು ಭಾವಿಸುತ್ತೇನೆ.

ಬಜೆಟ್ಟಿನ ಬಗ್ಗೆ ಕೆಲವು ವಿಷಯಗಳನ್ನು ಯೋಚನೆಮಾಡಬೇಕಾಗುತ್ತದೆ. ಬಜೆಟ್ ಅಂದರೇನು ಎಂಬುದನ್ನು Goldstone ಈ ರೀತಿ ಹೇಳಿದ್ದಾರೆ :

> " Budget is not merely affairs of arithmetic, but in thousand ways go to the root of the prosperity of individuals, relation s of class and strength of Kingdoms......".

ವಾಸ್ತವಿಕವಾಗಿ ಇವತ್ತು ಹಿಂದಿನ ಆಯವ್ಯಯ ಪಟ್ಟಿಗಳಿಂದ ಪರಿಣಾಮವೇನಾಗಿದೆ, ಎಷ್ಟುಮಟ್ಟಿಗೆ ನಿರುದ್ಯೋಗ ಬೆಳೆದಿದೆ, ಜನರಿಗೆಷ್ಟು ಅನುಕೂಲವಾಗಿದೆ ಎಂಬುದನ್ನು ತಿಳಿಯಲು ಅಂಕಿಅಂಶಗಳನ್ನು ನೋಡಬೇಕು.

ವಾಸ್ತವಿಕವಾಗಿ ಸನ್ಮಾನ್ಯ ಮಂತ್ರಿಗಳು ಅವರ ರಾಜಕೀಯ ಮಟ್ಟವನ್ನು ಮತ್ತು ನಮ್ಮ ಜನತೆಯ ಜೀವನದ ಮಟ್ಟವನ್ನು, ಬೇರೆ ರಾಜ್ಯದ ನಿರುದ್ಯೋಗತನವನ್ನು, ನಮ್ಮ ರಾಜ್ಯದ ನಿರುದ್ಯೋಗತನವನ್ನು, ಈ ಎರಡನ್ನೂ ಈ ಮಾನ್ಯ ಸಭೆಯಲ್ಲಿ ಇಟ್ಟು ಅಂತಹ ಒಂದು ಹೇಳಿಕೆಯನ್ನು ಕೊಟ್ಟಿದ್ದರೆ ಅದನ್ನು ನಾವು ಬಹಳ ಶ್ಲಾಘನೀಯ ಎಂದು ತಿಳಿಯು ತ್ತಾ ಇದ್ದೆವು. ಆ ವಿಷಯವನ್ನು ಅಲ್ಲಿಗೆ ಬಿಟ್ಟು ಒಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮ ನಕ್ಕೆ ತಮ್ಮ ಮೂಲಕ ಸೂಚಿಸಬಯಸುತ್ತೇನೆ. ಈವೊತ್ತು ವಾಸ್ತವಿಕಾಗಿ ಅದಂತಹ ಬಡ್ಜೆಟ್ಟು ಏನಿದೆ ಅದನ್ನು ನಾವು ಸ್ವಲ್ಪ ಕೂಲಂಕಷವಾಗಿ ನೋಡಿದರೆ ತಮಗೇ ಗೊತ್ತಾಗುತ್ತದೆ ಇದು ಅಂಕಿಅಂಶಗಳಿಂದ ಕೂಡಿದಂತಹ ಒಂದು ಹೇಳಿಕೆ ಅಂತ, ಒಂದು ಪಟ್ಟಿ ಅಂತ ಇದರಲ್ಲಿ ವಾಸ್ತವಿಕತೆ ಏನೂ ಇಲ್ಲ. ಅವರು ವಾಸ್ತವಿಕತೆ ಇರಲಾರದಂತಹ ಬಡ್ಜೆಟ್ಟೇ ಅಥವಾ ಉತ್ತಮವಾದ ಸರಿಯಾ ದಂತಹ ಬಡ್ಜೆಟ್ಟು ಹೌದೇ ಅಲ್ಲವೇ ಎಂಬುದನ್ನು ನಿರ್ಧಾರ ಮಾಡಬೇಕಾದರೆ ಕೆಲವು ಶಾಸ್ತ್ರಜ್ಞರು ಕೆಲವು ನಿಯಮಗಳನ್ನು ಹಾಕಿದ್ದಾರೆ, ಒಂದು ನಿಯಮವನ್ನು ತಮ್ಮ ಗಮನಕ್ಕೆ ತರುತ್ತೇನೆ. ಆ ದೃಷ್ಟಿಯಿಂದ ಇದನ್ನು ಅಳತೆಗೋಲು ಹಾಕಿ ನೋಡೋಣ. ಅವರು ಕೊಟ್ಟಂಥ ಈ ಆಯವ್ಯಯಪತ್ರ ಎಷ್ಟು ಮಟ್ಟಿಗೆ ಉತ್ತಮವಾದದ್ದು ಎಂಬುದನ್ನು ಆ ಅಳತೆಗೋಲಿನಿಂದ ಅಳೆಯುವುದಾದರೆ :

> " To be a good budget, there should not be much deviations between the budget estimates and actuals. If the accounts disclose much deviations from budget, it is bad budget and shows the inability of executive to estimate correctly".

ಇನ್ನು ಕೆಲವು ಅಂಶಗಳನ್ನು ಕೊಡುತ್ತೇನೆ, ಅದು ಈ ರೀತಿಯಾಗಿದೆ:—67-68ರ ಅಂಕಿಅಂಶಗಳನ್ನು ನಾವು ತೆಗೆದುಕೊಂಡರೆ ಅಂದಾಜುಪತ್ರಿಕೆ ಮಾಡಿದ್ದು ಆದಾಯ 185.65 ಕೋಟಿ ರೂಪಾಯಿ, ಖರ್ಚು 177.01 ಕೋಟಿ ರೂಪಾಯಿ. 10.86 ಕೋಟಿ ರೂಪಾಯಿ ಸರ್ಪ್ಲಸ್ ಎಂದು ತೋರಿಸಿ ದ್ದೀರಿ. ಅವರು ಇವತ್ತು ಕೊಟ್ಟಿರತಕ್ಕ ಆಕ್ಚ್ಯುಯಲ್ ಆಕೌಂಟ್ಸ್ ಪ್ರಕಾರ 170.90 ಅನ್ನತಕ್ಕ ಕೆಲವು ಅಂಕಿಅಂಶಗಳನ್ನು ಇಲ್ಲಿ ಕೊಟ್ಟಿದ್ದಾರೆ. ಈ ರೀತಿ ವಾಸ್ತವಿಕವಾಗಿ ವ್ಯತ್ಯಾಸ ಇದ್ದಂಥ ಇನ್ನೂ ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಇವತ್ತು ಬರತಕ್ಕ ಆದಾಯ ಎಷ್ಟು, ಖರ್ಚುಮಾಡಿ ರುವುದು ಎಷ್ಟು ಇದೆ ಅದರಲ್ಲಿ ಡೀವಿಯೇಷನ್ ಅನ್ನುವುದು ತತ್ವದ ಪ್ರಕಾರ 5 ಪರ್ಸೆಂಟಿಗಿಂತ ಹೆಚ್ಚಿರಬಾರದು ಎಂದು ಇದೆ. ಕಡಿಮೆ ಆಗಲಿ ಹೆಚ್ಚಾಗಲಿ 5 ಪರ್ಸೆಂಟ್ ಇರಬೇಕು ಅನ್ನುವುದು

(ಶ್ರೀ ಎಂ. ನಾಗಪ್ಪ)

ಒಂದು ತತ್ವ, ಅದೇ ರೀತಿ ಖರ್ಚುಕೂಡ 5 ಪರ್ಸೆಂಟ್ ಹೆಚ್ಚು ಅಥವಾ ಕಡಿಮೆ ಇರುವುದು ಒಂದು ತತ್ವ, ಈ ಎರಡಕ್ಕು ತಪ್ಪಿ ನೀವು ಮಾಡಿದಂತಹ ಬಡ್ಜೆಟ್ಟು 20ಕೋಟಿ ರೂಪಾಯಿ ವ್ಯತ್ಯಾಸ ಬಂದರೆ ವಾಸ್ತವಿಕವಾಗಿ ಅದು ಸತ್ಯವಾದಂತಹ ಬಡ್ಜೆಟ್ಟೆ ಅಥವಾ ಅಂಕಿಅಂಶಗಳಿಂದ ಕೂಡಿದ ಬಡ್ಜೆಟ್ಟೋ ಅಂತ ಒಂದು ಸಂಶಯ ನಮ್ಮ ಮನಸ್ಸಿನಲ್ಲಿ ಬರುತ್ತದೆ. ಅದು ಅಲ್ಲದೆ ಇನ್ನೊಂದು ಅಂಶವನ್ನು ಹೇಳುತ್ತೇನೆ. Details of the programme have not been finally decided—intended to be worked after settling details—secondly there is some intention of doing work if money is available. ಇದೇ ರೀತಿ ಕೆಲವು ಪುಟಗಳನ್ನು ಓದಿದರೆ ಸ್ಪಷ್ಟವಾಗಿ ಇದರಲ್ಲಿ ಹೇಳಿದ್ದಾರೆ. ಭೂತಲಿಂಗಂ ಕಮಿಟಿಯವರು ಬಂದು, ಅವರ ಆಯೋಗದ ಒಂದು ವರದಿಯನ್ನು ಈ ಸಭೆಗೆ ಕೊಟ್ಟರೆ ಅನಂತರ ಇಂತಿಂಥ ಕೆಲಸಗಳನ್ನು ಮಾಡುವುದಕ್ಕೆ ನಮಗೆ ಯೋಗ್ಯತೆ ಬರುತ್ತದೆ ಎಂದು ಹೇಳಿ ಅಸ್ಪಷ್ಟವಾಗಿ ಹೇಳಿದ್ದಾರೆ. ಯಾವುದೂ ಕೂಡ ಸ್ಪಷ್ಟವಾಗಿ ಇಲ್ಲ. ಅಸ್ಪಷ್ಟವಾದ ನೀತಿಯನ್ನು ಈ ಹೇಳಿಕೆಯಲ್ಲಿ ಕೊಟ್ಟು ನಾವು ಇದನ್ನು ಪಾಸ್ ಮಾಡಬೇಕೆಂದು ಹೇಳಿರುವುದು ಸರಿಯಾದ್ದಲ್ಲ ಎಂಬುದನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ.

ವಾಸ್ತವಿಕವಾಗಿ ನಾವು ಈ ಬಡ್ಜೆಟ್ಟನ್ನು ಕೂಲಂಕಷವಾಗಿ ನೋಡಿದರೆ ಸಾಕಾದಷ್ಟು ವಿಷಯಗಳನ್ನು ಇದು ತೋರಿಸುತ್ತದೆ. ಈಗಾಗಲೇ ನಾನು ಹೇಳಿದೆ ನಾವು ಪಾಸ್ ಮಾಡಿರತಕ್ಕ ಅಂಕಿಅಂಶಗಳು ಮತ್ತು ಅವರು ಕೊಟ್ಟಿರತಕ್ಕ ಅಂಕಿಅಂಶಗಳಲ್ಲಿ ಬಹಳ ವ್ಯತ್ಯಾಸ ಇದೆ. 1968-69 ರಲ್ಲಿ 194 ಕೋಟಿ ಅಂತ ಹೇಳಿ ಅದನ್ನು ರಿವೈಸ್ಡ್ ಎಸ್ಟಿಮೇಟ್ ಅಂತ 215.36 ಕೋಟಿ ಎಂದು ಹೇಳಿದ್ದಾರೆ. ಒಂದೊಂದರಲ್ಲಿ ಒಂದೊಂದು ರೀತಿಯಾಗಿ ಕೊಡತಕ್ಕ ಈ ಅಂಕಿಅಂಶಗಳ ಈ ಪುಸ್ತಕ ಸರಿಯಾದಂತಹ ನಿಮ್ಮ ನೀತಿಯನ್ನು ತೋರಿಸುತ್ತಾ ಇಲ್ಲ ಎಂಬ ಮಾತನ್ನು ನಾನು ಈ ಸಭೆಯಲ್ಲಿ ಹೇಳಬಯಸುತ್ತೇನೆ.

ಈಗ ಹೆಚ್ಚಾಗಿ ವೇಸ್ಟ್ ಅಂದರೆ ಕೊಟ್ಟಂಥ ಹಣ ಸ್ವಲ್ಪವೇ ಆಗಿರಲಿ—ಆದಾಯ 213 ಕೋಟಿ ರೂಪಾಯಿ ಇದ್ದರೆ ಅದರಲ್ಲಿ ಎಷ್ಟು ಮಟ್ಟಿಗೆ ಖರ್ಚು ಮಾಡಿ ಅದರ ಲಾಭಪಡೆಯಬೇಕೆನ್ನುವುದನ್ನು ನಾವು ಯೋಚನೆ ಮಾಡಿದರೆ ಈಗಿರತಕ್ಕ ಸರ್ಕಾರ ಅದಕ್ಕೆ ಸರಿಯಾದಂತಹ ಆಡಳಿತೆಯನ್ನು ಇಟ್ಟುಕೊಂಡಿಲ್ಲ ಮತ್ತು ಸರಿಯಾದಂತಹ ಹಣಕಾಸಿನ ಖರ್ಚಿನ ಪರಿಸ್ಥಿತಿಯನ್ನು ಇಟ್ಟುಕೊಂಡಿಲ್ಲ ಅಥವಾ ನೂರಕ್ಕೆ ಮೂವತ್ತರಷ್ಟಾದರೂ ಅಪವ್ಯಯವಾಗುತ್ತಿದೆ ಎಂಬ ಮಾತನ್ನು ನಾನು ನನ್ನ ಶಬ್ದಗಳಲ್ಲಿ ಅಲ್ಲ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕೊಟ್ಟಂಥ ಅನೇಕ ವಿಷಯಗಳಿಂದ ಹೊರಪಡಿಸುತ್ತೇನೆ, ಅದನ್ನು ತಮ್ಮ ಮುಂದೆ ಇಡುತ್ತೇನೆ :

> "It is not clear to the Committee how two experts common to both committees could change their opinion from committee to committee. They have before them the opinions of the two committees. The executive committee has also erred in overlooking the inconsistency in the opinion of the two expert committees. This should have been got reconciled and reasons for preferring costlier sample should have been recorded by the S.P.C.
>
> In the opinion of the Committee the transaction is not free from doubt and the Committee desire that the Government may look into this matter and fix responsibility for the extra expenditure of Rs. 30,800 as pointed out by the audit."

ಇಂಥಾದ್ದು ಒಂದಲ್ಲ, ಅನೇಕ ವಿಷಯಗಳು ಇವೆ. ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಎರಡು ಲಕ್ಷ ಐದು ಸಾವಿರ ರೂಪಾಯಿ ಇದ್ದಂಥ ಮೊತ್ತವನ್ನು ಯಾವ ದೃಷ್ಟಿಯಿಂದ ಉಪಯೋಗಿಸಿದ್ದಾರೆ ಎಂಬುದನ್ನು ಈ ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್‌ನಲ್ಲಿ ನೋಡಬಹುದು. ಅದು ಈ ರೀತಿ ಇದೆ :

> "The Committee have also reiterated the earlier observation that there was bad planning and want of seriousness on the

part of departmental officers and Government should fix responsibility for the expenditure of 55,000 infructuously incurred earlier cost more than 2.05 lakhs in the present case."

ಮೊದಲು 55 ಸಾವಿರ ರೂಪಾಯಿ ಆದ ಖರ್ಚೇ ವಾಸ್ತವವಾಗಿ ಆಗಿಲ್ಲ, ಮತ್ತೆ 2.05 ಲಕ್ಷ ರೂಪಾಯಿಗಳನ್ನು ಅವ್ಯವಸ್ಥಿತವಾಗಿ ಖರ್ಚುಮಾಡಿದೆ. ಈ ರೀತಿ ಕೋಟಿ ಗಟ್ಟಲೆ ರೂಪಾಯಿ ಅವ್ಯವಸ್ಥಿತವಾಗಿ ಖರ್ಚುಮಾಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಅದಕ್ಕೇ ನೀವು ಕೊಟ್ಟಂಥ ಅಂಕಿಅಂಶಗಳಿಂದ ವಾಸ್ತವಿಕವಾಗಿ ಇರತಕ್ಕ ಸ್ಥಿತಿ ಬದಲಾಯಿಸುವುದಿಲ್ಲ. ವಾಸ್ತವಿಕವಾಗಿ ಕೊಟ್ಟಂಥ ಹಣದ ಉಪಯೋಗ ಎಷ್ಟುಮಟ್ಟಿಗೆ ಆಗುತ್ತಿದೆ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಇವತ್ತು ನಮ್ಮ ದೇಶದಲ್ಲಿ ಕಾಂಗ್ರೆಸ್ ರಾಜಕೀಯ ಬಂದು ಸಾಧಾರಣ 22 ವರ್ಷವಾಯಿತು. 22 ವರ್ಷದಿಂದ ಸತತವಾಗಿ ರಾಜಕೀಯವನ್ನು ಆಳುತ್ತಾ ಇದ್ದಾರೆ, ತಮ್ಮ ನೀತಿ ಏನು ? ತಮ್ಮದೇ ಆದಂಥ ಒಂದು ನೀತಿ ಎಂದರೆ ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿ ಮಾಡಬೇಕೆನ್ನುವುದು ತಮ್ಮ ಉದ್ದೇಶ. ಇವತ್ತು ಏನಾಗಿದೆ ಎಂದರೆ ಪಬ್ಲಿಕ್ ಸೆಕ್ಟರ್‌ನಲ್ಲಿ—ಹಿಂದೆ ಮೈಸೂರು ಮಹಾರಾಜರ ಕಾಲದಲ್ಲಿ ನಡೆದಿರತಕ್ಕ ಎಷ್ಟೋ ಸಂಘ ಸಂಸ್ಥೆಗಳು, ಫ್ಯಾಕ್ಟರಿಗಳು ಏನಿದ್ದವು ಅವಕ್ಕೆ ಇವತ್ತು ನಿಮಗೆ ನಡೆಸತಕ್ಕ ಯೋಗ್ಯತೆ ಇಲ್ಲ ಎಂಬ ಯಾವುದೋ ಒಂದು ನೆಪದಿಂದ ತಮಗೆ ಬೇಕಾದ ಅಧಿಕಾರಿಗಳನ್ನು ಅಲ್ಲಿ ನೇಮಕ ಮಾಡುವುದು ಮತ್ತು ಅಲ್ಲಿರತಕ್ಕ ಕೂಲಿಗಾರರು ಮತ್ತು ಅದನ್ನು ನಡೆಸತಕ್ಕ ಅಡ್ಮಿನಿಸ್ಟ್ರೇಟರುಗಳ ನಡುವೆ ಜಗಳ ಉಂಟುಮಾಡುವುದು, ಸರಿಯಾದಂತಹ ಲೆಕ್ಕಪತ್ರ ಇಲ್ಲ, ತನಿಖೆಯಾಗುತ್ತಾ ಇದೆ, ಅದಕ್ಕೆ ಯಾರು ಜವಾಬ್ದಾರರು ಎಂಬ ಮಾತುಗಳನ್ನು ಆಡುತ್ತಾ ಇರುವುದನ್ನು ನೋಡಿದರೆ ಸರ್ಕಾರ ಇವತ್ತು ಪಬ್ಲಿಕ್ ಸೆಕ್ಟರ್‌ನಲ್ಲಿ ಅನುಸರಿಸುತ್ತಾ ಇರತಕ್ಕ ಮಾರ್ಗ ತಪ್ಪು. ಪ್ರೈವೇಟ್ ಸೆಕ್ಟರ್‌ಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕು ಎನ್ನತಕ್ಕ ತತ್ವವನ್ನು ಈ ಸಭೆಯಲ್ಲಿ ಅನೇಕ ಸಾರಿ ಮಾತನಾಡಿದ್ದೇನೆ.

4-00 P.M.

ಆದರೆ ಒಂದು ವಿಷಯವನ್ನು ಮಾತ್ರ ಬಿನ್ನೈಸುತ್ತೇನೆ. ಒಂದು ಸಾರಿ ಹಿಂದೆ ರೆಮ್'ಕೊ ಕಂಪನಿ ಬಗ್ಗೆ ಪ್ರಶ್ನೆ ಬಂದಾಗ್ಗೆ ನಮಗೆ ಎಷ್ಟು ಕಷ್ಟ ಬಂದರೂ ಅದನ್ನು ನಡೆಸುತ್ತೇವೆಂದು ಮಾನ್ಯ ಹಣಕಾಸಿನ ಮಂತ್ರಿಗಳು ಆ ದಿವಸ ಹೇಳಿದರು. ಈಗ ಒಂದು ವರ್ಷದ ಮೇಲೆ ಇಷ್ಟು ವರ್ಷಗಳು ಇವರು ಹೇಳದೇ ಇದ್ದ ಮಾತನ್ನು ಈ ಸಭೆಯಲ್ಲಿ ಹೇಳಿದ್ದಾರೆ. ಮೊನ್ನೆ 24ನೇ ತಾರೀಖಿನಲ್ಲಿ ಇವರು ತಮ್ಮ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅರ್ಬನ್ ಪಾಪ್ಯುಲೇಷನ್ನಿಗೆ ಟ್ಯಾಕ್ಸೇಷನ್ ಹಾಕುವ ಸಂದರ್ಭದಲ್ಲಿ ನಮ್ಮ ಪರ್ ಕ್ಯಾಪಿಟಾ ಇನ್‌ಕಂ ನ್ಯಾಷನಲ್ ಪರ್ ಕ್ಯಾಪಿಟಾ ಇನ್‌ಕಂಗಿಂತ ಕಡಿಮೆ ಇಲ್ಲವೆಂದು ಹೇಳಿದ್ದಾರೆ. ಅದನ್ನು ಯಾವ ಒಂದು ಆಧಾರದ ಮೇಲೆ ಹೇಳಿದ್ದಾರೋ ಗೊತ್ತಿಲ್ಲ. ಕೇಂದ್ರದ ಹಣಕಾಸಿನ ಮಂತ್ರಿಗಳು ದೆಹಲಿಯಲ್ಲಿ 24ನೇ ತಾರೀಖಿನಲ್ಲಿ ಒಂದು ಮಾತನ್ನು ಹೇಳಿದ್ದಾರೆ. ರಾಷ್ಟ್ರದ ಪರ್ ಕ್ಯಾಪಿಟಾ ಇನ್‌ಕಂಗಿಂತ ಕೆಲವು ರಾಜ್ಯಗಳ ಪರ್ ಕ್ಯಾಪಿಟಾ ಇನ್‌ಕಂ ಕಡಿಮೆಯಾಗಿ ಬಹಳ ಕೆಟ್ಟ ಪರಿಸ್ಥಿತಿಯಲ್ಲಿದೆ. ಐದಾರು ರಾಜ್ಯಗಳಲ್ಲಿ ಅದು ಹೆಚ್ಚಿದೆಯೆಂದು ಹೇಳಿದ್ದಾರೆ. ಅವರು ನ್ಯಾಷನಲ್ ಪರ್ ಕ್ಯಾಪಿಟಾ ಇನ್‌ಕಂ 422 ಎಂದು ಕೊಟ್ಟಿದ್ದಾರೆ. Highest per capita income in the country is in Punjab, Maharashtra, Gujarat, Hariyana, West Bengal. Lowest in Bihor, U.P., Rajasthan, M. P., Jammu and Kashmir, Kerala, Orissa and Mysore. ಅಂದಮೇಲೆ ನಮ್ಮ ಮಂತ್ರಿಗಳು ಕೊಟ್ಟ ಅಂಕಿ ಅಂಶ ಸರಿಯೋ ಅಥವಾ ಕೇಂದ್ರ ಸರ್ಕಾರದವರು ಕೊಟ್ಟ ಅಂಕಿ ಅಂಶ ಸರಿಯೋ ಗೊತ್ತಿಲ್ಲ. ಇನ್ನು ಪ್ಲಾನಿಂಗ್ ಕಮಿಷನ್ ಬಂದಾಗ್ಗೆ ನಮ್ಮ ಸರ್ಕಾರದವರು ನಮ್ಮಲ್ಲಿ ರಿಸೋರ್ಸಸ್ ಬಹಳ ಇದೆ ಅಷ್ಟು ಹೆಚ್ಚಿಸಬಹುದು, ಇಷ್ಟು ಹೆಚ್ಚಿಸಬಹುದು ಎಂದು ಹೇಳುತ್ತಾರೆ. ಫೈನಾನ್ಸ್ ಕಮಿಷನ್ ಬಂದಾಗ ನಮಗೆ ಹೆಚ್ಚು ಅಲಾಟ್‌ಮೆಂಟ್ ಮಾಡಿ ಎಂಬುದಾಗಿ ಹೇಳುತ್ತಾರೆ. ಹೀಗೆ ಎರಡು ತತ್ವಗಳನ್ನು ಇಟ್ಟುಕೊಂಡು ಆಡಳಿತ ನಡೆಸುತ್ತಿದ್ದಾರೆ. ಒಂದು ಕಡೆ ಪರ್ ಕ್ಯಾಪಿಟಾ ಇನ್‌ಕಂ ಹೆಚ್ಚಿದೆ ಎಂದು ಹೇಳುತ್ತೀರಿ, ಇನ್ನೊಂದು ಕಡೆ ಅದು ಕಡಿಮೆ ಇದೆಯೆಂದು ಹೇಳುತ್ತೀರಿ ಹೀಗೆ ಒಂದಕ್ಕೊಂದು ವಿರುದ್ಧವಾಗಿ ಹೇಳಿದರೆ ನಿಮ್ಮ ಆರ್ಥಿಕ ನೀತಿ ಇನ್ನು ಯಾವ ಮಟ್ಟಕ್ಕೆ ಮುಟ್ಟುತ್ತದೋ ಗೊತ್ತಿಲ್ಲ. ಈ ಒಂದು ಹಣಕಾಸಿನ ನೀತಿಯನ್ನು ಸುಮಾರು 20 ವರ್ಷಗಳಿಂದಲೂ ಸತತವಾಗಿ ನಾವು ಟೀಕಿಸಿದರೂ ಅದರ ಕಡೆ ನೀವು ಗಮನ ಕೊಟ್ಟಿಲ್ಲ. ಪ್ರಜಾಸತ್ತಾತ್ಮಕವಾದ ರಾಜಕೀಯ ಮಾಡುತ್ತೇವೆಂದು ಹೇಳಿ ಇಷ್ಟುಮಟ್ಟಿಗೆ ದುಡ್ಡು ಹಾಳಾಗಿ ಹೋಗಿದೆ. ಇತ್ತೀಚೆಗೆ

(ಶ್ರೀ ಎಂ. ನಾಗಪ್ಪ)

ಬಂದಂಥ ನ್ಯಾಷನಲ್ sample ಸರ್ವೆ ರಿಪೋರ್ಟ್‌ನಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಅದರಲ್ಲಿ 1952ರಲ್ಲಿ ಈ ದೇಶದಲ್ಲಿ ಯಾವ ಪರಿಸ್ಥಿತಿ ಇತ್ತು, ಎಷ್ಟು ಬಡತನವಿತ್ತು, ಈವೊತ್ತು 1969 ರಲ್ಲಿ ನಮ್ಮ ಸ್ಥಿತಿ ಯಾವರೀತಿ ಇದೆ ಎಂದು ಹೇಳಿದ್ದಾರೆ. ಅದು ಈ ರೀತಿ ಇದೆ: A third of the Indian population live in absolute poverty spending Rs. 15 in rural areas and Rs. 25 in urban areas despite the substantial economic growth in the country during the last 20 years. ಅವರು ಮೈಸೂರು ರಾಜ್ಯದ ಹಣಿಯ ಬರಹವೇನೆಂಬುದನ್ನು ಬರೆದಿದ್ದಾರೆ. ಅದು ಈ ರೀತಿ ಇದೆ. The proportion of people with an expenditure of less than a rupee a day has remained almost the same at over 80 per cent since 1952. 1952ರಿಂದ ಇವೊತ್ತಿನವರೆಗೂ ನಮ್ಮ ಪರ್‌ಕ್ಯಾಪಿಟಾ ಇನಕಂ ಒಂದು ರೂಪಾಯಿ ಆಗಿಯೇ ಉಳಿದಿದೆ. ಏನೂ ಹೆಚ್ಚಾಗಿಲ್ಲ. The National Survey Report of 1963-64 showed that out of 467 million people, 162 million people are accounted for a per capita income of less than Rs. 15 in rural areas and Rs. 24 in urban areas. ಅಮೇಲೆ ಯಾವ್ಯಾವ ರಾಜ್ಯದಲ್ಲಿ ಬಡತನ ಹೆಚ್ಚಾಗಿದೆ ಎಂಬ ಬಗ್ಗೆ ಅಂಕಿಅಂಶಗಳನ್ನು ಹೇಳಿದ್ದಾರೆ. ಅದರಲ್ಲಿ ಮೊದಲನೆಯ ರಾಜ್ಯ ಕೇರಳ, ಎರಡನೆಯ ರಾಜ್ಯ ಅಂದರೆ ಮೈಸೂರು ಎಂಬುದಾಗಿ ಹೇಳಿದ್ದಾರೆ. ಕೇರಳದಲ್ಲಿ ಸೇಕಡ 44.5ರಷ್ಟಿದೆ. ಮೈಸೂರಿನಲ್ಲಿ ಸೇಕಡ 44ರಷ್ಟು ಇದೆ. ಅಂದರೆ, ನಮ್ಮ ನೀತಿ ಬಹಳ ಉತ್ತಮವಾಗಿದೆಯೇ? ನಮಗಿಂತ ಸಾಕಷ್ಟು ಉತ್ತಮ ರಾಜ್ಯಗಳು ಇನ್ನೂ ಅನೇಕವಿವೆ. ಬೇರೆ ರಾಜ್ಯಗಳನ್ನು ಟೀಕಿಸುವುದು ಬೇಡ. ವಾಸ್ತವಿಕವಾಗಿ ನಿಮ್ಮ ಪರಿಸ್ಥಿತಿ ಏನಿದೆಯೆಂಬುದನ್ನು ತಾವು ನೋಡಬೇಕು. 20 ವರ್ಷಗಳಿಂದ ಸತತವಾಗಿ ರಾಜ್ಯಾಡಳಿತವನ್ನು ಮಾಡಿ ನಮ್ಮ ಮಟ್ಟವನ್ನು ಇಲ್ಲಿಗೆ ತಂದಿದ್ದೀರಿ. ಜನಜೀವನದಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ ಇದಕ್ಕೆ ದುಡ್ಡಿನ ಅಪವ್ಯಯವೇ ಕಾರಣ. ಮಾನ್ಯ ಶ್ರೀ ಡಿ. ದೇವರಾಜ್ ಅರಸ್ ಅವರು ಇಂತಹ ತೆರಿಗೆಗಳನ್ನೇ ಹಾಕಿ ಎಂದು ಸದಸ್ಯರು ಏಕೆ ಹೇಳುವುದಿಲ್ಲ ಎಂದು ಕೇಳಿದರು. ನಾನು ವಾಸ್ತವಿಕವಾಗಿ ಅವರ ಮಾತನ್ನು ಸ್ವಲ್ಪಮಟ್ಟಿಗೆ ಒಪ್ಪಿದರೂ ಒಂದು ಮಾತನ್ನು ಅವರಿಗೆ ಹೇಳುತ್ತೇನೆ. ಇವತ್ತು ನೀವು ನಡೆಸತಕ್ಕ ಆಡಳಿತವನ್ನು ಸರಿಪಡಿಸಿ. ಆಗ ನಿಮ್ಮಲ್ಲಿ ಬರತಕ್ಕ ಹಣ ಸೋರಿಹೋಗುವುದಿಲ್ಲ. ಪ್ರಾಮಾಣಿಕತೆಯಿಂದ ಕೂಡಿದಂಥ ಸಿಬ್ಬಂದಿಯನ್ನು ನೇಮಕಮಾಡಿ. ಸರಿಯಾದ ರೀತಿಯಲ್ಲಿ ಖರ್ಚುಮಾಡತಕ್ಕ ವ್ಯವಸ್ಥೆಮಾಡಿ. ಇಲ್ಲದಿದ್ದರೆ ಬಿಲದಲ್ಲಿ ಹೆಗ್ಗಣಗಳು ಸೇರಿಕೊಂಡಂತೆ ಅವರು ಸೇರಿಕೊಂಡು ವಾಸ್ತವಿಕವಾಗಿ ಬೇಕಾದಷ್ಟು ದುಡ್ಡನ್ನು ಹಾಳುಮಾಡುತ್ತಾರೆಂದು ಹೇಳುತ್ತೇನೆ. ಇವತ್ತು ಯಾವ ತೆರಿಗೆಯನ್ನು ಹಾಕಬಹುದು ಎಂಬುದನ್ನು ಸರ್ಕಾರದವರು ದೀರ್ಘವಾಗಿ ಹಾಗೂ ಕೂಲಂಕಷವಾಗಿ ಯೋಚನೆಮಾಡಬೇಕು. ಸೇಕಡ 30ರಷ್ಟು ಹಣ ಇವರು ಲೂಟಿಮಾಡುತ್ತಿದ್ದಾರೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರ ವರದಿಯ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. ನ್ಯಾಷನಲ್ ಪರ್ ಕ್ಯಾಪಿಟ ಇನ್‌ಕಂ ನೋಡಿದರೆ ನಾವು ಬಡವರಾಗಿದ್ದೇವೆ. ಈ ದೇಶದಲ್ಲಿ ಮೂರನೆ ಒಂದು ಭಾಗದಷ್ಟು ಜನ ಆ ಬಡತನದಲ್ಲಿ ಸೇರಿದೆ.

ಇನ್ನು ತಾವು 36 ಇರ್ರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಬಹಳ ಸಂತೋಷ. ಆದರೆ ತಿರುಪತಿ ಕ್ಷೌರದಂತೆ, ಯಾರು ಬಂದರೆ ಅವನಿಗೆ ಕತ್ತಿ ಹಾಕುವುದು ಬೇಡ. ಎಲ್ಲೋ ಒಂದು ಕಲ್ಲು ಹಾಕುವುದು, ಜನ ಆ ಕಲ್ಲನ್ನೇ ನೋಡುತ್ತಿರುವುದು. ಇಂಥಾದ್ದು ಪ್ರಾಜೆಕ್ಟ್‌ಗಳು ಆಗುತ್ತಿವೆ. 36 ಪ್ರಾಜೆಕ್ಟ್‌ಗಳ ಪೈಕಿ, ಮೂರು ಪ್ರಾಜೆಕ್ಟ್‌ಗಳನ್ನಾದರೂ ಕಟ್ಟುವುದಕ್ಕೆ ಇವರಿಗೆ ಶಕ್ತಿ ಇದೆಯೇ? ಇವತ್ತು ಅಪ್ಪರ್‌ಕೃಷ್ಣಾ ಯೋಜನೆಯ ಮೊದಲನೆಯ ಹಂತಕ್ಕೆ 75 ಕೋಟಿ ರೂಪಾಯಿಗಳು ಬೇಕೆಂದು ಹೇಳಿದರು. ಅಲಾಟ್‌ಮೆಂಟ್ 2 ಕೋಟಿ, ಅದರಲ್ಲಿಯೇ ಮುಗಿಸಿ ಅಂದರೆ ನಿಮ್ಮ ಯೋಜನೆ ಎಲ್ಲಿ ಹೋಗುತ್ತದೆ?

ಇನ್ನು ಇರ್ರಿಗೇಷನ್ನಿನಲ್ಲಿ ಬಹಳ ಮುಂದುವರಿದ್ದೇವೆಂದು ಹೇಳುತ್ತಾರೆ. ಅದು ನ್ಯಾಷನಲ್ ಪರ್ಸೆಂಟ್ ಎಷ್ಟು ಅಂದರೆ ಸೇಕಡ 20ರಿಂದ 30ಕ್ಕೆ ಮುಟ್ಟಿದೆ. ನಿಮ್ಮದು ಸೇಕಡ 9-10 ರಲ್ಲಿದೆ. ಇವರು ಖರ್ಚುಮಾಡಿದ್ದರಲ್ಲಿ ಎಷ್ಟು ಉತ್ಪತಿ ಬಂದಿದೆ ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ ಎಷ್ಟು ಮಟ್ಟಿಗೆ ಆಗಿದೆ ಎಂದು. ಆದ್ದರಿಂದ ನೀವು ಸರಿಯಾದ ನೀತಿಯನ್ನು ಅನುಸರಿಸುತ್ತಿಲ್ಲ, ನೀವು ಪ್ರತಿಯೊಂದು ವಿಷಯದಲ್ಲೂ ರಾಜಕೀಯವನ್ನು ಮಾಡುತ್ತಿದ್ದೀರಿ. ಕೋಆಪರೇಟಿವ್ ಸೆಕ್ಟರ್‌ನಲ್ಲಿ 100ಕ್ಕೆ 55 ಸೊಸೈಟಿಗಳು ಇವೊತ್ತಿನ ದಿವಸ ಲಿಕ್ವಿಡೇಟ್ ಆಗುವ ಸ್ಥಿತಿಗೆ ಬಂದಿವೆ.

ಪ್ರಪಂಚದ ಎಲ್ಲಾ ಭಾಗಗಳಿಂದಲೂ ಸಾಲ ತಂದು ಕೊಡುತ್ತಿದ್ದಾರೆ. ರಿಲೀಫ್ ಕಾಮಗಾರಿಗಳ ಅಂಕಿ ಅಂಶಗಳನ್ನು ಮೊನ್ನೆ ಒದಗಿಸಿದ್ದೀರಿ. ಇವತ್ತು ಕೋಆಪರೇಟಿವ್ ಸಂಸ್ಥೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಪೊಲಿಟಿಕಲ್ ಪೆನ್‌ಷನರನ್ನು ನೇಮಿಸುತ್ತಿದ್ದೀರಿ. ಅಂಥ ಜನರಿಗೋಸ್ಕರ ನೀವು ಇಂಥ ಕೋಆಪರೇಟಿವ್ ಸೊಸೈಟಿಗಳನ್ನು ಮಾಡುತ್ತಿದ್ದೀರಿ ಎಂದು ಕಾಣುತ್ತದೆ. ಈವೊತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಬಾವಿಗಳಿಗೋಸ್ಕರ ಎಷ್ಟೋ ಹಣವನ್ನು ಕೊಡುತ್ತಿದ್ದೀರಿ. ಈಗ 4-5 ವರ್ಷವಾದರೂ 40 ಬಾವಿಗಳೂ ಕೂಡ ಆಗುತ್ತಾ ಇಲ್ಲ. ಕೊಟ್ಟ ದುಡ್ಡಿನ ಕಾಲು ಭಾಗ ಕೂಡ ಕೆಲಸ ಆಗುತ್ತಿಲ್ಲ; ಆದರೆ 64 ಫ್ಯಾಮಿನ್ ಕೋಡಿನಲ್ಲಿ ಏನು ಕೊಟ್ಟಿದ್ದೀರಿ, ಅಲ್ಲಿ ನೂರಕ್ಕೆ 80 ಭಾಗದಷ್ಟು ಕೆಲಸ ಕೈಗೂಡಿದೆ. ಇವತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಬಂದರೆ, ಏಕೆ ಅವನು ಸದ್ವಿನಿಯೋಗ ಮಾಡುತ್ತಾ ಇಲ್ಲ. ಈ ಕೋಆಪರೇಟಿವ್ ತತ್ತ್ವ ಏನಿದೆ, ''ಎಲ್ಲರಿಗಾಗಿ ನಾನು'' ಎಂಬುದು, ಇವತ್ತು ''ನನಗಾಗಿ ಎಲ್ಲರೂ''iಎಂದು ಆಗಿದೆ. ಇವತ್ತಿನ ದಿವಸ ಕೋಆಪರೇಟಿವ್ ಹಣವನ್ನು ಸಾಲ ಕೊಟ್ಟು ಅದರಿಂದ ಪ್ರೈವೇಟ್ ಮನಿ ಲೆಂಡರ್ ಬಡ್ಡಿ ಸಂಪಾದನೆ ಮಾಡಿದ ಹಾಗೆ, ಬಡ್ಡಿ ಸಂಪಾದನೆ ಮಾಡುತ್ತಿರುವ ಜನರೇ ಬಹಳ ಜಾಸ್ತಿಯಾಗಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಅಂದಮೇಲೆ ನಿಮ್ಮ ಕೋಆಪರೇಟಿವ್ ಸೆಕ್ಟರ್ ಎಲ್ಲಿದೆ, ನಿಮ್ಮ ಇರಿಗೇಷನ್ ಪ್ರೊಜೆಕ್ಟ್ ಎಲ್ಲಿದೆ ? ಇವೆಲ್ಲಾ ಕೂಲಂಕಷವಾಗಿ ನೋಡಿಕೊಂಡರೆ ನಮ್ಮ ದೇಶ ಇವತ್ತು ಯಾವ ಸ್ಥಿತಿಗೆ ಬಂದಿದೆ ಎಂದು ಗೊತ್ತಾಗುತ್ತದೆ. ಶ್ರೀಮಾನ್ ದೇವರಾಜ್ ಅರಸರು ಹೇಳುತ್ತಿದ್ದರು ನಮಗೆ ಪೋಲೀಸ್ ಇರದಿರುತ್ತಿದ್ದರೆ, ಮಹಾರಾಷ್ಟ್ರದಲ್ಲಿ ರಕ್ಷಣೆ ಸಿಗುತ್ತಾ ಇರಲಿಲ್ಲವೆಂದು. ನಾನು ಕೇಳುತ್ತೇನೆ, ಇವತ್ತು ನೀವು ಆಳತಕ್ಕ ರಾಮರಾಜ್ಯವು ರಾಕ್ಷಸ ರಾಜ್ಯವಾಗಿದೆ. ಇವತ್ತು ನೀವು ಅದರ ಬದಲು ಪೋಲೀಸ್ ರಾಜ್ಯವನ್ನು ಮಾಡುತ್ತಿದ್ದೀರಿ. ಇದನ್ನು ನಿಮಗೋಸ್ಕರ ಇಟ್ಟಿದ್ದೀರಿ. ಇವರೆಲ್ಲಾ ನಿಮ್ಮ ರಕ್ಷಣೆಯನ್ನು ಮಾಡಬೇಕು. ಇದಕ್ಕೆ ನೀವು 1947ರಿಂದ ಹಿಂದೆ ಇದ್ದಂತಹ ಡೇಟಾಸ್ ಕೊಡಿ, ಆಗ ಹಿಂದೆ ಇದ್ದಂತಹ ಪೋಲೀಸ್ ಆಡಳಿತವನ್ನೂ ಮತ್ತು ಈಗಿರತಕ್ಕ ಆಡಳಿತವನ್ನೂ ಹೋಲಿಸಿ ನೋಡಿ, ಆಗ ಗೊತ್ತಾಗುತ್ತದೆ. ಇವತ್ತೂ ಬೆಂಗಳೂರಿನಲ್ಲಿ ಮನೆ ಬೀಗ ಹಾಕಿ ಹೋಗುವುದೇ ಕಷ್ಟವಾಗಿದೆ. ವಾಪಾಸು ಬಂದಾಗ ಮನೆಯ ಸಾಮಾನು ಯಾವುದೂ ಇರುವುದಿಲ್ಲ. ಒಮ್ಮೆ ರೆವೆನ್ಯೂ ಅಪಲೇಟ್ ಟ್ರಿಬ್ಯೂನಲ್ಲಿನ ಕ್ಲಾರ್ಕ್ Tourಗೆ ರಾಯಚೂರಿಗೆ ಬಂದಾಗ, ಅಲ್ಲಿ ಅವರಿಗೆ ಒಂದು ಟೆಲಿಗ್ರಾಮ್ ಬಂತು, ಏನೆಂದರೆ, ನಿಮ್ಮ ಮನೆಯಲ್ಲಿರುವ ಸಾಮಾನೆಲ್ಲಾ ಕಳವಾಗಿದೆ ಎಂದು. ಈ ರೀತಿ ಇದೆ ಪರಿಸ್ಥಿತಿ. ಇದರಿಂದ ನಿಮ್ಮ ಪೋಲೀಸರ ದಕ್ಷತೆ ಎಷ್ಟು ಇದೆ ಎಂದು ಗೊತ್ತಾಗುತ್ತದೆ. ಎಲ್ಲ Project ಗಳನ್ನು ಮಾಡುವುದಕ್ಕಾಗದಿದ್ದರೆ, ನೀವು ಪ್ರಿಫರೆನ್ಸ್ ಕೊಟ್ಟು ಕೆಲವನ್ನು ಮಾಡಿ. ಇವುಗಳನ್ನು ಒತ್ತಡಕ್ಕೆ ಬಿದ್ದು ಮಾಡಬೇಡಿ.

ಅಪ್ಪರ್ ಕೃಷ್ಣಾ ರೈಟ್ ಬ್ಯಾಂಕ್ ಕೆನಾಲ್ ತೆಗೆದುಕೊಳ್ಳುತ್ತೇವೆಂದು ಹೇಳಿಕೆ ಕೊಟ್ಟರು. ಇವತ್ತು ಅಡ್ವಾನ್ಸ್ ಕಾಂಟ್ರಿಬ್ಯೂಶನ್ ಕೊಡುತ್ತೇವೆಂದು ಜನರು ಹೇಳುತ್ತಿದ್ದಾರೆ. ಆದರೆ, ಇವರು ಮಾಡುತ್ತಿರುವುದು ಲೆಫ್ಟ್ ಬ್ಯಾಂಕ್ ಕೆನಾಲ್ ಲೆಫ್ಟ್ ಬ್ಯಾಂಕ್ ಕೆನಾಲನಲ್ಲಿ 75 ಪರ್‌ಸೆಂಟ್ ಬರತಕ್ಕದ್ದು ಕಪ್ಪು ಭೂಮಿ. ಆದರೆ ರೈಟ್ ಬ್ಯಾಂಕ್‌ನಲ್ಲಿ ಬರತಕ್ಕದ್ದು ಕೆಂಪು ಭೂಮಿ ; ಮತ್ತು ಅದರ ಫಲ ತೀವ್ರವಾಗಿ ಬರುತ್ತದೆ. ಅದಕ್ಕೆ ಬೇಕಾದರೆ ಒಂದು ಕಮಿಶನ್ ಮಾಡಿ ಪರಿಶೀಲನೆ ಮಾಡಿ, ಅವರು ಒಂದು ಸರಿಯಾದ ತೀರ್ಪು ಕೊಡಲಿ, ನಾನು ಒಪ್ಪಿಕೊಳ್ಳುತ್ತೇನೆ. ಬೇರೆ ಯಾವ ಕಾರಣಗಳನ್ನು ಹೇಳಬೇಡಿ. ಇವತ್ತು ಪಟ್ಟಣದಲ್ಲಿ ಈಗಾಗಲೇ ಟ್ಯಾಕ್ಸೇಶನ್ ಹೆಚ್ಚಾಗಿದೆ ಎಂದು ಹೇಳುತ್ತಾರೆ. ಮಾನ್ಯ ಮಂತ್ರಿಯವರಿಗೆ ಒಂದು ಮಾತು ಹೇಳುತ್ತೇನೆ. ಇವತ್ತಿನ ದಿವಸ ಲ್ಯಾಂಡ್ ಸೀಲಿಂಗ್ ಮಾಡಿದ್ದಾರೆ. ಆದರೆ ಪಟ್ಟಣಗಳಲ್ಲಿ ಒಬ್ಬೊಬ್ಬರು 10-20 ಮನೆಗಳನ್ನು ಕಟ್ಟಿಕೊಂಡು ಹೋಗುತ್ತಿದ್ದಾರೆ. ಇವನ್ನೆಲ್ಲಾ ಬ್ಲಾಕ್ ಹಣದಲ್ಲಿ ಕಟ್ಟುತ್ತಿದ್ದಾರೆ. ಇದನ್ನು ಯಾರೂ ಕೇಳುವವನಿಲ್ಲದಾಗಿದೆ. ಆದ್ದರಿಂದ ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿ, ಅಲ್ಲಿ ಹಣ ಪಡೆಯಲಿಕ್ಕೆ ಸಾಧ್ಯವಿದ್ದರೆ ನೋಡಬೇಕು. ಪಟ್ಟಣದಲ್ಲಿ ಇನ್ನೂ ಸಾಕಷ್ಟು ಟ್ಯಾಕ್ಸೇಶನ್ ಹಾಕಲಿಕ್ಕೆ ಬರುತ್ತದೆ. ಇವತ್ತು ದುಡ್ಡು ಖರ್ಚು ಮಾಡತಕ್ಕದ್ದು ಪಟ್ಟಣಗಳಲ್ಲಿ ಜಾಸ್ತಿ. ನಮ್ಮ ಹಣದಲ್ಲಿ 100ಕ್ಕೆ 70 ಭಾಗ ಪಟ್ಟಣಗಳಿಗೆ ಖರ್ಚಾಗುತ್ತಿದೆ, ಮತ್ತು ಕೇವಲ 30 ಭಾಗ ಮಾತ್ರ ಹಳ್ಳಿಗಳಿಗೆ ಖರ್ಚಾಗುತ್ತಿದೆ. ಹಳ್ಳಿಯ ಜನರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡದೆ, ಅವರಮೇಲೆ ಪುನಃ ಟ್ಯಾಕ್ಸ್ ಹಾಕತಕ್ಕದ್ದು ಸರಿಯಲ್ಲ. ಬೇಕಾದರೆ, 100 ಎಕರೆಗಿಂತ ಹೆಚ್ಚು ಇಟ್ಟುಕೊಂಡಿರುವವರಿಗೆ ಟ್ಯಾಕ್ಸ್ ಹೆಚ್ಚು ಹಾಕಿ, ನಮ್ಮ ಅಭ್ಯಂತರವಿಲ್ಲ. ಆದರೆ ಬಡ ರೈತನಿಗೆ, ಈ ತೆರಿಗೆ, ಆ ತೆರಿಗೆ ಎಂದು, ತೊಂದರೆ ಕೊಡುವುದು ಸರಿಯಲ್ಲ ಮತ್ತು ಅದನ್ನು ಮಾಡಬಾರದು ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ನಮ್ಮ ಹಣಕಾಸಿನ ಸಚಿವರು ಮಂಡಿಸಿರತಕ್ಕಂತಹ ಬಜೆಟನ್ನು ತುಂಬಾ ಆನಂದದಿಂದ ಸ್ವಾಗತಿಸಿ ಕೆಲವು ವಿಷಯಗಳನ್ನು ಪ್ರಸ್ತಾಪಿಸುತ್ತೇನೆ. 1967-68 ರಲ್ಲಿ 179 ಕೋಟಿ ಇರತಕ್ಕಂತದ್ದು ಇವತ್ತಿನದಿವಸ 226 ಕೋಟಿ ಉತ್ಪತ್ತಿ ಬರುತ್ತದೆ ಎಂದರೆ, ನಾವು ಎಷ್ಟು ಅಭಿವೃದ್ಧಿ ಹೊಂದಿದ್ದೇವೆ ಎಂಬುದನ್ನು ಬಹಳ ಸಂತೋಷದಿಂದ ಹೇಳಬೇಕಾಗಿದೆ. 1968-69 ರ ಆಯವ್ಯಯ ಪತ್ರದಲ್ಲಿ 194.74 ಕೋಟಿ ರೂಪಾಯಿ ವರಮಾನಕ್ಕೂ, 182.76 ಕೋಟಿ ರೂಪಾಯಿ ರೆವಿನ್ಯೂ ವೆಚ್ಚಕ್ಕೂ ಏರ್ಪಾಡಾಗಿತ್ತು. ಆದರೆ ಕೊನೆಗೆ 215 ಕೋಟಿ ರೂಪಾಯಿ ಉತ್ಪತ್ತಿ ಬಂದಿದೆ ಎಂದರೆ ಸುಮಾರು 20 ಕೋಟಿ 26 ಲಕ್ಷ ಜಾಸ್ತಿ ಉತ್ಪತ್ತಿ ಬಂದಿದೆ ಎಂಬುದು ಬಹಳ ಸಂತೋಷದಿಂದ ಹೇಳಬೇಕಾಗಿದೆ.

[SMT. K. LEELAVATHI RAI in the Chair]

ಯಾವಾಗಲೂ ಬಜೆಟ್ಟಿನಲ್ಲಿ ಜಾಸ್ತಿ ಉತ್ಪತ್ತಿಯನ್ನು ತೋರಿಸಿ ಕಡಿಮೆ ಬರತಕ್ಕದ್ದು ಇರಬಾರದು. ಖರ್ಚನ್ನೂ ಸಾಕಷ್ಟು ಕಡಿಮೆ ಮಾಡಿದ್ದಾರೆ. ಆಡಳಿತ ಚೆನ್ನಾಗಿ ನಡೆದಿದೆ ಎನ್ನುವುದಕ್ಕೆ ಉತ್ಪತ್ತಿ ಜಾಸ್ತಿ ಬಂದಿದೆ ಎನ್ನುವುದೇ ಕಾರಣ. ಆಡಳಿತ ಸಾಕಷ್ಟು ಇಂಪ್ರೂವ್ ಆಗುತ್ತಿದೆ ಎನ್ನುವುದಕ್ಕೆ ಅನೇಕ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಹಣಕಾಸಿನ ಮಂತ್ರಿಗಳು ಬಹಳ ಬುದ್ಧಿವಂತರು ಇದ್ದಾರೆ. ಅನೇಕ ಸಂದರ್ಭಗಳಲ್ಲಿ ಅವರು ಬಜೆಟ್ಟಿನಲ್ಲಿ ಇಟ್ಟಿರತಕ್ಕ ಸಲಹೆಗಳನ್ನು ನೋಡಿದರೆ ತುಂಬಾ ಸಂತೋಷಕರವಾಗಿದೆ. ಈಗ ಪೇ ಕಮಿಷನ್ ರಿಪೋರ್ಟನ್ನು ಜಾರಿಗೆ ಕೊಡತಕ್ಕ ಮಟ್ಟದಲ್ಲಿ ಕೆಲವು ಭಾಗಗಳನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಇದು ತುಂಬಾ ಸಂತೋಷಕಾರವಾದ ವಿಷಯ. ಇದರಲ್ಲಿ ನಾಲ್ಕನೆಯ ದರ್ಜೆಯ ನೌಕರರಿಗೆ ಸ್ವಲ್ಪ ಮಟ್ಟಿಗೆ ಡಿ.ಎ. ಕಡಿಮೆ ಬರುತ್ತದೆ ಎಂದು ನಾನು ಕೇಳಿದ್ದೇನೆ. ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ನಾನು ನಂಬಿದ್ದೇನೆ.

ಶ್ರೀಮಾನ್ ದೇವರಾಜ್ ಅರಸ್ ಅವರು ಮಾತನಾಡುತ್ತಾ ನೇರವಾಗಿ ಯಾವುದಾದರೂ ಟ್ಯಾಕ್ಸ್ ಹಾಕುತ್ತೇವೆ ಎಂದು ಹೇಳಬಹುದಾಗಿತ್ತು ಎಂದು ಹೇಳಿದರು. ನನಗೆ ತಿಳಿದ ಹಾಗೆ ನಮ್ಮ ಅರ್ಥ ಸಚಿವರು ವಿಷಯಗಳನ್ನು ಸರಿಯಾಗಿ ತಿಳಿದುಕೊಂಡಿದ್ದಾರೆ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಅವರಿಗೆ ಚೆನ್ನಾಗಿ ಗೊತ್ತಿದೆ. ಯಾವ ಯಾವ ಬಾಬಿನಲ್ಲಿ ಜಾಸ್ತಿ ಬರುತ್ತದೆ ಎಂಬುದನ್ನು ಅವರು ಗಮನದಲ್ಲಿ ಇಟ್ಟುಕೊಂಡಿದ್ದಾರೆ. ಈಗಾಗಲೇ ಪಾನನಿರೋಧಕ್ಕೆ ಸಂಬಂಧಪಟ್ಟ ಕಾನೂನನ್ನು ಸಡಿಲಿಸಿ ಎಕ್ಸೈಜ್‌ನಿಂದ ಹೆಚ್ಚು ಉತ್ಪತ್ತಿ ಬರುವ ಹಾಗೆ ಮಾಡಿಕೊಂಡಿದ್ದಾರೆ. ಹೋದ ಸಾರಿ ಎಕ್ಸೈಜ್‌ನಿಂದ ಏನು ಆದಾಯ ಬರುತ್ತದೆ ಎಂದು ನಾವು ನಿರೀಕ್ಷಣೆ ಮಾಡಿದ್ದೆವೋ ಅದಕ್ಕಿಂತ ಜಾಸ್ತಿ ಆದಾಯ ಬಂದಿದೆ. ಮುಂದಿನ ಜೂನ್ ತಿಂಗಳಲ್ಲಿ ಎಕ್ಸೈಜ್ ಕಂಟ್ರಾಕ್ಟನ್ನು ಹರಾಜು ಮಾಡುತ್ತಾರೆ. ಆಗ ಅದರಿಂದ ಒಂದಕ್ಕೆ 10 ರಷ್ಟು ಆದಾಯ ಬರುತ್ತದೆ ಎಂದು ಅನಿಸುತ್ತದೆ. ಕೆಲವು ಕಡೆ ಆಗಿರುವುದನ್ನು ಯೋಚನೆ ಮಾಡಿದರೆ, ಅರಸೀಕೆರೆಯಲ್ಲಿ ಶ್ರೀಮಂತರು 6 ಸಾವಿರ ರೂಪಾಯಿಗಳಿಗೆ ತೆಗೆದುಕೊಂಡಿದ್ದನ್ನು 65 ಸಾವಿರ ಚಿಲ್ಲರೆ ರೂಪಾಯಿಗಳಿಗೆ ಹಂಚಿದ್ದಾರೆ. ಆದ್ದರಿಂದ ಒಂದಕ್ಕೆ 10 ರಷ್ಟು ಲಾಭ ಬರುತ್ತದೆ. ಈ ದೃಷ್ಟಿಯಿಂದ ಮುಂದಿನ ಹರಾಜಿನಲ್ಲಿ ಇದರಲ್ಲಿ ಜಾಸ್ತಿ ಆದಾಯ ಬರುವುದಕ್ಕೆ ಅವಕಾಶವಿದೆ. ಈ ಬಗ್ಗೆ ಒಂದು ವಿಷಯವನ್ನು ಹೇಳುತ್ತೇನೆ. ಈ ಸಾರಿ ಗ್ರಾಮ ಗ್ರಾಮ ಮಟ್ಟದಲ್ಲಿ ಹರಾಜು ಮಾಡತಕ್ಕದ್ದನ್ನು ಇಟ್ಟುಕೊಳ್ಳಬೇಕು. ಯಾವುದರಿಂದ ಹೆಚ್ಚು ಆದಾಯ ಬರುತ್ತದೆಯೋ ಅದನ್ನು ಮಾಡಬೇಕು. ಈಚೆಗೆ ಡಿಸ್ಟ್ರಿಕ್ಟ್ ವೈಜ್ ಹರಾಜು ಮಾಡುವುದಿಲ್ಲ ಸರ್ಕಲ್ ವೈಜ್ ಹರಾಜು ಮಾಡುತ್ತೇವೆಂದು ಸರ್ಕಾರದವರು ನಿರ್ಧಾರ ಮಾಡಿಕೊಂಡಿದ್ದಾರೆಂದು ನಾನು ಕೇಳಿದ್ದೇನೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಹರಾಜು ಇದೆ ಎಂದರೆ ಗ್ರಾಮ ಮಟ್ಟದಲ್ಲಿ ಜಾಸ್ತಿ ಬಿಡ್ ಬರುವುದಿಲ್ಲ. ಆದರೆ ಸಣ್ಣ ಸಣ್ಣ ಅಂಗಡಿಗಳನ್ನು ಹಂಚಿಕೊಟ್ಟು ಹರಾಜು ಮಾಡುವುದಾದರೆ ಅದರಿಂದ ಉತ್ಪತ್ತಿ ಜಾಸ್ತಿ ಬರುತ್ತದೆ ಎಂದು ನಾನು ನಂಬಿದ್ದೇನೆ. ಆ ರೀತಿ ಮಾಡಬೇಕೆಂದು ನಾನು ತಮ್ಮನ್ನು ಒತ್ತಾಯ ಮಾಡುತ್ತೇನೆ. ಈ ಬಗ್ಗೆ ನಾನು ತಮಗೆ ಒಂದು ನಿದರ್ಶನವನ್ನು ಹೇಳುತ್ತೇನೆ. ಒಂದು ತಾಲ್ಲೂಕಿನ ಸಾರಾಯಿ ಕಂಟ್ರಾಕ್ಟರು ಒಬ್ಬರು ನನ್ನ ಸ್ನೇಹಿತರು. ಅವರು ಮೊದಲು ಮಿಲಿಟರಿ ಹೋಟಲಿನಲ್ಲಿ ಸರ್ವೀಸ್ ಮಾಡುತ್ತಿದ್ದರು. ಅವರು ಒಂದು ತಾಲ್ಲೂಕು ಸಾರಾಯಿ ಹರಾಜನ್ನು ತೆಗೆದುಕೊಂಡು ಅದನ್ನು ನಡೆಸುತ್ತಿದ್ದಾರೆ. ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ನಾನು ಅವರನ್ನು ಭೇಟಿ ಮಾಡಿ ಕೇಳಿದಾಗ ಅವರು ಹೇಳಿದರು ನಾನು 45 ಸಾವಿರ ರೂಪಾಯಿಗಳಿಗೆ ಮನೆಯನ್ನು ತೆಗೆದುಕೊಂಡಿದ್ದೇನೆ. ಎರಡು ಲಾರಿಯನ್ನು ಬುಕ್ ಮಾಡಿದ್ದೇನೆ. ಒಂದು ಅಂಬಾಸಿಡರ್ ಕಾರು ಬೇರೆ ಬರುತ್ತಿದೆ ಎಂದು ಇತ್ಯಾದಿಯಾಗಿ ಪಟ್ಟಿಯನ್ನು ಹೇಳುತ್ತಾ ಹೋಗುತ್ತಿದ್ದರು. ಹೀಗೆ ಎಕ್ಸೈಜ್ ಬಾಬಿನಿಂದ ಎಷ್ಟರಮಟ್ಟಿಗೆ

ಆದಾಯ ಬರುತ್ತದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಆದ್ದರಿಂದ ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಎಕ್ಸೈಜ್ ಹರಾಜನ್ನು ಮಾಡಬೇಕು. ಗ್ರಾಮಗಳಿಂದ ಜಾಸ್ತಿ ಆದಾಯ ಎಕ್ಸೈಜಿನಿಂದ ಬರುತ್ತದೆ. ಹಳ್ಳಿಗರು ಈ ಹಣವನ್ನು ಕೊಡುತ್ತಾರೆ. ಇದನ್ನು ಸರ್ಕಾರದವರು ಸಂಪೂರ್ಣವಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಈ ಮೂಲಕ ಸರ್ಕಾರದವರು ಹೆಚ್ಚಿನ ಹಣವನ್ನು ಗಳಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

ಗ್ರಹಚಾರವಶಾತ್ ಹಳ್ಳಿಯವರು ಬಹಳ ಚೆನ್ನಾಗಿದ್ದಾರೆ ಅವರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿದರೆ ಅವರು ಕೊಡುವುದಕ್ಕೆ ಮುಂದೆ ಬರುತ್ತಿಲ್ಲ ಎನ್ನುವ ಪ್ರಶ್ನೆ ಆಗಿಂದಾಗ್ಯೆ ಬರುತ್ತಿದೆ. ನಿಜವಾಗಿಯೂ ಇದು ವಿಷಾದಕರವಾದ ವಿಷಯ. ಒಂದು ಎಕರೆ ಸಾಗು ಮಾಡತಕ್ಕ ಒಬ್ಬ ರೈತನಿಗೆ ಕಂಪಲ್ಸರಿಯಾಗಿ ಒಂದು ಕ್ವಿಂಟಾಲ್ ಬತ್ತ ಲೆವಿ ಕೊಡಲೇಬೇಕೆಂದು ಆರ್ಡರ್ ಮಾಡಿದ್ದಾರೆ. ಅವನಿಗೆ ಕನಿಷ್ಠಪಕ್ಷ 30 ರೂಪಾಯಿಗಳನ್ನು ತೆರಿಗೆ ಹಾಕಿದ ಹಾಗೆ ಆಯಿತು. ಅವನು ನೇರವಾಗಿ ಸರ್ಕಾರಕ್ಕೆ ಈ ರೂಪದಲ್ಲಿ ತೆರಿಗೆಯನ್ನು ಕೊಟ್ಟ ಹಾಗೆ ಆಯಿತು. ಈ ತರಹ ಅನೇಕ ಹಿನ್ನೆಲೆ ತೆರಿಗೆಗಳು ಅವನಿಗೆ ಬೀಳುತ್ತವೆ ಎಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಹಳ್ಳಿಗಾಡಿನಲ್ಲಿರತಕ್ಕ ರೈತ ಒಬ್ಬ ಡಾಕ್ಟರ ಹತ್ತಿರ ಹೋಗಬೇಕಾದರೆ ಟ್ಯಾಕ್ಸಿ ಬಾಡಿಗೆ ಎಷ್ಟು ಕೊಡಬೇಕು ಎಂಬುದು ಮರೆತು ಹೋಗುತ್ತದೆ. ಆದರೆ ಪಟ್ಟಣದಲ್ಲಿರತಕ್ಕವರು ಬಸ್ಸಿನಲ್ಲಿ ಆಸ್ಪತ್ರೆಗೆ ಹೋಗುತ್ತಾರೆ ಬರುತ್ತಾರೆ. ಅವರಿಗೆ ಆ ಒಂದು ಅನುಕೂಲತೆ ಇದೆ. ಈಗಾಗಲೇ ರೈತರಿಗೆ ಹಾಕಿರತಕ್ಕ ತೆರಿಗೆ ಸ್ವಲ್ಪ ಜಾಸ್ತಿಯಾಗಿದೆ. ಇನ್ನೂ ಹೆಚ್ಚಿಗೆ ತೆರಿಗೆಯನ್ನು ರೈತನಿಗೆ ಹಾಕುವುದಕ್ಕೆ ಅವಕಾಶವಿಲ್ಲ. ರೈತ ಎಲ್ಲರಿಗೂ ಅನ್ನವನ್ನು ದುಡಿದು ಕೊಡುತ್ತಿದ್ದಾನೆ. ಆದ್ದರಿಂದ ನೀವು ಅವನಿಗೆ ನ್ಯಾಯವಾಗಿ ತೆರಿಗೆಯನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಎಕ್ಸೈಜ್‌ನಿಂದ ಹೆಚ್ಚು ಆದಾಯ ಬರುತ್ತದೆ ಎಂದು ನಿರೀಕ್ಷಣೆ ಮಾಡಿಕೊಂಡು, ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾನ್ಯ ಹಣಕಾಸಿನ ಮಂತ್ರಿಗಳು ತೆರಿಗೆ ಇಲ್ಲದ ಬಜೆಟ್ಟನ್ನು ಇಟ್ಟಿರುವುದಕ್ಕಾಗಿ ನಾವು ಸಂತೋಷಪಡಬೇಕಾಗಿದೆ. ಇದರಲ್ಲಿ ಸರ್ಕಾರದವರು ಸಾಕಷ್ಟು ಖರ್ಚನ್ನೂ ಉಳಿಸುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಪೇ ಕಮಿಷನ್ನಿನಲ್ಲಿ ಶಿಫಾರಸ್ಸು ಮಾಡಿರುವುದನ್ನು ಒಂದೆರಡು ಶಿಫಾರಸ್ಸುಗಳನ್ನು ಜಾರಿಗೆ ಕೊಡುವುದಕ್ಕೆ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ದೇಶದ ಜನಗಳು ಒಂದು ಉದ್ದೇಶದಲ್ಲಿ ಖರ್ಚು ಮಾಡಿ, ಒಂದು ಉದ್ದೇಶದಲ್ಲಿ ಉಳಿಸಿದರೆ ಸಂತೋಷ ವ್ಯಕ್ತಪಡಿಸುತ್ತಾರೆ. ಪೇ ಕಮಿಷನ್ ರಿಪೋರ್ಟ್‌ನಲ್ಲಿ ಡಿವಿಜನಲ್ ಮಟ್ಟದಲ್ಲಿರತಕ್ಕ ಅಧಿಕಾರಿಗಳು ಏನಿದ್ದಾರೆಯೋ ಅವರು ಬೇಕಾಗಿಲ್ಲ ಎಂದು ಹೇಳಿದ್ದಾರೆ. ಅವರನ್ನು ಸಂಪೂರ್ಣವಾಗಿ ತೆಗೆದುಹಾಕುವುದು ಒಳ್ಳೆಯದು ಎಂದು ಹೇಳಿದ್ದಾರೆ. ಈಗ ಬರುವ ಏಪ್ರಿಲ್ ಒಂದನೆ ತಾರೀಖಿನಿಂದ ಪೇ ಕಮಿಷನ್ ವರದಿಯ ಒಂದು ಭಾಗವನ್ನು ಜಾರಿಗೆ ತರುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಟ್ಟಿದ್ದಾರೆ. ಅದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಈಗ ಇದರಲ್ಲಿ ಹೇಳತಕ್ಕಂಥಾದ್ದರಲ್ಲಿ ಮತ್ತು ಮಾಡತಕ್ಕಂಥಾದ್ದರಲ್ಲಿ ವ್ಯತ್ಯಾಸಗಳು ಇದ್ದರೆ ಅದರಿಂದ ಬಹಳ ಕಷ್ಟವಾಗುತ್ತದೆ. ಆ ರೀತಿ ಆಗುವುದಕ್ಕೆ ಅವಕಾಶ ಕೊಡದಂತೆ ಡಿವಿಜನಲ್ ಮಟ್ಟದ ಅಧಿಕಾರಿಗಳನ್ನು ವಜಾ ಮಾಡಬೇಕೆಂದು ಹೇಳಿರುವುದನ್ನು ಜಾರಿಗೆ ತರುವುದಕ್ಕೆ ಕಡ್ಡಾಯವಾಗಿ ಪ್ರಯತ್ನ ಮಾಡಬೇಕು. ಈಗ ಯಾವ ತರದ ಒಂದು ಜಾಡ್ಯ ಹುಟ್ಟಿಕೊಂಡಿದೆ ಎಂದರೆ ಯಾವ ಇಲಾಖೆಯಲ್ಲಿ ನೋಡಿದರೂ ಕೂಡ ಡಿವಿಜನಲ್ ಲೆವಲ್‌ನಲ್ಲಿ ಒಬ್ಬ ಡೆಪ್ಯುಟಿ ಡೈರೆಕ್ಟರು, ಜಾಯಿಂಟ್ ಡೈರೆಕ್ಟರ್ ಇರಬೇಕು ಎನ್ನುವುದು ಸರಿಯಲ್ಲ. ಪೇ ಕಮಿಷನ್‌ನವರು ಹೇಳಿರುವ ಹಾಗೆ ಅಧಿಕಾರ ವರ್ಗದವರನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲ. ಈಗ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕಿನವರು ಈ ಮಾರ್ಗ ಹಿಡಿದು ಡಿವಿಜನ್ ಲವಲ್, ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಆಫೀಸು ಪ್ರಾರಂಭಿಸಿದ್ದಾರೆ. ಸೊಸೈಟಿಯಿಂದ ನೇರ ಬೆಂಗಳೂರಿಗೆ ಬಂದು ಹೋಗುವುದೇ ವರ್ಷಗಟ್ಟಲೇಯಾಗುತ್ತಿತ್ತು. ಈಗ ಸುತ್ತಿಕೊಂಡು ಬರುವಾಗ ಇನ್ನು ರೈತರಿಗೆ ತೊಂದರೆಯಾದಂತಾಯಿತು.

4–30 P.M.

ಸರ್ಕಾರದವರು ಸಬ್ಸಿಡಿ ಕೊಡುತ್ತಾರೆಂದು ತಿಳಿದುಕೊಂಡು ಈ ರೀತಿ ಸೊಸೈಟಿಗಳನ್ನು ಪ್ರಾರಂಭ ಮಾಡುತ್ತಿದ್ದಾರೆ. ಈ ರೀತಿ ಸಬ್ಸಿಡಿ ಲಾಭದಿಂದ ಆಲ್ ಇಂಡಿಯಾ ಟೂರ್ ಮಾಡುತ್ತಿದ್ದಾರೆ. ನಾನೂ ಸಹ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್, ಅಪೆಕ್ಸ್ ಬ್ಯಾಂಕ್, ರೂರಲ್ ಇಂಡಸ್ಟ್ರಿಯಲ್ ಬ್ಯಾಂಕ್‌ನಲ್ಲಿ ಡೈರೆಕ್ಟರ್‌ಆಗಿ ಕೆಲಸ ಮಾಡಿದ್ದೇನೆ. ಸೆಂಟ್ರಲ್ ಬ್ಯಾಂಕ್‌ನಲ್ಲಿ ಡೈರೆಕ್ಟರ್ ಆಗಿ ಕೆಲಸ ಮಾಡಿದ್ದೇನೆ. ನನ್ನ ಒಂದು ಅನುಭವದಿಂದ ಈ ವಿಚಾರವನ್ನು ಹೇಳುತ್ತಿದ್ದೇನೆ. ನಾನೇನು ಅರ್ಬನ್ ಏರಿಯಾಗಳಲ್ಲಿ ಮಾತ್ರ ತೆರಿಗೆಯನ್ನು ಜಾಸ್ತಿ ಹಾಕಿ ಎಂದು ಹೇಳುವುದಿಲ್ಲ. ಈಗಿನ ಆಡಳಿತವನ್ನು ಬಗಿಗೊಳಿಸಿ ಸರಿಯಾದ ವ್ಯವಸ್ಥೆಯಲ್ಲಿ ಆಡಳಿತವನ್ನು

(ಶ್ರೀ ಕೆ. ಎನ್. ವೀರಪ್ಪಗೌಡ)

ನಡೆಸಿದರೆ ಹೊಸತೆರಿಗೆ ಹಾಕುವ ಪರಿಸ್ಥಿತಿಯೇ ಬರುವುದಿಲ್ಲ. ಪಟೇಲರು ಮತ್ತು ಶಾನುಭೋಗರ ಜಾಗಗಳಲ್ಲಿ ಪಂಚಾಯತ್ ಸೆಕ್ರೆಟರಿ ಮತ್ತು ವಿಲೇಜ್ ಅಕೌಂಟೆಂಟರುಗಳನ್ನು ನೇಮಕ ಮಾಡ ಬೇಕೆಂದು ಸರ್ಕಾರದವರು ತೀರ್ಮಾನ ತೆಗೆದುಕೊಂಡು ಇವರುಗಳ ಜಾಗದಲ್ಲಿ ಸುಮಾರು 8 ಸಾವಿರಕ್ಕೆ ಬದಲಾಗಿ 16 ಸಾವಿರ ಜನರನ್ನು ನೇಮಕ ಮಾಡುವ ಯೋಚನೆಯನ್ನು ಸರ್ಕಾರದವರು ಮಾಡುತ್ತಿದ್ದಾರೆ. ಇವರಿಗೆ ಸಂಬಳವನ್ನು ಕಂದಾಯದಿಂದ ಬರುವ ಹಣದಲ್ಲಿ ಕೊಡಬೇಕು. ಒಂದೊಂದು ಪಂಚಾಯಿತಿಗಳಿಗೆ ಇಬ್ಬರನ್ನು ನೇಮಕ ಮಾಡುವ ಬದಲು ಒಬ್ಬರನ್ನೇ ಏತಕ್ಕೆ. ನೇಮಕ ಮಾಡಬಾರದು ಎಂದು ಮೊನ್ನೆ ಪ್ರಶ್ನೆ ಕೇಳಿದಾಗ ಸರ್ಕಾರದವರು ಅದಕ್ಕಾಗಿ ಒಂದು ಕಮಿಟಿಯನ್ನು ಮಾಡಿದ್ದೇವೆಂದು ಹೇಳಿದರು. ಇವತ್ತಿನದಿವಸ 500 ಜನ ಇರುವ ಕಡೆಯೂ ಒಂದೊಂದು ಪಂಚಾಯಿತಿ ಇದೆ. ಇಂತಹ ಕಡೆಗಳಲ್ಲಿ ಪಂಚಾಯತ್ ಸೆಕ್ರೆಟರಿ ಮತ್ತು ವಿಲೇಜ್ ಅಕೌಂಟೆಂಟ್ ಇಬ್ಬರಿಗೂ ಏನು ಕೆಲಸವಿರುತ್ತದೆ? ಒಬ್ಬರೇ ಎರಡು ಕೆಲಸಗಳನ್ನು ಮಾಡುವು ದಕ್ಕಾಗುವುದಿಲ್ಲವೆ? ಒಂದೂವರೆ ಸಾವಿರ ಜನರಿಗೆ ಒಂದು ಪಂಚಾಯಿತಿ ಇರಬೇಕೆಂದು ನನ್ನ ಅಭಿಪ್ರಾಯ. ಈಗ ಒಂದೊಂದು ಪಂಚಾಯಿತಿಗಳಲ್ಲಿ 500ರಿಂದ 5,000ದ ವರೆಗೆ ಜನಸಂಖ್ಯೆ ಇರುವ ನಿದರ್ಶನಗಳು ಇವೆ. ತುಕೋಳ್ ಆಯೋಗದವರು 15 ಸಾವಿರ ಉತ್ಪತ್ತಿಗೊಂದು ಪಂಚಾಯ್ತಿ ಎಂತ ಹೇಳಿದ್ದಾರೆ, 10ರಿಂದ 15 ಸಾವಿರ ರೂಪಾಯಿಗಳ ಆದಾಯ ಬರುವುದನ್ನು ನೋಡಿಕೊಂಡು ಅದರ ಆಧಾರದ ಮೇಲೆ ಪಂಚಾಯಿತಿಗಳನ್ನು ರಚಿಸಬೇಕೆಂದು ಸಲಹೆ ಮಾಡಿದ್ದಾರೆ. ಮುಂದಿನ ಪಂಚಾಯತ್ ಚುನಾವಣೆಯ ಸಮಯದಲ್ಲಿಯಾದರೂ ಸಹ ಸರ್ಕಾರ ದವರು ಈ ಆಯೋಗದ ತೀರ್ಪನ್ನು ಒಪ್ಪಿಕೊಂಡು ಅದರಂತೆ ಅನುಷ್ಠಾನಕ್ಕೆ ತರಬೇಕು. ತುಕೋಳ್ ಆಯೋಗದ ಎಲ್ಲಾ ಶಿಫಾರಸ್‌ಗಳನ್ನು ಸರ್ಕಾರದವರು ಒಂದೇ ಸಲಕ್ಕೆ ಒಪ್ಪಿ ಕೊಳ್ಳುವುದು ಕಷ್ಟವಾಗುವುದರಿಂದ ಹಂತಹಂತವಾಗಿಯಾದರೂ ಒಪ್ಪಿಕೊಂಡು ಪಂಚಾಯಿತಿಗಳ ಬಗ್ಗೆ ಹೇಳಿರುವುದನ್ನು ಅನುಷ್ಠಾನಕ್ಕೆ ತರಬೇಕು.

ಹೊಸದಾಗಿ ಯಾರನ್ನೂ ಕೆಲಸಕ್ಕೆ ತೆಗೆದುಕೊಳ್ಳಬಾರದೆಂದು ತೀರ್ಮಾನ ಮಾಡಿ ಸರ್ಕಾರ ದವರು ಒಂದು ಆರ್ಡರನ್ನು ಇತ್ತೀಚೆಗೆ ಹೊರಡಿಸಿದ್ದಾರೆ. ಆದರೂ ಸಹ ಪಬ್ಲಿಕ್ ಸರ್ವಿಸ್ ಕಮಿಷನ್ ಅವರು ಕಾರ್‌ಪಾರ್ ಮಾಡುತ್ತಲೇ ಇರುತ್ತಾರೆ. ಆ ರೀತಿ ಮಾಡಿದಾಗ ನಮ್ಮಂತಹವರಲ್ಲಿ ರೆಕಮೆಂಡ್ ಮಾಡಿ ಎಂದು ಬರುತ್ತಿರುತ್ತಾರೆ. ಒಂದು ಸಾರಿ ತೀರ್ಮಾನ ತೆಗೆದುಕೊಂಡಮೇಲೆ ಹೊಸದಾಗಿ ಅಪಾಯಿಂಟ್ ಮಾಡಿಕೊಳ್ಳುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕು. 273ನೇ ಪ್ರಶ್ನೆಯಲ್ಲಿ ಮಿನಿಸ್ಟರ್ ಲೆವೆಲ್‌ನಲ್ಲಿ ಎಷ್ಟು ಜನರನ್ನು ಯಾವ ಯಾವ ಪ್ರದೇಶಗಳಿಂದ ತೆಗೆದು ಕೊಂಡಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸರ್ಕಾರದವರು 301 ಜನರನ್ನು ನೇಮಿಸಿಕೊಳ್ಳುವುದರಲ್ಲಿ ಇದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಈ 301 ಜನರನ್ನು ಹೊಸದಾಗಿ ನೇಮಕ ಮಾಡಿಕೊಳ್ಳದೆ, ಯಾವ ಯಾವ ಇಲಾಖೆಗಳಲ್ಲಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೋ ಅಂತಹ ಕಡೆಗಳಿಂದ ಕರೆಸಿಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ. ಶ್ರೀ ದೇವರಾಜ ಅರಸ್ ಅವರು ಅವರವರ ಜಾತಿಯವರನ್ನು ನೇಮಕ ಮಾಡಿಕೊಳ್ಳುತ್ತಾರೆಂದು ಈ ವಿಚಾರದಲ್ಲಿ ಅವರ ಒಂದು ಅನುಭವವನ್ನು ಹೇಳಿದರು. ಹಣದ ಉಳಿತಾಯದ ದೃಷ್ಟಿಯಿಂದ ನೇಮಕಗಳನ್ನು ಕಡ್ಡಾಯವಾಗಿ ಕಡಿಮೆ ಮಾಡಬೇಕು. ಈಗಿನ ಸಂದರ್ಭದಲ್ಲಿ ಹೊಸ ನೇಮಕಗಳನ್ನು ಮಾಡಿಕೊಳ್ಳುವುದು ಸರಿಯಾದುದು ಅಲ್ಲ. ಈ ಮೂಲಕ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತಿದ್ದೇನೆ.

ಪೆನ್‌ಷನ್ ವಿಚಾರದಲ್ಲಿ ಕೆಲವು ವಿಚಾರಗಳನ್ನು ಹೇಳುತ್ತೇನೆ. ಈ ವಿಚಾರದಲ್ಲಿ ನಾನು ಮಾತನಾಡುವುದು ಸ್ವಾಭಾವಿಕವಾಗಿದೆ. ಅನೇಕ ಸಲ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಕಾಂಗ್ರೆಸ್‌ನವರು ಒಪ್ಪಿಕೊಂಡಿದ್ದಾರೆ. ಮೊದಲು ಸಂಬಳವನ್ನು ಸಂಭಾವನೆ ಎಂದು ಕರೆಯುತ್ತಿದ್ದರು. ನನ್ನ ಮಗನೇ ಅಧಿಕಾರದಲ್ಲಿ ಇದ್ದು ರಿಟೈರ್ ಆದರೆ ಪೆನ್‌ಷನ್ ಕೊಡಬೇಕಾದಾಗ ಅವರ ಉತ್ಪತ್ತಿ ಬೇರೆ ಏನಿದೆ ಎಂದು ನೋಡಿ ಕೊಂಡು ಅದರ ಆಧಾರದ ಮೇಲೆ ಪೆನ್‌ಷನ್ ಕೊಡುವುದು ಒಳ್ಳೆಯದು. ಕೆಲವರಿಗೆ ಸಾವಿರಾರು ರೂಪಾಯಿಗಳ ಉತ್ಪತ್ತಿ ಬೇರೆ ಇರುತ್ತದೆ, ಜಮೀನು ಇರುತ್ತದೆ, ಬಾಡಿಗೆ ಬರುತ್ತಿರುತ್ತದೆ. ಇಂತಹವರಿಗೆ ಪೆನ್‌ಷನ್ ಕೊಡುವುದು ಸರಿಯಲ್ಲ. ಪೆನ್‌ಷನ್ ಕೊಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕೆಂದು ನಾನು ಹೇಳುತ್ತಿಲ್ಲ. ಆದರೆ ಪೆನ್‌ಷನ್ ಕೊಡುವುದನ್ನು ತೀರ್ಮಾನ ಮಾಡುವಾಗ ಸಂಬಂಧಪಟ್ಟ ನೌಕರರ ತೊಂದರೆಗಳು ಏನೇನಿವೆ ಎಂಬುದನ್ನು ನೋಡಿಕೊಂಡು

ತೀರ್ಮಾನ ಮಾಡಬೇಕು. ಈ ವಿಧಾನ ಬಿಟ್ಟು ಸಂಬಳದ ಆಧಾರದ ಮೇಲೆ 200 ಕೊಡುವುದು, 300 ಕೊಡುವುದು ಸರಿಯಲ್ಲ. ಯಾವ ರೀತಿಯ ವರಮಾನವೂ ಇಲ್ಲದವರಿಗೆ ಹೆಚ್ಚಿನ ಪೆನ್‌ಷನ್ ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಛೇರ್‌ಮನ್ ಅವರು.—ತಮಗೆ ಕೊಟ್ಟ ಕಾಲ ಮುಗಿಯಿತು. ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಕೆ. ಎನ್. ವೀರಪ್ಪಗೌಡ —ಸಾಮಾನ್ಯವಾಗಿ ಉತ್ಪತ್ತಿಯನ್ನು ಜಾಸ್ತಿಮಾಡಿಕೊಳ್ಳುವ ಬಗ್ಗೆ, ಖರ್ಚನ್ನು ಸಾಕಷ್ಟು ಕಡಿಮೆ ಮಾಡಿಕೊಳ್ಳುವ ಬಗ್ಗೆ ಇನ್ನೂ ಅನೇಕ ಸಲಹೆಗಳನ್ನು ಕೊಡಬೇಕೆಂದಿದ್ದೆ. ಸಮಯವಿಲ್ಲದಿರುವುದರಿಂದ ಹೇಳುವುದಕ್ಕೆ ಅವಕಾಶವಾಗಲಿಲ್ಲ. ಮುಂದೆ ಸಮಯ ಸಿಕ್ಕಿದಾಗ ಸಲಹೆಗಳನ್ನು ಕೊಡುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ವಿ. ಐತಾಳ್ (ಸುರತ್ಕಲ್).—ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದ 1969-70ನೇ ಸಾಲಿನ ಆಯವ್ಯಯ ಪತ್ರವನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಇಲ್ಲಿ ಆಡಬಯಸುತ್ತೇನೆ.

ಮಾನ್ಯ ಹಣಕಾಸಿನ ಸಚಿವರು 13 ಕೋಟಿ ರೂಪಾಯಿಗಳ ಒಂದು ಕೊರತೆ ಬಡ್ಜೆಟ್ಟನ್ನು ತಯಾರಿಸಿ ನಮ್ಮ ಮುಂದಿಟ್ಟಿದ್ದಾರೆ. ಸರಕಾರಕ್ಕೆ ಇರುವ ಅಸೆಟ್ಸ್‌ಗಳನ್ನು ಲೀಸ್ ಮಾಡಿಯೋ ಇಲ್ಲವೇ ಕಟ್ಟಡಗಳನ್ನು ಮಾರಿಯೋ ಈಗ ಬಂದಿರುವ ಕೊರತೆಯನ್ನು ಭರ್ತಿ ಮಾಡಿಕೊಳ್ಳ ಬಹುದಾಗಿತ್ತು. ಇದೇ ಸಭೆಯಲ್ಲಿ ಇಂದು ಬೆಳಗ್ಗೆ ಈ ಬೆಂಗಳೂರು ನಗರದಲ್ಲಿರುವ ಸುಭಾಷ್ ನಗರದ ಮೈದಾನವನ್ನು ಕಾಂಗ್ರೆಸ್ಸು ವಸ್ತುಪ್ರದರ್ಶನಕ್ಕಾಗಿ ಮಾರುತ್ತಾರೆ ಎನ್ನುವ ಬಗ್ಗೆ ಬಹಳ ಜೋರಾದ ಚರ್ಚೆಗಳು ಇಲ್ಲ ನಡೆದವು, ಆದರೆ ಇದರ ಬಗ್ಗೆ ಇನ್ನೂ ಏನೂ ಇತ್ಯರ್ಥ ಆಗಿಲ್ಲ ಎಂದೂ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಇದೇ ರೀತಿ ನಮ್ಮ ಸುರತ್ಕಲ್‌ನಲ್ಲಿ ಇರುವ ಶಾಲೆಗೆ ಸೇರಿದ ಸರಕಾರದ ಎರಡು ಎಕರೆಗಳಷ್ಟು ಇರುವ ಕ್ರೀಡಾ ಮೈದಾನವನ್ನು ಅಲ್ಲಿ ಹಿಂದೆ ಇದ್ದ ಮಂಡಲ್ ಕಾಂಗ್ರೆಸ್ಸು ಅಧ್ಯಕ್ಷರಿಗೆ ಹಂಚಬೇಕೆಂದು ಮಂಗಳೂರಿನಲ್ಲಿ ಹಿಂದೆ ಇದ್ದ ಜಿಲ್ಲಾಧಿ ಕಾರಿಗಳು ಆಜ್ಞೆ ಮಾಡಿದ್ದಾರೆ, ಇಲ್ಲಿ ಸುಭಾಸ್ ನಗರದ ಮೈದಾನ ಸುಮಾರು ಹತ್ತು ಹನ್ನೆರಡು ಎಕರೆಗಳಿಷ್ಟಿರುವ ಭೂಮಿಯನ್ನು ಕಾಂಗ್ರೆಸ್ಸು ಪಕ್ಷದವರಿಗೆ ಮಾರಬೇಕೆಂದು ಯಾವ ಪ್ರಯತ್ನ ಮಾಡುತ್ತಿದ್ದಾರೋ ಅದೇ ರೀತಿ ನಮ್ಮ ಸುರತ್ಕಲ್‌ನಲ್ಲಿರುವ ಸುಮಾರು ಎರಡು ಎಕರೆಗಳಷ್ಟಿರುವ ಕ್ರೀಡಾ ಮೈದಾನವನ್ನು ಕಾಂಗ್ರೆಸ್ಸಿನ ಎಕ್ಸ್ ಮಂಡಲ್ ಪ್ರೆಸಿಡೆಂಟರಿಗೆ ಕೊಡಬೇಕೆಂದು ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿದ್ದಾರೆ. ಜಿಲ್ಲಾಧಿಕಾರಿಗಳಾಗಿ ಆಗ ಶ್ರೀ ನಾಗೇಗೌಡ ರಿದ್ದರು. ಇವರು ಮೂರು ವರ್ಷ ಒಂಬತ್ತು ತಿಂಗಳು ಕಾಲ ನಮ್ಮ ಜಿಲ್ಲೆಯಲ್ಲಿದ್ದರು. ಮೂರು ವರ್ಷಗಳ ಕಾಲ ಒಳ್ಳೆಯ ಕೆಲಸ ಮಾಡಿದರು, ಒಂಬತ್ತು ತಿಂಗಳ ಕಾಲ ಯಾರಿಗೂ ಬೇಡದ ಕೆಲಸಗಳನ್ನು ಮಾಡಿದರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿರುವವರು ಹಿಂದೆ ಆರೋಗ್ಯ ಮಂತ್ರಿಗಳಾಗಿದ್ದಾಗ ಅಲ್ಲಿನ ಜಿಲ್ಲಾಧಿಕಾರಿಗಳ ಮಗಳಿಗೆ ಮೆಡಿಕಲ್ ಕಾಲೇಜಿನಲ್ಲಿ ಒಂದು ಸೀಟನ್ನು ಕೊಡಿಸಿದರು ಎಂಬ ಒಂದು ಕಾರಣದಿಂದ ಅವರಿಂದ ಶಹಬಾಸ್‌ಗಿರಿ ಪಡೆಯಬೇಕು ಎಂದು ಇವರು ವರ್ಗವಾಗಿ ಹೋಗುವುದಕ್ಕೆ ಎರಡು ದಿನಗಳಿಗೆ ಮುಂಚೆ ಕೊನೆಯ ಘಳಿಗೆಯಲ್ಲಿ ಆ ಕ್ರೀಡಾ ಮೈದಾನವನ್ನು ಅಲ್ಲಿನ ಮಂಡಲದ ಕಾಂಗ್ರೆಸ್ಸು ಅಧ್ಯಕ್ಷರಿಗೆ ಮಂಜೂರು ಮಾಡುವ ಆಜ್ಞೆ ಮಾಡಿದರು. ಇದನ್ನು ಅಲ್ಲಿನ ಜನರು ವಿರೋಧಿಸುತ್ತಿದ್ದರೂ ಇದರ ಬಗ್ಗೆ ನಾನು ಅಲ್ಲಿನ ವಕೀಲ ನಾಗಿ ಕೇಸುಗಳನ್ನು ಹಾಕಿ ಒತ್ತಾಯ ಮಾಡುತ್ತಿದ್ದರೂ ಇವರು ನಮಗೆ ತಿಳಿಯದಂತೆ ಇಂತಹ ಕೆಲಸಗಳನ್ನು ಮಾಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸು, ಯೋಜನೆ ಮತ್ತು ಯುವಜನ ಶಾಖೆಗಳ ಮಂತ್ರಿಗಳು).—ತಮ್ಮ ಮುಂದೆ ಮೈಕ್ರೊಫೋನ್ ಒಂದು ಇದೆ ಎನ್ನುವುದನ್ನು ಇಲ್ಲಿ ತಮಗೆ ನೆನಪಿಗೆ ತರುತ್ತಿದ್ದೇನೆ.

ಶ್ರೀ ಪಿ. ವಿ. ಐತಾಳ.—ನಿಮ್ಮ ಸರಕಾರದಲ್ಲಾಗುತ್ತಿರುವ ಅನ್ಯಾಯಗಳನ್ನು ಹೇಳಲು ಇದಕ್ಕಿಂತ ಹತ್ತು ಪಟ್ಟು ಸ್ವರ ಕೊಡು ಅಂತ ದೇವರನ್ನು ಪ್ರಾರ್ಥಿಸುತ್ತೇನೆ. ನಾನು ಆಗಲೇ ಹೇಳಿದ ಹಾಗೆ ಇದರ ಕೇಸುಗಳು ಇನ್ನು ವಿಚಾರಣೆ ಮಾಡಬೇಕಾಗಿದೆ. This is a matter hich has gone to the Vigilance Commission.

Sri RAMAKRISHNA HEGDE.—The Hon. Member is an experienced Lawyer. We are discussing about the Budget.

Sri P. V. AITHALA.—I am talking about Budget only. The Government is distributing Government properties among its *Chelas*. ಇದಕ್ಕಾಗಿಯೇ ನಾನು ಆಗಲೇ ಹೇಳಿದ್ದು ಮತ್ತು ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತಿರುವುದು, ನೀವು ಎಲ್ಲಿಯೂ ಒಬ್ಬ ಡೆಪ್ಯೂಟಿ ಕಮಿಷನರನ್ನು ಮೂರು ವರ್ಷಕ್ಕೆ ಮೇಲ್ಪಟ್ಟು ಒಂದು ಜಾಗದಲ್ಲಿರಲು ಅವಕಾಶ ಕೊಡಬೇಡಿ, ಮೂರು ವರ್ಷಗಳಾದ ಕೂಡಲೇ ಅವರನ್ನು ಬೇರೆ ಕಡೆಗೆ ವರ್ಗಾಯಿಸಿ ಎಂದು; ಆದರೂ ನೀವು ಕೇಳುತ್ತಿಲ್ಲ. ಇಲ್ಲಿದ್ದ ಎಕ್ಸ್ ಡೆಪ್ಯೂಟಿ ಕಮಿಷನವರವರು ಮೂರು ವರ್ಷ ಮತ್ತು ಒಂಬತ್ತು ತಿಂಗಳ ಕಾಲ ಇದ್ದು ಮೂರು ವರ್ಷ ಚೆನ್ನಾಗಿ ಕೆಲಸ ಮಾಡಿದರು ಮತ್ತು ಉಳಿಕೆಯ ಒಂಬತ್ತು ತಿಂಗಳು ಕಾಲ ಜನತೆಗೆ ಬೇಡದ ಕೆಲಸ ಮಾಡಿದರು ಎನ್ನುವುದು ಅವರ ರಿಕಾರ್ಡುಗಳಿಂದಲೇ ಚೆನ್ನಾಗಿ ಗೊತ್ತಾಗುತ್ತದೆ. ಇದೇ ವಿಚಾರದ ಬಗ್ಗೆ ನಾನು ಈ ಜಿಲ್ಲಾಧಿಕಾರಿಗಳಿಗೆ 11-7-67ರಲ್ಲಿ ನಮ್ಮ ಜಿಲ್ಲೆಯ ಸುಮಾರು ಐವತ್ತು ಜನರ ಮನವಿಯನ್ನು ಕೊಟ್ಟು ಅದಕ್ಕೆ ವಕೀಲನಾಗಿ ಇಲ್ಲಿ ಕೇಸು ಹಾಕಿದ್ದರೂ ಇಂತಹ ವಿಚಾರವನ್ನು ಮೊದಲಿನಿಂದ ಸರಿಮಾಡುತ್ತೇನೆ ಎಂದು ಹೇಳುತ್ತಾ ಬಚ್ಚಿಟ್ಟು ಇವರ ಮಗಳಿಗೆ ಎಂ.ಪಿ.ಸಿ.ಸಿ. ಪ್ರೆಸಿಡೆಂಟರು ಹಿಂದೆ ಹೆಲ್ತ್ ಮಿನಿಸ್ಟರಾಗಿದ್ದಾಗ ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಟ್ಟರು ಎನ್ನುವ ಒಂದು ನೆಪ ಮಾಡಿಕೊಂಡು ಇವರು ಚಾರ್ಜು ಕೊಡುವುದಕ್ಕೆ ಮುನ್ನ ಎಂದರೆ 20-1-1969ರಲ್ಲಿ ಸರಕಾರಕ್ಕೆ ಈ ಕ್ರೀಡಾ ಮೈದಾನವನ್ನು ಇಲ್ಲಿ ಹಿಂದೆ ಇದ್ದ ಎಕ್ಸ್ ಮಂಡಲ್ ಕಾಂಗ್ರೆಸ್ಸು ಪ್ರೆಸಿಡೆಂಟರವರಿಗೆ ಕೊಡಬೇಕೆಂದು ಹುಕುಂ ಮಾಡಿ ಹೋಗಿದ್ದಾರೆ. ಇದು ಸರಿಯಲ್ಲ. ಇದರ ಬಗ್ಗೆ ವಿವರವಾಗಿ ತನಿಖೆ ಮಾಡಬೇಕು ಎಂದು ನಾನು ಮಾನ್ಯ ಕಂದಾಯ ಮಂತ್ರಿಗಳಿಗೂ ಪತ್ರ ಬರೆದುದಕ್ಕೆ ಅವರು ನನಗೆ ಉತ್ತರ ಕೊಟ್ಟಿದ್ದಾರೆ. The Hon' Minister has replied in his letter that he is examining my letter. ಇದರಲ್ಲಿ ಡಿ.ಸಿ. ಶಿಫಾರಸು ಮಾಡಿರುವುದು ತಪ್ಪು. ಇದರ ರಿಕಾರ್ಡುಗಳನ್ನು ಪೂರ್ತಿ ತರಿಸಿ ನೋಡಬೇಕು ಎಂದು ಮಾನ್ಯ ರೆವೆನ್ಯೂ ಮಂತ್ರಿಗಳಿಗೆ ಪತ್ರ ಬರೆದುದಕ್ಕೆ ಇದನ್ನು ಇನ್ನೂ ಪರಿಶೀಲನೆ ಮಾಡುತ್ತಿದ್ದೇನೆ ಎಂದು ಮೇಲೆ ಹೇಳಿದಂತೆ ನನಗೂ ಪತ್ರ ಬರೆದಿದ್ದಾರೆ. ನಾನು ಈ ಮಾನ್ಯ ಸಭೆಯಲ್ಲಿ ನನ್ನ ಕ್ಷೇತ್ರದ ಪ್ರತಿನಿಧಿಯಾಗಿ ರೆವೆನ್ಯೂ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಇಲ್ಲಿನ ಜಿಲ್ಲಾಧಿಕಾರಿಗಳು ಸುರತ್ಕಲ್‌ನಲ್ಲಿರುವ ಒಂದು ಕ್ರೀಡಾ ಮೈದಾನವನ್ನು ಇಲ್ಲಿನ ಎಕ್ಸ್ ಮಂಡಲ್ ಕಾಂಗ್ರೆಸ್ಸು ಪ್ರೆಸಿಡೆಂಟರವರಿಗೆ ಕೊಡಬಹುದು ಎಂದು ಶಿಫಾರಸನ್ನು ಕಳುಹಿಸುವುದಾದರೆ, ನಾಳೆ ನಿಮ್ಮ ಎಂ.ಪಿ.ಸಿ.ಸಿ. ಅಧ್ಯಕ್ಷರಿಗೆ ಕಬ್ಬನ್ ಪಾರ್ಕು ಬೇಕೆಂದು ಕೇಳುತ್ತಾರೆ ಆಗ ಅವರಿಗೆ ಅದನ್ನು ಕೊಟ್ಟುಬಿಡಿ ಎಂತಲೂ ಬರೆದಿದ್ದೇನೆ. ಹೀಗೆ ಹಿಪೊಕ್ರೆಟಿಕ್ ಆಗಿ ಇಲ್ಲಿದ್ದ ಹಿಂದಿನ ಜಿಲ್ಲಾಧಿಕಾರಿಗಳು ಸರಕಾರಕ್ಕೆ ಶಿಫಾರಸು ಮಾಡಿದರೆ ಇದರಿಂದೇನು ಪರಿಣಾಮ ಆಗುತ್ತದೆ ಎನ್ನುವುದನ್ನು ಗಮನಿಸಿರಲಿಕ್ಕಿಲ್ಲ. ಇದರ ಬಗ್ಗೆ ಸರಕಾರದಲ್ಲಿ ಮನವಿ ಸಲ್ಲಿಸಲು ಇಲ್ಲಿಂದ ಸುಮಾರು 400–500 ಜನರು ಬಂದಿದ್ದರು ಮತ್ತು ಇದರಲ್ಲಿ ಒಂದು ಇಂಚು ಜಾಗವನ್ನು ಯಾರಿಗೂ ಕೊಡಕೂಡದು ಎಂದು ಅವರು ಸರಕಾರಕ್ಕೆ ಒತ್ತಾಯ ಮಾಡುತ್ತಿದ್ದಾರೆ. ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳದಂತೆ ಸ್ಟೇ ಆರ್ಡರು ಕೊಡಬೇಕೆಂದು ರೆವೆನ್ಯೂ ಮಂತ್ರಿಗಳ ಕಡೆಗೆ ಕೇಳಿದರೆ ನಮ್ಮ ಸರಕಾರದಲ್ಲಿರುವ ಮಂತ್ರಿಗಳು ಅಲ್ಲಿರುವ ಎಕ್ಸ್ ಮಂಡಲ್ ಕಾಂಗ್ರೆಸ್ಸಿನ ಪ್ರೆಸಿಡೆಂಟರವರಿಗೆ ಹೆದರಿ ಬಿಟ್ಟರು ಎಂತ ಕಾಣುತ್ತದೆ. ಇಲ್ಲಿ ಸ್ಟೇ ಆರ್ಡರು ಕೊಡಲಿಲ್ಲ. ಇವೊತ್ತು ಜಿಲ್ಲಾಧಿಕಾರಿಗಳು ಸರಕಾರಕ್ಕೆ ಶಿಫಾರಸು ಮಾಡುವಾಗ ಇದೊಂದು ವ್ಯರ್ಥವಾದ ಭೂಮಿ ಎಂದು ಹೀಗೆ ಒಬ್ಬರು ಜವಾಬುದಾರಿ ಇರುವಂತಹ ಅಧಿಕಾರಿಗಳು ಹೇಳಿದ್ದಾರೆ. ಹಾಗೆ ಇವರು ಹೇಳಿರುವ ಜಾಗಕ್ಕೆ ಬೇಕಾದರೆ ನನಗೇ ಕೊಡಲಿ ನಾನೇ ಸರಕಾರಕ್ಕೆ ಇವೆರಡು ಎಕರೆಗಳಿಗೆ ಸುಮಾರು ಒಂದು ಲಕ್ಷದಷ್ಟು ಹಣ ಕೊಡುತ್ತೇನೆ; ಮತ್ತು ಇದನ್ನು ನಾನು ತೆಗೆದುಕೊಳ್ಳುವುದಕ್ಕೂ ತಯಾರಾಗಿದ್ದೇನೆ. ಬೆಂಗಳೂರಿನಲ್ಲಿರುವವರಿಗೆ ಏನೂ ತಿಳಿಯುವುದಿಲ್ಲ ಎಂದು ಇಲ್ಲಿಂದ ಜಿಲ್ಲಾಧಿಕಾರಿಗಳು ಇದು ಯೂಸ್‌ಲೆಸ್ ಆಗಿದೆ ಬರೀ ಹೊಂಡದಂತಿರುವ ಜಾಗ ಇದರಿಂದೇನೂ ಉಪಯೋಗವಿಲ್ಲ ಎಂದು ಹೇಳಿದರೆ ಇದನ್ನು ನಾವು ಇಲ್ಲಿ ಹೇಗೆ ಹೇಳಬೇಕು ? ನಾನೇ ಒಂದು ಲಕ್ಷ ಸರಕಾರಕ್ಕೆ ಕೊಡುತ್ತೇನೆ ಎಂದೂ ನನ್ನ ಪತ್ರದಲ್ಲಿ ತಿಳಿಸಿದ್ದೇನೆ. ನಾಲ್ಕು ವರ್ಷಗಳಿಂದ ಇಲ್ಲಿರುವ ಜಿಲ್ಲಾಧಿಕಾರಿಗಳು ಇರುವುದರಿಂದ ಇಲ್ಲಿನ ಜನಕ್ಕೆ ಬಹಳ ಅನ್ಯಾಯಗಳಾಗಿವೆ. ಇವರನ್ನು ಇಲ್ಲಿಂದ ಟ್ರಾನ್ಸ್‌ಫರು ಮಾಡಬೇಕು ಎಂದು ಹೇಳಿದರೂ ಮಾಡಲಿಲ್ಲ. ಒಂದೇ ಕಡೆಯಲ್ಲೇ ಇಂತಹ ಅಧಿಕಾರಿಗಳನ್ನು ನಾಲ್ಕೈದು ವರ್ಷಗಳ ಕಾಲ ಇಟ್ಟರೆ ಜನರಿಗೆ ಇಲ್ಲದ ಅನ್ಯಾಯಗಳು, ತೊಂದರೆಗಳು ಆಗಲು ಅವಕಾಶವಾಗುತ್ತವೆ. ಸರಕಾರ ಹೀಗೆ ಇಲ್ಲದ ಸಲ್ಲದ ಬಾಬುಗಳಿಗೆ ಖರ್ಚು ಮಾಡುತ್ತಾ ಹೋದರೆ ಇದು

ಖೋತಾ ಬಡ್ಜೆಟ್ಟಾಗದೇ ಇನ್ನೇನು ಆಗುತ್ತದೆ? ಇಲ್ಲದ ಸಲ್ಲದ ನೇಮಕಗಳನ್ನು ಕೆಲವು ಇಲಾಖೆಗಳಲ್ಲಿ ಮಾಡುವುದನ್ನು ತಪ್ಪಿಸಿದ್ದರೆ ಇಂತಹ ಖೋತಾ ಬಡ್ಜೆಟ್ಟು ಬರುತ್ತಿರಲಿಲ್ಲ. ಇದಕ್ಕೆ ಬದಲು ಸರ್ಪ್ಲಸ್ ಬಡ್ಜೆಟ್ಟು ಆಗುತ್ತಿತ್ತು ಎಂದು ಖಂಡಿತ ಹೇಳುತ್ತೇನೆ.

ಮೊನ್ನೆ ನಮ್ಮ ಆಹಾರ ಮಂತ್ರಿಗಳಾದ ಶ್ರೀಮಾನ್ ವಿಠಲದಾಸ ಶೆಟ್ಟರವರು ನಮ್ಮ ಊರಿಗೆ ಬಂದಿದ್ದರು. ಇವರು ಬಂದಾಗ ಇಲ್ಲಿಗೆ ಬಂದ ವಲಸೆ ಜನರು ಇವರನ್ನು ನೋಡಲು ಬಂದು ಮನವಿ ಸಲ್ಲಿಸಿದರು. ಪಣಂಬೂರು ಕಡೆಯಿಂದ ಬಂದಿರುವ ಜನರೆಲ್ಲ ಕೋಣಗಳು ಎಂದು ಅವರನ್ನು ಯಾರಿಗೂ ಬೇಡವಾದ ಸ್ಮಶಾನ ಇರುವ ಜಾಗಕ್ಕೆ ಕಳಿಸಿದ್ದಾರೆ. ಇದಕ್ಕಾಗಿ ಈ ಜನ ನಮಗೆ ಸರಿಯಾಗಿ ನೀರು ಸಿಗುವುದಿಲ್ಲ ಮತ್ತು ವಾಸಕ್ಕೆ ಈ ಜಾಗ ಸರಿಯಿಲ್ಲ ಎಂದು ಸುಮಾರು ಎರಡು ವರ್ಷಗಳಿಂದ ಹೇಳುತ್ತಿದ್ದಾರೆ. ಇವರು ಗದ್ದೆ ಬಯಲು ಇರುವ ಬೇರೆ ಕಡೆಗಳಲ್ಲಿ ಜಾಗ ಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ಇವರನ್ನು ಇಲ್ಲಿನ ಅಧಿಕಾರಿಗಳು ಹೆದರಿಸುತ್ತಿದ್ದಾರೆ. ಇದಕ್ಕಾಗಿ ನಮ್ಮ ಊರಿನ ಕಡೆಗೆ ಈ ಆಹಾರ ಮಂತ್ರಿಗಳು ಬಂದಾಗ ಬಹಳ ದೊಡ್ಡದಾಗಿ ತಳಿರು ತೋರಣಗಳನ್ನು ಕಟ್ಟಿಸಿದರು, ಒಂದು ದೊಡ್ಡ ಚಪ್ಪರವನ್ನೂ ಹಾಕಿಸಿದ್ದರು. ಇವರು ಬರುತ್ತಾರೆ ಎಂದು ನನಗೂ ಗೊತ್ತಿತ್ತು. ಆದರೆ ಇಲ್ಲಿ ಇಂತಹ ದೊಡ್ಡ ಸಮಾರಂಭವಾಗುವಾಗ ಈ ಕ್ಷೇತ್ರದ ಎಂ. ಎಲ್. ಎ. ಆಗಿದ್ದರೂ ನನಗೆ ಇಲ್ಲಿಗೆ ಬರಲು ಆಹ್ವಾನ ಇರಲಿಲ್ಲ. ಇಲ್ಲಿಗೆ ಬೇಕಾದ ಹಾಗೆ ಪೋಲೀಸರು ಬಂದಿದ್ದರು ಇತರ ಕಾಂಗ್ರೆಸ್ಸು ಸದಸ್ಯರುಗಳೂ ಬಂದಿದ್ದರು. ನಮ್ಮನ್ನೆಲ್ಲಾ ಪಣಂಬೂರು ವೆಂಕುಗಳು ಎಂದು ತಿಳಿದರು ಎಂತ ಕಾಣುತ್ತದೆ. ನಮ್ಮಲ್ಲಿ ಒಂದು ಗಾದೆ ಇದೆ: "ವೆಂಕುಗಳು ಪಣಂಬೂರಿಗೆ ಹೋದ ಹಾಗೆ". ಇದರಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ನಮ್ಮಲ್ಲಿ ಒಬ್ಬ ಶ್ಯಾನುಭೋಗರಿದ್ದರಂತೆ ಇವರು ರಾತ್ರಿ ನಿದ್ದೆ ಮಾಡುವಾಗ ನಾಳೆ ವೆಂಕುವನ್ನು ಉಗ್ರಾಣಕ್ಕೆ ಕಳುಹಿಸಬೇಕು ಎಂದು ಇತರರೊಡನೆ ಮಾತಾಡುತ್ತಾ ರಾತ್ರಿ ನಿದ್ದೆ ಮಾಡಿದರು. ಇದನ್ನು ವೆಂಕು ಎನ್ನುವವನು ಕೇಳಿಸಿಕೊಂಡು ಮುಂಜಾನೆಯಾಗುವುದಕ್ಕೆ ಮೊದಲೇ ಪಣಂಬೂರಿಗೆ ಹೋಗಿ ವಾಪಸು ಬಂದನಂತೆ. ಬೆಳಗ್ಗೆ ಎದ್ದ ಮೇಲೆ ಶ್ಯಾನುಭೋಗರು ಎಲ್ಲಿಗೆ ಹೋಗಿದ್ದಿರಿ ಎಂದು ವೆಂಕುವನ್ನು ಕೇಳಿದಾಗ ಅವನ ಪಣಂಬೂರಿಗೆ ಹೋಗಿಬಂದೆ ಎಂದನಂತೆ. ನಮ್ಮ ಆಹಾರ ಮಂತ್ರಿಗಳು ಪಣಂಬೂರಿಗೆ ವೆಂಕು ಹೋದಂತೆ ಇಲ್ಲಿಗೆ ಬಂದು ವಾಪಸು ಹೋದರು. ಇಲ್ಲಿನ ಜನ ಬಂದು ನಮ್ಮನ್ನು ಸ್ಮಶಾನ ಇರುವ ಜಾಗಕ್ಕೆ ಕಳುಹಿಸಬೇಡಿ ಇದಕ್ಕೆ ಬೇರೆ ಜಾಗ ಕೊಡಿ ಎಂದು ಕೇಳಿದಾಗ ಅವರು ಅಲ್ಲೇ ಇರಿ ಚೆನ್ನಾಗಿರುತ್ತದೆ ಎಂದು ಹೇಳಿದರಂತೆ. ಶವ ದರ್ಶನಂ ಶುಭ ದರ್ಶನಂ ಎನ್ನುವ ಹಾಗೆ ಮುಸಲ್ಮಾನರು ಅವರ ಮಸೀದಿಗಳೊಳಗೆ ಶವವನ್ನು ಗೋರಿ ಮಾಡುತ್ತಾರೆ. ಕ್ರಿಶ್ಚಿಯನ್ನರು ಅವರ ಚರ್ಚುಗಳಲ್ಲಿ ಗೋರಿ ಮಾಡುತ್ತಾರೆ. ಆದುದರಿಂದ ಇಲ್ಲಿರುವ ಸ್ಮಶಾನದಿಂದ ಏನೂ ತೊಂದರೆ ಆಗುವುದಿಲ್ಲ ಎಂತ ಹೇಳಿದರಂತೆ. ಈ ಜನರನ್ನು ಭೂತಗಳು ಎಂದು ತಿಳಿದ ಹಾಗೆ ಇದೆ. ಇದೇನು ಇಲ್ಲಿರುವ ಜನ ಎಲ್ಲ ಪಿಶಾಚಿ ಸ್ವರೂಪದವರು ಎಂದು ಮಂತ್ರಿಗಳು ಅರ್ಥಮಾಡಿದ್ದಾರೋ ಏನೋ? ಓ ಮಂತ್ರಿಗಳೇ, ಸ್ಮಶಾನ ಇರುವ ಭೂಮಿ ಕೊಟ್ಟರೆ ನೀವು ಮನೆ ಕಟ್ಟಿಕೊಳ್ಳಲು ಹೋಗುತ್ತೀರಾ? ಒಳ್ಳೆಯ ವಸ್ತುಗಳನ್ನು ಕಂಡ ತಕ್ಷಣ ನನಗೆ ಬೇಕು ಎನ್ನುವ ಭೂತದಂತಾಗಿದೆ ಇಂದು ಇರುವ ಕಾಂಗ್ರೆಸ್ಸು ಸಂಸ್ಥೆ. ಇಲ್ಲಿ ಸ್ಮಶಾನದಲ್ಲಿರುವ ಜನ ಕಷ್ಟಪಡುತ್ತಿದ್ದೇವೆ ಎಂದು ನಿಮ್ಮಲ್ಲಿ ಅವರ ಕಷ್ಟಗಳನ್ನು ಹೇಳಿಕೊಂಡು ಅವರು ಬೇರೆ ಜಾಗ ಕೊಡಬೇಕೆಂದು ಕೇಳಿದರೂ ಅವರನ್ನು ಸ್ಮಶಾನಕ್ಕೆ ಹೋಗಿ ಇರಿ ಎಂದು ಹೇಳಿದರೆ ನೀವು ಸರಕಾರದ ದುಡ್ಡನ್ನು ಖರ್ಚು ಮಾಡುವುದು ಇದಕ್ಕಾಗಿಯೋ?

ಶ್ರೀ ಕೆ. ಪುಟ್ಟಸ್ವಾಮಿ (ನ್ಯಾಯ, ಕಾರ್ಮಿಕ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ನಮ್ಮಲ್ಲಿ ಯಾರಿಗೂ ಭೂತ ಹಿಡಿದಿಲ್ಲವಲ್ಲ.

ಶ್ರೀ ಪಿ. ವಿ. ಐತಾಳ.—ಸ್ಮಶಾನದಲ್ಲಿರುವ ಜನರು ಭೂತಗಳು ಎಂದು ಇವರ ಅಭಿಪ್ರಾಯ ಇದ್ದ ಹಾಗೆ ಕಾಣುತ್ತದೆ. ಹೀಗೆ ಎಲ್ಲೆಲ್ಲಿ ಒಳ್ಳೊಳ್ಳೆಯ ಭೂಮಿ ಇದೆಯೋ ಅದು ಸರ್ಕಾರಕ್ಕೆ ಬೇಕು, ಯಾರಿಗೂ ಬೇಡವಾದದ್ದು ಸ್ಮಶಾನ ಜಾಗ ಬಾಕಿಯವರಿಗೆ ಕೊಡುತ್ತಾರೆ. ಮೊನ್ನೆ ಬೈಂದೂರ್‌ನಲ್ಲಿ ಒಂದು ಕಥೆ ನಡೆಯಿತು. ಅಲ್ಲಿ ಒಂದು ಆದಿಭೂತ ಎಂದು ಇದೆ, ಅದಕ್ಕೆ ಹೋಗಿ ಪೂಜೆ ಮಾಡುತ್ತಾರೆ. ಅಲ್ಲಿ ಪೂಜೆಗೆ ಹೆಂಗಸರು, ಮಕ್ಕಳು ಹೋದರೆ ಅವರನ್ನು ಓಡಿಸಿಕೊಂಡು ಹೋಗುತ್ತದೆ. ಒಂದು ದಿವಸ ಅಲ್ಲಿ ಒಬ್ಬನನ್ನು ಹಿಡಿದುಕೊಂಡು ಹೋಯಿತು. ಆ ರೀತಿ ಒಳ್ಳೊಳ್ಳೆಯ ವಸ್ತುಗಳು ನೋಡಿದ ತಕ್ಷಣ 'ಹಾಹಾ" ಅದು ನನಗೆ ಬೇಕು ಎನ್ನುವ ಒಂದು ಭೂತದಂತಾಗಿದೆ ಈ ಕಾಂಗ್ರೆಸ್ ಸಂಸ್ಥೆ ಸೂರತ್ಕಲ್‌ನಲ್ಲಿ ಈರೀತಿ ಮಾಡಿದ್ದಾರೆ. ಇದರ ಬಗ್ಗೆ ಮಂಗಳೂರಿನ ಡೆಪ್ಯೂಟಿ ಕಮಿಷನರ

(ಶ್ರೀ ಪಿ. ವಿ. ಐತಾಳ್)

ಶ್ರೀ ನಾಗೇಗೌಡರ 22-7-66 ರಲ್ಲಿ ಬರೆದ ಲೆಟರ್ ಪ್ರಕಾರ 11-7-66 ರಲ್ಲಿ ಹೀರಂಗ್ ಕೂಡ ಆಯಿತು. ಇದರ ಬಗ್ಗೆ ನಾನು ಒಂದು ಕೊಶ್ಚನ್ ಸಹ ಕಳುಹಿಸಿದ್ದೇನೆ, ಇದರಲ್ಲಿ ನ್ಯಾಯ ಮಾಡಿ ಕೊಡಬೇಕು ಎಂದು. ಈ ಭೂತದ ಉಪದ್ರವನ್ನು ತೀವ್ರವಾಗಿ ಬಿಡಿಸಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮಲ್ಲಿ ಯಾರಿಗೂ ಭೂತ ಹಿಡಿದಿಲ್ಲವಲ್ಲ.

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ (ವಿದ್ಯಾಶಾಖೆಯ ಉಪಮಂತ್ರಿಗಳು).—ನಿಮಗೆ ಹಿಡಿದುರುವುದು ಹೆಣ್ಣು ಭೂತವೊ, ಗಂಡೋ (ನಗು).

ಶ್ರೀ ಪಿ. ವಿ. ಐತಾಳ.—ಆ ಭೂತಕ್ಕೆ ಕುರಿ, ಕೋಳಿ ಬಲಿ ನೀಡಬೇಕು. ಭೂತಕ್ಕೆ ಹೆದರುವಂತೆ ನಾವು ಮಂತ್ರಿಗಳಿಗೆ ಹೆದರುತ್ತೇವೆ. ಹೆಂಗಸರು, ಮಕ್ಕಳು ಮತ್ತು ದನಕರುಗಳಿಗೆ ಭೂತ ಯಾವ ರೀತಿ ಉಪದ್ರವ ಕೊಡುತ್ತದೋ ಅದೇ ರೀತಿ ನೀವು ಉಪದ್ರವ ಮಾಡಬೇಡಿ ಎಂದು ಹೇಳು ತ್ತೇನೆ. ನಿಮ್ಮ ಕಬ್ಬನ್ ಪಾರ್ಕ್ ಜಾಗವನ್ನು ಬೇಕು ಎಂದು ಕೇಳಿದರೆ ಅನನ್ನೂ ಕೊಟ್ಟುಬಿಡಿ ಎಂದು ಹೇಳುತ್ತೇನೆ.

ಇನ್ನು ಫಿಷರೀಸ್ ವಿಷಯ. ದಕ್ಷಿನ ಕನ್ನಡಜಿಲ್ಲೆಗೆ ಇದರ ಬಗ್ಗೆ ಕೋಟಿ ಕೋಟಿ ಗಟ್ಟಲೆ ಹಣ ಖರ್ಚಾಗುತ್ತದೆ. ಇದರಿಂದ ಯಾರಿಗೆ ಉಪಯೋಗವಾಗುತ್ತದೆ ಎನ್ನುವುದರ ಬಗ್ಗೆ ವಿಚಾರಣೆ ಆಗಬೇಕು. ಯಾರು ಮೀನುಗಾರರು ಅಲ್ಲವೋ ಅವರಿಗೆ, ಮೀನಿನ ಕಸಬು ಇಲ್ಲದವರಿಗೆ ಹಣ ಕೊಡುತ್ತಿದ್ದಾರೆ. ಸ್ವಾಮಿ, ಫಿಷರೀಸ್ ಬೋರ್ಡ್ ಎಂದು ಮೊನ್ನೆ ಮಾಡಿದಿರಿ. ಕೋಲಾರದ ಅನೇಕ ಎಂ. ಎಲ್. ಎ. ಗಳಿಗೆ ಫಿಷರೀಸ್ ಬೋರ್ಡ್‌ನಲ್ಲಿ ಪ್ರಾತಿನಿಧ್ಯ ಕೊಟ್ಟಿದ್ದೀರಿ. ಕರಾವಳಿ ಪ್ರದೇಶದಲ್ಲಿರುವ ಎಂ. ಎಲ್. ಎ. ಗಳನ್ನು ಬಿಟ್ಟು ಬೇರೆಯವರಿಗೆ ಪ್ರಾತಿನಿಧ್ಯ ಕೊಟ್ಟಿದ್ದೀರಿ. ಎಂ. ಪಿ. ಸಿ. ಸಿ. ಪ್ರೆಸಿಡೆಂಟರು ಇರಲಿಲ್ಲವೇ ? ಅವರನ್ನೂ ಬಿಟ್ಟು ಶ್ರೀಮತಿ ಲೀಲಾವತಿ ರೈ ಅವರನ್ನು ಫಿಷರೀಸ್ ಬೋರ್ಡ್‌ಗೆ ಹಾಕಿದ್ದೀರಿ. ಇದರಂತಹ ನಾಚಿಕೆಗೇಡು ಎಲ್ಲೂ ಇಲ್ಲ. ಸಾಮಾನ್ಯವಾಗಿ ಆ ಏರಿಯಾದಲ್ಲಿ 8—10 ಜನ ಎಂ. ಎಲ್. ಎ. ಗಳು ಇದ್ದರೂ ಅವರುಗಳಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ಸಮುದ್ರದಲ್ಲಿಯೂ ಮೀನುಗಳು ಇವೆ. ಕೋಲಾರದಲ್ಲಿರುವ ಕೆರೆಗಳಲ್ಲಿಯೂ ಮೀನು ಇವೆ. ಅವರನ್ನು ಕೆರೆಗಳ ಪರವಾಗಿ ಹಾಕಿದ್ದಾರೆ.

ಶ್ರೀ ಪಿ. ವಿ. ಐತಾಳ.—ಕೋಲಾರ ಜಿಲ್ಲೆ ಮೊದಲಿನಿಂದಲೂ ಕ್ಷಾಮದ ಜಿಲ್ಲೆ. ಕುಡಿಯಲಿಕ್ಕೆ ನೀರೂ ಸಿಕ್ಕುವುದಿಲ್ಲ. ನಮ್ಮ ಸರ್ಕಾರದವರು ಅವರಿಗೆ ಬೇಕಾದಷ್ಟು ಪ್ರಾತಿನಿಧ್ಯ ಕೊಡುತ್ತಿ ದ್ದಾರೆ. ಅದು ಗ್ಲಾಸ್‌ನೊಳಗೆ ಇರುವಂಥ ಮೀನು ಹೊರತು ಸಮುದ್ರದಲ್ಲಿರುವಂಥ ಮೀನು ಅಲ್ಲ. ಈ ರೀತಿ ಅಡ್ಮಿನಿಸ್ಟ್ರೇಷನ್ ಮಾಡುತ್ತಾರೆಂದು ನಾನು ವಿರೋಧಪಕ್ಷದವನಾಗಿ ಹೇಳುತ್ತೇನೆ.

ಇನ್ನು ನೀರಾವರಿ ಯೋಜನೆ ವಿಷಯವಾಗಿ ಹೇಳುವುದಾದರೆ ಶ್ರೀ ರಾಮಕೃಷ್ಣ ಹೆಗಡೆ ಯವರು ದೊಡ್ಡ ಮನಸ್ಸು ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಒಂದೇ ಒಂದು ಪ್ರಾಜೆಕ್ಟ್‌ಗೆ ಹಣ ಕೊಟ್ಟಿದ್ದಾರೆ, ಡಿಸ್ಟ್ರಿಕ್ಟ್ ಲೆವಲ್ ಸೆಮಿನಾರ್ ನಡೆಯುತ್ತಿದ್ದಾಗ ಅನೇಕ ಕಡೆಯಲ್ಲಿ ನನ್ನನ್ನು ಮೈನರ್ ಇರ್ರಿಗೇಷನ್ ಕಮಿಟಿಯ ಛೇರ್ಮನ್ ಆಗಿ ಮಾಡಿದ್ದರು.

ಬಿಜ್ಜೂರು ಪ್ರಾಜೆಕ್ಟ್ ಎಂದು 131 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಒಂದು ಯೋಜನೆ ಯನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಅದರಲ್ಲಿ ಈ ಸಲ 80 ಸಾವಿರ ರೂಪಾಯಿ ಖರ್ಚು ಮಾಡುತ್ತಾರೆ. ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಖರ್ಚು ಮಾಡಲು ಒಪ್ಪಿ ಪ್ರಪೋಸ್ ಮಾಡಿದ ಹಣ 2 ಲಕ್ಷ ರೂಪಾಯಿ. 131 ಲಕ್ಷ ರೂಪಾಯಿ ಪ್ರಾಜೆಕ್ಟ್‌ನಲ್ಲಿ ನಾವು ವರ್ಷಕ್ಕೆ ಒಂದೆರಡು ಲಕ್ಷ ರೂಪಾಯಿ ಖರ್ಚು ಮಾಡಿದರೆ ಇದು ಯಾವ ಕಾಲಕ್ಕೆ ಆಗುತ್ತದೆ. ನಮ್ಮ ಮಕ್ಕಳ ಅಥವಾ ಮರಿಮಕ್ಕಳ ಕಾಲಕ್ಕೆ ಆಗಬಹುದು. ನಾನು ಇಂಜಿನಿಯರುಗಳ ಹತ್ತಿರ 131 ವರ್ಷಗಳಲ್ಲಿ ಆಗು ವಂಥ ಪ್ರಾಜೆಕ್ಟ್‌ಗಳನ್ನು ಮಾಡುವದುಂಟೋ ಎಂದು ಕೇಳಿದಾಗ ಟೆಕ್ನಿಕಲಿ ಫೀಸಿಬಲ್ ಹೌದೋ ಅಲ್ಲವೋ ಎಂದು ಡೌಟ್‌ಫುಲ್ ಇದೆ ಎಂದು ಹೇಳಿದರು. ಹಾಗಾದರೆ ಏಕೆ ರೆಕಮೆಂಡೇಷನ್ ಮಾಡುತ್ತೀರಿ ಎಂದರೆ ನಿಮಗೆ ಏನಾದರೂ ಕೊಡಬೇಕೋ ಇಲ್ಲವೋ ? ಅದಕ್ಕೆ ಕೊಡುತ್ತೇವೆಂದು ಹೇಳಿದರು. ಪ್ರಾಜೆಕ್ಟ್‌ಗಳನ್ನು ಮಾಡಿ ಹಣವನ್ನು ವ್ಯರ್ಥ ಮಾಡುವುದಕ್ಕಿಂತ ಟೆಕ್ನಿಕಲ ಫೀಸಿಬಲ್ ಇದ್ದರೆ ಮಾತ್ರ ತೆಗೆದುಕೊಳ್ಳಬಹುದು ಎಂದು ಹೇಳುತ್ತೇನೆ.

5-00 P. M.

ವಿರೋಧ ಪಕ್ಷದ ಸದಸ್ಯರ ಕ್ಷೇತ್ರಗಳಿಗೆ ಹಣ ಸರಿಯಾಗಿ ಖರ್ಚು ಮಾಡುವುದಿಲ್ಲ. ಈ ಸಲ ನೆರೆ ಬಂದಾಗ ಇಬ್ಬರು ಹುಡುಗರು ಸತ್ತರು. ನಾನು ಇದರ ಬಗ್ಗೆ ಮಂತ್ರಿಗಳಿಗೆ ಬರೆದಿದ್ದೇನೆ. ಪಬ್ಲಿಕ್ ವರ್ಕ್ಸ್ ಇಲಾಖೆಯ ಕಾರ್ಯದರ್ಶಿಯವರಿಗೂ ಬರೆದಿದ್ದೇನೆ. ಶ್ರೀ ನಾಗಪ್ಪ ಆಳ್ವ ಅವರ ಊರಿನ ಹತ್ತಿರ ಮೂರು ಗ್ರಾಮಗಳುಂಟು; ಉಳಾಯಿ, ಬೆಟ್ಟ ಮಲ್ಲೂರು ಮತ್ತು ಬಂಡೋಲ ಎಂಬ ಗ್ರಾಮಗಳಿವೆ. ಅವರು ಮನಸ್ಸು ಮಾಡಿದ್ದರೆ ಏನಾದರೂ ಆಗುತ್ತಿತ್ತು. ಅವರು ಮನಸ್ಸು ಮಾಡಲಿಲ್ಲ. ನಾನು ವಿಧಾನ ಸಭೆಯ ಸದಸ್ಯನಾಗಿ ಬಂದ ಮೇಲೆ ಹತ್ತಿಪ್ಪತ್ತು ಕಾಗದ ಬರೆದೆ. ಈ ಗ್ರಾಮಗಳಿಂದ ಮಕ್ಕಳು ನದಿ ದಾಟಿ ಬರಬೇಕು. ಅಲ್ಲಿ ಒಂದು ಸೇತುವೆ ಕಟ್ಟಬೇಕಾದರೆ 60-70 ಸಾವಿರ ರೂಪಾಯಿ ಆಗಬಹುದು. ಮಾನ್ಯ ವೀರೇಂದ್ರ ಪಾಟೀಲರು ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳಾಗಿದ್ದಾಗ ಅವರಿಗೆ ಕೂಡ ಬರೆದಿದ್ದೇನೆ. ಪರಿಶೀಲಿಸುತ್ತೇನೆ ಎಂದು ಹೇಳಿದ್ದರು. ಎರಡು ಮಕ್ಕಳು ಸತ್ತುಹೋದರು. ಅಲ್ಲಿ ಒಂದು ಸೇತುವೆ ಇದ್ದಿದ್ದರೆ ಅವರು ಸತ್ತುಹೋಗುವುದಕ್ಕೆ ಅವಕಾಶವಿರುತ್ತಿರಲಿಲ್ಲ. ಹೀಗಿದ್ದರೂ ಕೂಡ ವಿರೋಧ ಪಕ್ಷದವರು ಹೇಳಿದರು ಎಂದು ಅದನ್ನು ಕೈಬಿಟ್ಟಿದ್ದಾರೆ ಎಂದು ಕಾಣುತ್ತದೆ. ಈ ವರ್ಷವೂ ಸಹ ಅದು ಆಯವ್ಯಯ ಪಟ್ಟಿಯಲ್ಲಿಲ್ಲ. ಈ ಮೂರು ಹಳ್ಳಿಗಳಿಂದ ಬರುವ ಮಕ್ಕಳು ನರೆ ಕಾಲದಲ್ಲಿ ದೋಣಿ ನಡೆಸುವವರಿಗೆ ಪ್ರತಿಯೊಬ್ಬರೂ 25 ರೂಪಾಯಿ ಕೊಡಬೇಕು. ಶ್ರೀಮತಿ ಲೀಲಾವತಿ ರೈ ಅವರ ಕ್ಷೇತ್ರಕ್ಕೆ ಹತ್ತಿರವಿರುವಂತ ಜಾಗ. ಶಾಲೆಗೆ ಮಕ್ಕಳು ಹೋಗಿ ಬರಲು ಒಂದು ಸೇತುವೆಯನ್ನು ಮಾಡಿ ಕೊಡದೆ ಇದ್ದರೆ ನಮಗೆ ಸ್ವಾತಂತ್ರ್ಯ ಬಂದು ಏನು ಪ್ರಯೋಜನ !

ಶ್ರೀ ರಾಮಕೃಷ್ಣ ಹೆಗಡೆ.—ಒಂದು ಲಕ್ಷಕ್ಕಿಂತ ಕಡಿಮೆ ಅಂದಾಜು ಇರುವ ಕೆಲಸಗಳು ಬಜೆಟ್ಟಿನಲ್ಲಿ ಬರವುದಿಲ್ಲ.

ಶ್ರೀ ಪಿ. ವಿ. ಐತಾಳ.—ಬಿಜ್ಜೂರು ಪ್ರಾಜೆಕ್ಟಿಗೆ 80 ಸಾವಿರ ರೂಪಾಯಿ ಬಜೆಟ್ಟಿನಲ್ಲಿ ತೋರಿಸಲಾಗಿದೆಯಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಆ ಪ್ರಾಜೆಕ್ಟಿನ ಅಂದಾಜು ಮೊತ್ತ ಜಾಸ್ತಿ ಇದೆ.

ಶ್ರೀ ಪಿ. ವಿ. ಐತಾಳ.—ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿಗೆ ಕೋಟಿಗಟ್ಟಲೆ ಹಣವನ್ನು ಕೇಂದ್ರ ಸರ್ಕಾರದವರು ಖರ್ಚು ಮಾಡಿದ್ದಾರೆ. ಅಲ್ಲಿ ಕುಡಿಯುವ ನೀರಿಲ್ಲ. ಅದೇ ಪ್ರಕಾರ ರೀಹ್ಯಾಬಿಲಿಟೇಷನ್‌ಗೋಸ್ಕರ ಸ್ಮಶಾನದ ಹತ್ತಿರ ಕಟ್ಟಿರುವ 1200 ಮನೆಗಳಿಗೂ ನೀರಿಲ್ಲ. ಬೋಳಾರಕಟ್ಟೆ, ಪಾವಂಜೆ ಇವುಗಳ ಒಂದೂವರೆ ಮೈಲಿಯೊಳಗೆ ಇಂಜಿನಿಯರಿಂಗ್ ಕಾಲೇಜಿದೆ. ಪೈಪ್ ಲೈನ್‌ನಲ್ಲಿ ಪ್ರೊಟೆಕ್ಟೆಡ್ ವಾಟರ್ ತರಬೇಕು. ಇದರ ಬಗ್ಗೆ ಅಸೆಂಬ್ಲಿಯಲ್ಲಿ ಒಂದು ಪ್ರಶ್ನೆ ಹಾಕಿದೆ. ಇಂಜಿನಿಯರಿಂಗ್ ಕಾಲೇಜಿನಿಂದ ಅನಾನಿಮಸ್ ಲೆಟರ್ಸ್ ಬರುತ್ತಿವೆ, ವಿದ್ಯಾರ್ಥಿಗಳಿಂದ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಎಂದು ಪತ್ರಗಳು ಬರುತ್ತಿವೆ, ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿರುವಾಗ ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿದ್ದರೂ ಕೂಡ ಒಂದೆರಡು ವರ್ಷದಲ್ಲಿ ಅದರಲ್ಲಿ ನೀರು ಬತ್ತಿ ಹೋಗುತ್ತದೆ. ಅದಕ್ಕಾಗಿ ಖಾಯಂ ವ್ಯವಸ್ಥೆಯನ್ನು ಮಾಡಬೇಕು ಎಂದು ಹುಡುಗರು ಹೇಳುತ್ತಾರೆ ಎಂದರೆ ಅದಕ್ಕೆ ಉತ್ತರ ಕೊಟ್ಟಿದ್ದು ಏನೆಂದರೆ ದೇರ್ ಈಸ್‌ನೊ ಷಾರ್ಟೇಜ್ ಆಫ್ ವಾಟರ್ ಅಟ್ ಆಲ್ ಎಂದು. ಈಗ ಅದೇ ಸ್ಕೀಮಿಗೆ ಮಂಜೂರಾತಿಯನ್ನು ಕೊಟ್ಟಿದ್ದಾರೆಂದು ತಿಳಿಯುತ್ತೇನೆ. ಇದನ್ನು ಮೊದಲು ವಿರೋಧ ಪಕ್ಷದವರು ಹೇಳಿದರು ಎಂದು ಮಾಡದೆ ಅಲ್ಲಿನ ಪ್ರಿನ್ಸಿಪಾಲರು ಬರೆದಿದ್ದಾರೆ ಎಂದು ಮಂಜೂರು ಮಾಡಿದ ಹಾಗೆ ಕಾಣುತ್ತದೆ.

ಪಣಂಬೂರಿಗೆ ತಂಬಿನೇರು ಎಂಬಲ್ಲಿಂದ ನೀರನ್ನು ತರುತ್ತಾರೆ. ಅಲ್ಲಿಂದ ನಾಲ್ಕು ಮೈಲಿ ದೂರದಲ್ಲಿ ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿದೆ, ಅಲ್ಲಿಗೂ ಆ ನೀರನ್ನು ತರಬೇಕು ಎಂದು ಹೇಳಿದ್ದಕ್ಕೆ ಅದನ್ನು ಅಪ್ರೂವ್ ಮಾಡಿದ್ದಾರೆಂದು ಗೊತ್ತಾಗುತ್ತದೆ. ವಿರೋಧ ಪಕ್ಷದವರು ಹೇಳುವುದು ಸರಿಯಲ್ಲ, ಕಾಂಗ್ರೆಸ್‌ನವರು ಹೇಳಿದರೆ ಒಳ್ಳೆಯದು ಎಂದು ಸರ್ಕಾರ ತಿಳಿದುಕೊಂಡಿದೆ. ಅವರು ಒಂದು ವಿಚಾರವನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು, ಇನ್ನು ಮೂರು ವರ್ಷದಲ್ಲಿ ಅವರು ಈ ಕಡೆಗೆ ಬರಬೇಕಾಗುತ್ತದೆ. ಆವಾಗ ಅವರ ಸ್ಥಿತಿ ಹೇಗಾದೀತು, ಯಾವ ಮನೆಯ ನೋವು ಆದೀತು ! ಹಾಗೆ ಒಂದು ದಿವಸ ಆಗಲೇ ಬೇಕು. ನ್ಯಾಯಾನ್ಯಾಯಗಳನ್ನು ಪರಿಶೀಲಿಸಿ ವಿರೋಧಪಕ್ಷದವರು ಹೇಳಿದಾಗ ಅದಲ್ಲಿ ನ್ಯಾಯವಿದೆಯೋ ಎಂದು ವಿಚಾರಿಸಿ, ಅದನ್ನು ತನಿಖೆ ಮಾಡಿ, ವಿರೋಧ ಪಕ್ಷದವರು ಹೇಳುವುದು ನ್ಯಾಯವಿದ್ದರೆ ಅದನ್ನು ಗಮನಿಸಿಕೊಂಡು ಅದಕ್ಕೆ ಬೇಕಾದ ಆದ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಸಭಾಪತಿಗಳೇ, ಹಣಕಾಸಿನ ಸಚಿವರಾದ ರಾಮಕೃಷ್ಣ ಹೆಗಡೆ ಅವರು ಮಂಡಿಸಿರುವ ಆಯವ್ಯಯ ಪಟ್ಟಿಗೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತ ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ.

ಮಾನ್ಯ ಐತಾಳ್ ಅವರ ಭಾಷಣವನ್ನು ಕೇಳಿದ ಮೇಲೆ ಯಾರೂ ಸೀರಿಯಸ್ ಮೂಡ್‌ನಲ್ಲಿ ಇರುವುದು ಬಹಳ ಕಷ್ಟ. ನಾನು ಬಜೆಟ್ ಮೇಲೆ ಮಾತನಾಡುವುದಕ್ಕೆ ಮುಂಚೆ ಸರ್ಕಾರದವರು ಕ್ಷಾಮ ನಿವಾರಣೆಗೋಸ್ಕರ ಮಾಡಿರುವ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಅರಿಕೆ ಮಾಡಿ ಆಮೇಲೆ ಬಜೆಟ್ ಮೇಲೆ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಮ್ಮ ರಾಜ್ಯದಲ್ಲಿ ಬಹಳ ಕಷ್ಟ ಬಂದು ಸಕಾಲದಲ್ಲಿ ಮಳೆಬೆಳೆಗಳಾಗದೆ ಜನತೆ ಬಹಳ ಕಷ್ಟದಲ್ಲಿದ್ದಾಗ ಸರ್ಕಾರದವರು ಮುಂದೆ ಬಂದು 8 ಕೋಟಿ ರೂಪಾಯಿಗಳಷ್ಟು ಹಣವನ್ನು ಇಡೀ ಸಂಸ್ಥಾನಮಳೆ ಖರ್ಚು ಮಾಡಿ ಕಷ್ಟ ಕಾಲದಲ್ಲಿ ಜನಗಳಿಗೆ ನೆರವಾದುದಕ್ಕಾಗಿ ನಾನು ಸರ್ಕಾರವನ್ನು ಪುನಃಪೂರ್ವಕವಾಗಿ ಅಭಿವಂದಿಸುತ್ತೇನೆ. ನಿನ್ನೆ ರೆವೆನ್ಯೂ ಸಚಿವರು ಉತ್ತರ ಕೊಡುತ್ತಾ ಉಳಿದ ಕೆಲಸಗಳನ್ನು ಪೂರೈಸುವುದಕ್ಕೆ ನಾವು ಈಗಾಗಲೇ ಅಧಿಕಾರಿಗಳಿಗೆ ಆಜ್ಞೆ ಕೊಟ್ಟಿದ್ದೇವೆ, ಇನ್ನೂ 500 ಚಿಲ್ಲರೆ ಕೆಲಸಗಳಿವೆ, ಅವನ್ನೆಲ್ಲಾ ಪೂರೈಸುವುದಕ್ಕೆ ತಕ್ಕ ಕೆಲಸ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿರುವುದು ನಿಜವಾಗಿ ಸ್ವಾಗತಾರ್ಹ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸಲಹೆ ಮಾಡತಕ್ಕುದು, ಅವರು ಆಗಲೇ 20 ಕೋಟಿ ರೂಪಾಯಿಗಳ ಶಾಶ್ವತವಾದ ಯೋಜನೆಯನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಯಾವತ್ತಿಗೂ ಕ್ಷಾಮ ತಲೆದೋರಬಾರದು. ಪದೇ ಪದೇ ಕ್ಷಾಮಕ್ಕೆ ಜನಗಳು ತುತ್ತಾಗಿ ಬಹಳ ಕಷ್ಟ ನಷ್ಟಗಳಿಗೆ ಗುರಿಯಾಗಿರತಕ್ಕದು ಎಲ್ಲರ ಗಮನಕ್ಕೂ ಬಂದಿರುವ ವಿಚಾರ. ಈ 20 ಕೋಟಿ ರೂಪಾಯಿಗಳ ಯೋಜನೆಯಲ್ಲಿ ಶಾಶ್ವತವಾದ ಪರಿಹಾರವನ್ನು ಸರ್ಕಾರದವರು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕಳಕಳಿಯಿಂದ ಸರ್ಕಾರಕ್ಕೆ ಬಿನ್ನವಿಸಿಕೊಳ್ಳುತ್ತೇನೆ.

ಈ ವರ್ಷದ ಅಯವ್ಯಯ ಪಟ್ಟಿಯಲ್ಲಿ ಖೋತ ಬಜೆಟ್ಟನ್ನು ಮಾನ್ಯ ರಾಮಕೃಷ್ಣ ಹೆಗ್ಡೆ ಅವರು ಮಂಡಿಸಿದ್ದಾರೆ. ಇದರಲ್ಲಿ ಆಶ್ಚರ್ಯವಿಲ್ಲ. ಯಾವ ದೇಶವೇ ಆಗಲೀ ಅಭಿವೃದ್ಧಿ ಹೊಂದತಕ್ಕ ಕಾಲದಲ್ಲಿ ಖೋತ ಬಜೆಟ್ ಮಂಡಿಸತಕ್ಕುದು, ಸಾಲದ ಹೊರೆ ಹೆಚ್ಚಾಗತಕ್ಕುದು, ಸಾಲಕ್ಕೋಸ್ಕರವಾಗಿ ಬಡ್ಡಿ ತರುವುದು, ಸಾಲವನ್ನು ತೀರಿಸುವುದಕ್ಕಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವುದು ಸರ್ವೇ ಸಾಧಾರಣವಾದ ವಿಚಾರ. ಆದರೆ ಈ ಹೊತ್ತಿನ ದಿವಸ ನಮ್ಮ ನಾಲ್ಕನೆ ಯೋಜನೆ ಇನ್ನೂ ಪೂರ್ಣವಾಗಿ ಒಂದು ಸ್ಥಿತಿಗೆ ಬಂದಿಲ್ಲ. ನಮ್ಮದು 440 ಕೋಟಿ ರೂಪಾಯಿಗಳ ಯೋಜನೆಯಾದರೂ ಕೂಡ ಇನ್ನೂ ಕೇಂದ್ರ ಸರ್ಕಾರದ ನೆರವು ಎಷ್ಟು ನಮಗೆ ದೊರೆಯುತ್ತದೆ ಎನ್ನುವುದು ಸ್ಪಷ್ಟವಾಗಿಲ್ಲ. ನಮ್ಮ ಸಂಪನ್ಮೂಲಗಳಿಂದ 115 ಕೋಟಿ ರೂಪಾಯಿಗಳ ತನಕ ನಾವು ಹೊಂದಿಸಿಕೊಳ್ಳಬೇಕು ಎನ್ನುವ ಮಾತನ್ನು ಕೂಡ ಮಾನ್ಯ ಸಚಿವರು ಪ್ರಸ್ತಾಪಿಸಿದ್ದಾರೆ. ಅವರ ಮಾತಿನಲ್ಲಿ ಹೇಳುವುದಾದರೆ,

> There is still uncertainty about the size of the Fourth Five-Year Plan. This is because the quantum of Central assistance has not been determined in realistic terms and the ability of States to raise resources remains unassessed. In our view, it is better to have one more annual Plan till the Fifth Finance Commission gives its award and these uncertainties are resolved."

ಈ ಮಾತನ್ನು ಬಿಚ್ಚುಮನಸ್ಸಿನಿಂದ ಹೇಳಿದ್ದಾರೆ, ಕೇಂದ್ರದ ಸಹಾಯ ನಮಗೆಷ್ಟು ದೊರೆಯುತ್ತದೆಂಬುದು ಸ್ಪಷ್ಟವಾಗಿ ಗೊತ್ತಾಗಿಲ್ಲ, ನಾವು ನಮ್ಮ ಸಂಪನ್ಮೂಲಗಳನ್ನು ಯಾವರೀತಿ ಸಂಗ್ರಹಿಸಬೇಕು ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ ಎಂದು ಸೂಚಿಸಿದ್ದಾರೆ. ಬಹಳಮಟ್ಟಿಗೆ ಹಣಕಾಸಿನ ಸಚಿವರು ಫೈನಾನ್ಸ್ ಕಮಿಷನ್ನಿನಮೇಲೆ ಭರವಸೆ ಇಟ್ಟು ಈ ವರ್ಷದ ಆಯವ್ಯಯ ತಖ್ತೆಯನ್ನು ತಯಾರಿಸಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಶ್ರೀ ನಾಗಪ್ಪನವರು ಸರಕಾರವನ್ನು ಆಕ್ಷೇಪಿಸಿದರು, ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಾಕಷ್ಟು ಪ್ರಯತ್ನ ಮಾಡದೆ ನಾವು ಬಹಳ ಕಷ್ಟದಲ್ಲಿದ್ದೇವೆ, ಹೆಚ್ಚು ಹಣ ಕೊಡಬೇಕು ಎಂದು ಫೈನಾನ್ಸ್ ಕಮಿಷನ್ನನ್ನು ಕೇಳುತ್ತಿದ್ದಾರೆ ಎಂದು ಹೇಳಿದರು. ಇದನ್ನು ಒಪ್ಪುತ್ತೇನೆ. ಹಾಗೆ ಹೇಳಿದರೂ ಕೂಡ ಕೇಂದ್ರ ಸರ್ಕಾರದಿಂದ ಕಳೆದ ಹತ್ತಾರು ವರ್ಷಗಳಿಂದ ನಮಗೆ ಸಾಕಷ್ಟು ನೆರವು ಸಿಕ್ಕಿಲ್ಲ. ಉದಾಹರಣೆಗೆ

ಪಬ್ಲಿಕ್ ಸೆಕ್ಟರ್ ನಡೆಸುವ ಕೈಗಾರಿಕೆಗಳಿಗೆ 1951 ರಿಂದ ಬೇರೆ ಬೇರೆ ರಾಜ್ಯಗಳಿಗೆ ಕೊಟ್ಟಿರುವಂತೆ ನಮಗೆ ಸಾಕಷ್ಟು ಸಹಾಯ ದೊರೆತಿಲ್ಲ. ಕೇವಲ 48 ಕೋಟಿ ರೂಪಾಯಿಗಳನ್ನು ಮಾತ್ರ ನಮಗೆ ಕೊಟ್ಟಿದ್ದಾರೆ. ಆದರೆ ಕೆಲವು ರಾಜ್ಯಗಳಿಗೆ 400 ಕೋಟಿ ಕೊಟ್ಟಿದ್ದಾರೆ, ಇನ್ನು ಕೆಲವಕ್ಕೆ 250 ಕೋಟಿ ಕೊಟ್ಟಿದ್ದಾರೆ. ನಮಗೆ ಮಾತ್ರ ಕೇವಲ 48 ಕೋಟಿ ಕೊಟ್ಟಿದ್ದಾರೆ. ಹೀಗೆ ಕೇಂದ್ರ ಸರಕಾರದಿಂದ ನಮಗೆ ಸಾಕಾದಷ್ಟು ನೆರವು ದೊರೆತಿಲ್ಲ. ಈ ದೃಷ್ಟಿಯಿಂದ ಆರ್ಥಿಕ ಸಚಿವರು ಫೈನಾನ್ಸ್ ಕಮಿಷನ್ ಮುಂದೆ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವ ವಿಚಾರದಲ್ಲಿ ಆಶ್ವಾಸನೆ ಕೊಟ್ಟು ನಮಗೆ ಹೆಚ್ಚು ನೆರವನ್ನು ಕೇಳಿರುವುದು ಗಮನಾರ್ಹವಾಗಿದೆ. ಇದಕ್ಕಾಗಿ ಮಾನ್ಯ ಸಚಿವರನ್ನು ಅಭಿನಂದಿಸಬೇಕು. ಫೈನಾನ್ಸ್ ಕಮಿಷನ್ ಮುಂದೆ ನಾವು ಕೈಕೊಂಡಿರುವ ಕೆಲಸ ಕಾರ್ಯಗಳನ್ನು ಪ್ರಸ್ತಾಪಿಸಿ ಹೆಚ್ಚು ನೆರವು ನಮಗೆ ಕೊಡಬೇಕೆಂದು ಪ್ರಾರ್ಥನೆಮಾಡಿದ್ದಾರೆ. ಮತ್ತು ಇದರ ಜೊತೆಗೆ ಈಗಾಗಲೇ ತುಕೋಳ್ ವರದಿಯು ಈ ಸಭೆಯಲ್ಲಿ ಚರ್ಚಿಸಲ್ಪಟ್ಟಿದೆ, ಆದರ ಶಿಫಾರ್ಸಿನಲ್ಲಿ ಒಂದು ಭಾಗವನ್ನು ಸರಕಾರ ಒಪ್ಪಿ ಜಾರಿಗೆ ತರಲು ಮನಸ್ಸು ಮಾಡಿದೆ. ಅದನ್ನು ಬಜೆಟ್ಟಿನಲ್ಲಿ ಸೇರಿಸದಿದ್ದರೂ ಕೂಡ ಈ 3 ಚಿಲ್ಲರೆ ಕೋಟಿಯನ್ನು ಫೈನಾನ್ಸ್ ಕಮಿಷನ್ ನೆರವಿನಿಂದ ತುಂಬಿಕೊಳ್ಳುವ ಆಸೆಯನ್ನು ಸಚಿವರು ಇಟ್ಟುಕೊಂಡಿದ್ದಾರೆ. ಈ ರಾಜ್ಯದ ಆಯವ್ಯಯವನ್ನು ಫೈನಾನ್ಸ್ ಕಮಿಷನ್ ಕೊಡುವ ಉದಾರ ನೆರವು, ಅದಕ್ಕಿಂತಲೂ ಹೆಚ್ಚಾಗಿ ನಮ್ಮ ಸಂಪನ್ಮೂಲಗಳಿಂದ ಸರಿದೂಗಿಸಲು ಬಹುಶಃ ಈ ಸಭೆಯ ಸದಸ್ಯರೆಲ್ಲರೂ ಕೂಡ ಸಹಕಾರ ನೀಡಬೇಕಾಗಿದೆ, ಇದರ ಬಗ್ಗೆ ಸರಕಾರದ ಜವಾಬ್ದಾರಿ ಬಹಳವಾಗಿದೆ. ನಾವು ವರ್ಷೇ ವರ್ಷೆ ಅಭಿವೃದ್ಧಿ ಹೊಂದುತ್ತಿರುವ ರಾಜ್ಯದಲ್ಲಿ ನಮ್ಮ ಆಸೆ ಮತ್ತು ಆಕಾಂಕ್ಷೆಗಳಿಗೆ ತಕ್ಕಂತೆ ಸರ್ವತೋಮುಖವಾಗಿ ಪ್ರಗತಿಯಾಗಬೇಕಾದರೆ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹಣ ಖರ್ಚುಮಾಡಬೇಕು ಎಂದು ಹೇಳುವಾಗ ತೆರಿಗೆ ಹಾಕಬಾರದು, ಈಗಾಗಲೆ ಹೆಚ್ಚು ತೆರಿಗೆ ಹೇರಲ್ಪಟ್ಟಿದೆ ಎಂದು ಹೇಳುವುದುಂಟು. ಹಣ ಸಾಕಷ್ಟಿಲ್ಲದೆ ಕೆಲಸ ಹೇಗೆ ಮಾಡಬೇಕು ? ಇಂದು ನೀರಾವರಿ ಕೆಲಸ, ಕೈಗಾರಿಕಾಭಿವೃದ್ಧಿ, ಮುಂತಾದ್ದನ್ನು ಮಾಡಿ ದೇಶದ ಉತ್ಪತ್ತಿ ಹೆಚ್ಚಿಸಬೇಕಾಗಿದೆ. ವಿದ್ಯಾಭ್ಯಾಸದ ಒಂದು ಬಾಬಿಗೆ ಈ ವರ್ಷ 43 ಕೋಟಿ ಖರ್ಚುಮಾಡುತ್ತಿದ್ದೇವೆ, ಪಬ್ಲಿಕ್ ವರ್ಕ್ಸ್ ಇಲಾಖೆಗೆ 34 ಕೋಟಿ ಖರ್ಚಿದೆ ಹೀಗೆ ಅಭಿವೃದ್ಧಿ ಕಾರ್ಯಗಳಿಗೆ ಕೋಟಿಗಟ್ಟಲೆ ಖರ್ಚುಮಾಡುವಾಗ ನಮ್ಮ ಮೇಲೆ ಹೊರೆ ಹೇರಿದರೆ ಅದನ್ನು ಹೊರುವುದಕ್ಕೆ ಹಿಂಜರಿಯಬಾರದು, ಹಿಂಜರಿದರೆ ನಾವು ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ಮುಖ್ಯವಾಗಿ ಈ ತೆರಿಗೆಯೇನಿದೆ ಅದನ್ನು ಯಾರಿಗೆ ಹೊರುವುದಕ್ಕೆ ಶಕ್ತಿಯಿದೆ, ಅವರಿಗೆ ಸಾಕಷ್ಟು ಹಾಕಿ ಅವರಿಂದ ಅದನ್ನು ವಸೂಲು ಮಾಡಬೇಕಾದ್ದು ಅವಶ್ಯಕ. ಮಾರಾಟ ತೆರಿಗೆಯಾಗಲಿ, ವ್ಯವಸಾಯ ವರಮಾನ ತೆರಿಗೆಯಾಗಲಿ, ಯಾವುದೇ ಆಗಲಿ, ಅವನ್ನು ದಕ್ಷತೆಯಿಂದ ವಸೂಲು ಮಾಡಬೇಕು. ಈಗ ಲೀಕೇಜಸ್ ಇದೆ; ಸಾಧ್ಯವಾದಮಟ್ಟಿಗೆ ಸರಕಾರದಿಂದ ಸಹಾಯ ಪಡೆದರೂ ತೆರಿಗೆ ತಪ್ಪಿಸಿಕೊಳ್ಳಬೇಕೆಂಬ ಮನೋಭಾವನೆ ಅನೇಕರಲ್ಲಿದೆ. ಹೀಗೆ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿದೆ, ತಪ್ಪಿಸಿಕೊಳ್ಳುತ್ತಿರುವ ನಿದರ್ಶನಗಳೂ ಇವೆ. ಇದಕ್ಕೆ ಅವಕಾಶವಿರಬಾರದು. ಈ ಸಂದರ್ಭದಲ್ಲಿ ಅರ್ಬನ್ ಪ್ರಾಪರ್ಟಿ ಟ್ಯಾಕ್ಸ್ ವಿಚಾರದಲ್ಲ ನನ್ನ ಸ್ಪಷ್ಟವಾದ ಅಭಿಪ್ರಾಯವನ್ನು ಸೂಚಿಸುತ್ತೇನೆ. ಈ ತೆರಿಗೆ ವಿಚಾರದಲ್ಲಿ ಸರಕಾರ ಯಾವ ರಿಯಾಯಿತಿಯನ್ನೂ ಕೊಡದೆ ನಿರ್ದಾಕ್ಷಣ್ಯವಾಗಿ ಇದನ್ನು ವಸೂಲು ಮಾಡಿ ತನ್ನ ಉತ್ಪತ್ತಿ ಹೆಚ್ಚಿಸಿಕೊಳ್ಳಬೇಕು. ಇಂದು ಹಳ್ಳಿಗಾಡಿನಲ್ಲಿರುವ ರೈತರು ಕೊಡಬೇಕಾದ ಕಂದಾಯ 2—3 ವರ್ಷಗಳಿಂದ ಬಾಕಿ ಇರುವುದನ್ನು ಜರೂರಾಗಿ ವಸೂಲು ಮಾಡಬೇಕು, ಅದಕ್ಕೆ ತಕ್ಕ ಕ್ರಮ ಕೈಕೊಳ್ಳಬೇಕು ಎಂದು ಸರಕಾರ ಅಧಿಕಾರಿಗಳಿಗೆ ಆಜ್ಞೆ ಮಾಡಿದೆ. ಜನರು ಒಂದೇ ಸಲ ಇರುವ ಬಾಕಿಯನ್ನು ಕೊಡುವುದಕ್ಕಾಗದೆ ಪರಿತಪಿಸುತ್ತಿದ್ದಾರೆ. ಆದರೆ ಕಂದಾಯ ಅವರಿಂದ ವಸೂಲುಮಾಡಬಾರದೆಂದು ನಾನು ಹೇಳುವುದಿಲ್ಲ. ಈ ವಿಚಾರದಲ್ಲಿ ರಿಯಾಯಿತಿ ತೋರಿ ಕಂತುಗಳ ಮೂಲಕ ಅದನ್ನು ವಸೂಲುಮಾಡಬೇಕೆಂದು ಸಲಹೆ ಮಾಡುತ್ತೇನೆ. ಹಾಗೆ ಮಾಡಿ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬಹುದು. ಇದರ ಜೊತೆಗೆ ವಾಟರ್ ರೇಟ್ ಮತ್ತು ಕಂಟ್ರಿಬ್ಯೂಷನ್ನನ್ನು ಕೆಲವು ಭಾಗಗಳಲ್ಲಿ ಸರಿಯಾಗಿ ವಸೂಲುಮಾಡುವದಿಲ್ಲ. ಇದನ್ನು ಸಚಿವರೇ ಹೇಳಿದ್ದಾರೆ. ಇದನ್ನು ನಿರ್ದಾಕ್ಷಣ್ಯವಾಗಿ ವಸೂಲು ಮಾಡಬೇಕು. ಮುಂದುವರೆದ ಎಲ್ಲ ರಾಷ್ಟ್ರಗಳಲ್ಲೂ ಪ್ರಜೆಗಳಿಗೆ ಎಷ್ಟು ಸೌಕರ್ಯ ಕೊಡಬೇಕೋ ಅದನ್ನು ಕೊಟ್ಟು ಅಷ್ಟೇ ಮಟ್ಟದಲ್ಲಿ ಅವರಿಂದ ತೆರಿಗೆ ರೂಪದಲ್ಲ ಹಣ ಪಡೆದು ಉತ್ಪತ್ತಿ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಅಮೇರಿಕಾದಲ್ಲ, ಈಗ ಬಹಳ ಶ್ರೀಮಂತರಿರುವ ಆ ದೇಶದಲ್ಲಿ ಬರುವ ಉತ್ಪತ್ತಿ, ಕೊಡುವ ತೆರಿಗೆ ಹೋಲಿಕೆ ಮಾಡಿದರೆ ಬಹುಶಃ ಬರುವ ಆದಾಯದಲ್ಲ ಬಹು ಭಾಗ ತೆರಿಗೆ ರೂಪದಲ್ಲಿ ಸರಕಾರಕ್ಕೆ ಕೊಡುತ್ತಿದ್ದಾರೆ. ಈ ದೃಷ್ಟಿಯಿಂದ ಹಣಕಾಸಿನ ಸಚಿವರ ಮೇಲೆ ಹೆಚ್ಚು ವಿಶ್ವಾಸವಿಟ್ಟು ಜನರು ತೆರಿಗೆ ಕೊಡುತ್ತಾರೆಂದು ನಾನು ನಂಬುತ್ತೇನೆ. ಹಾಗೆ ಕೊಡದಿದ್ದರೆ ಬಹಳ ಕಷ್ಟವಾಗುತ್ತದೆ, ನಮ್ಮ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿ ನಾವೇನು ಈ ವರ್ಷ ಸಾಧಿಸಬೇಕೆಂದಿದ್ದೇವೆ ಅದನ್ನು ಸಾಧನೆ ಮಾಡುವುದಕ್ಕೆ

(ಶ್ರೀ ಡಿ. ಎಂ. ಸಿದ್ದಯ್ಯ)

ಬಹಳ ಕಷ್ಟವಾಗುತ್ತದೆ. ಇದನ್ನು ಸ್ಪಷ್ಟವಾಗಿ ನಾನು ಹೇಳುತ್ತೇನೆ ಮತ್ತು ಹಣಕಾಸಿನ ಸಚಿವರು ಈ ತೆರಿಗೆಗಳನ್ನು ಯಾವ ರೀತಿ ವಸೂಲುಮಾಡಬೇಕು ಎಂಬುದನ್ನು ವಿಚಾರ ಮಾಡಲು ಒಂದು ಸಮಿತಿಯನ್ನು ರಚಿಸಿದ್ದಾರೆ, ಮಾನ್ಯ ಭೂತಲಿಂಗಂ ಅಧ್ಯಕ್ಷತೆಯಲ್ಲಿ ಅದು ಕೆಲಸ ಮಾಡುತ್ತಿದೆ. ಬಹುಶಃ ಆ ಸಮಿತಿಯು ಅಮೂಲ್ಯವಾದ ಸಲಹೆಗಳನ್ನು ಕೊಟ್ಟಮೇಲೆ ಯಾವ ರೀತಿ ತೆರಿಗೆ ಹಾಕಬೇಕು, ಯಾವ ರೀತಿ ವಸೂಲುಮಾಡಬೇಕು ಎಂಬುದನ್ನು ಸರಕಾರ ಗಮನಿಸಬಹುದು. ಈ ಬಜೆಟ್ಟಿನಲ್ಲಿ ತೆರಿಗೆ ಹಾಕುವುದನ್ನು ಯೋಚನೆ ಮಾಡುತ್ತಿದ್ದಾರೆ. ಬಹುಶಃ ಇನ್ನೂ ಸರಿಯಾದ ರೀತಿಯಲ್ಲಿ ಒಂದು ಟೆಕ್ನಿಕಲ್ ಒಪೀನಿಯನ್ ಪಡೆದು ಸರಿಯಾದ ರೀತಿಯಲ್ಲಿ ಸಂಪನ್ಮೂಲಗಳನ್ನು ಹೆಚ್ಚಿಸಬೇಕೆಂಧು ರೈತರ ಹಿತದೃಷ್ಟಿಯಿಂದ ಈ ರೀತಿ ಮಾಡಿದ್ದಾರೆ. ಭೂತಲಿಂಗಂ ಸಮಿತಿಯವರು ಸರಿಯಾದ ಸಲಹೆ ಕೊಟ್ಟು ಸರಕಾರಕ್ಕೆ ಹೆಚ್ಚು ಹಣ ಬರುವಹಾಗೆ ಸೂಕ್ತ ಸಲಹೆ ನೀಡುತ್ತಾರೆ ಎಂದು ನಾನು ನಂಬಿದ್ದೇನೆ. ಸರಕಾರದವರು ಅಭಿವೃದ್ಧಿ ಕಾರ್ಯಗಳಿಗೆ ಹಣ ಖರ್ಚು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ, ಪ್ರಾಮುಖ್ಯವಾಗಿ ನೀರಾವರಿಗೆ ಸಂಬಂಧಪಟ್ಟಂತೆ ಸಾಕಷ್ಟು ಪ್ರಾಜೆಕ್ಟುಗಳನ್ನು ಮಾಡುವುದಕ್ಕೆ ಸರಕಾರದಲ್ಲಿ ಹಣವಿಲ್ಲ. ಅವರು ಎಲ್ಲಾ ಯೋಜನೆಗಳಿಗೂ ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಯಾವ ನೀರಾವರಿ ಯೋಜನೆಯೂ ಕೂಡ ಪೂರ್ಣ ಫಲ ಕೊಡುವ ಸ್ಥಿತಿಯಲ್ಲಿಲ್ಲ, ಘಟಪ್ರಭ, ಮಲಪ್ರಭ ಬಿಟ್ಟು ಉಳಿದ ಪ್ರಾಜೆಕ್ಟುಗಳು ದೊಡ್ಡ ದೊಡ್ಡ ಯೋಜನೆಗಳು ಹಣದ ಅಭಾವದಿಂದ ಕಾರ್ಯರೂಪಕ್ಕೆ ಬಂದಿಲ್ಲ. ಈ ಸಾರಿ ಸರಕಾರ ರಾಜ್ಯದ ನೀರಾವರಿ ಕಾರ್ಯಗಳಿಗೆ 12 ಕೋಟಿ 83 ಲಕ್ಷ ಕೊಟ್ಟಿದೆ. ಅದರಲ್ಲಿ ಘಟಪ್ರಭ ಯೋಜನೆಗೆ 2 ಕೋಟಿ, ಮಲಪ್ರಭ ಯೋಜನೆಗೆ 2 ಕೋಟಿ 45 ಲಕ್ಷ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ 2 ಕೋಟಿ ಕೊಡಲಾಗಿದೆ. ಅದಾದಮೇಲೆ ಉಳಿಯುವುದು 7 ಕೋಟಿ. ಹೀಗಾದರೆ ಪ್ರಾಜೆಕ್ಟುಗಳು ಮುಗಿಯಲು ಬಹಳ ಕಾಲ ಬೇಕು. ಹಣವೆಲ್ಲಾ ಹರಿದು ಹಂಚಿಹೋಗಿದೆ. ಅದಕ್ಕೆ ನಾನು ಸಲಹೆಮಾಡುವುದು ಸ್ವಲ್ಪ ಹಣದಲ್ಲಿ ಇರುವ ನೀರಾವರಿ ಯೋಜನೆಗಳನ್ನು ಜಾಗ್ರತೆ ಪೂರ್ಣಮಾಡಲು ಸಾಧ್ಯವಿಲ್ಲದಿರುವುದರಿಂದ ಜನರು ತಾವಾಗಿಯೇ ಮುಂದೆ ಬಂದು ತಮ್ಮ ವಂತಿಗೆಯನ್ನು ಕೊಡುತ್ತಿದ್ದಾರೆ, ಕಾವೇರಿ ಬೇಸಿನ್‌ನಲ್ಲಿ ದೊಡ್ಡ ಪ್ರಾಜೆಕ್ಟುಗಳಿವೆ, ಕಪಿನಿ, ಹೇಮಾವತಿ, ಗುಂಡಲ ಪ್ರಾಜೆಕ್ಟುಗಳು ಮುಂತಾದವು ಇವೆ, ಅವೆಲ್ಲಾ 1974 ನೇ ಇಸವಿಯೊಳಗೆ ಮುಗಿಯಬೇಕು, ಇಲ್ಲದಿದ್ದರೆ ನಮ್ಮ ಹಕ್ಕು ಹೊರಟುಹೋಗುವುದು. ಆದರೆ ಸರಕಾರ ಆ ಕೆಲಸಗಳಿಗೆ 50 ಲಕ್ಷ ಕೊಟ್ಟರೆ ಇರುವ ಕಾಲಾವಧಿಯೊಳಗೆ ಪೂರ್ಣಮಾಡಲು ಸಾಧ್ಯವಾಗುವುದಿಲ್ಲ. ಈಗಾಗಲೆ ಹಾರಂಗಿ ಪ್ರಾಜೆಕ್ಟಿಗೆ ಸಂಬಂಧಪಟ್ಟ ಜನರು ಮುಂದೆ ಬಂದು ಅಡ್ವಾನ್ಸಾಗಿ ಹಣ ಕೊಡಲು ಸಿದ್ಧರಾಗಿದ್ದಾರೆ. ಕೃಷ್ಣ ಪ್ರಾಜೆಕ್ಟ್ ಬಲದಂಡೆ ರೈತರಿಂದ ಹಣ ಮುಂದಾಗಿ ಕೊಡಲು ಅಶ್ವಾಸನೆ ಬಂದಿದೆ. ಅದೇ ರೀತಿಯಲ್ಲಿ ಕಾವೇರಿ ಬೇಸಿನ್ ಹಾರಂಗಿ ಪ್ರದೇಶದ ರೈತರು ಒಂದು ಸಭೆ ಸೇರಿ ಅಡ್ವಾನ್ಸ್ ಕಾಂಟ್ರಿಬೂಷನ್ ಕೊಡುವುದಾಗಿ ಮನವಿ ಮಾಡಿದ್ದಾರೆ. ಹೇಮಾವತಿ, ಕಂಬದಕಡ ಇತ್ಯಾದಿ ದೊಡ್ಡ ದೊಡ್ಡ ಯೋಜನೆಗಳಿಂದ ಯಾರಿಗೆ ಸಹಾಯವಾಗುವುದೋ ಅವರು ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಟ್ಟರೆ ಪ್ರಾಜೆಕ್ಟುಗಳ ಕೆಲಸವನ್ನು ತೆಗೆದುಕೊಳ್ಳಬಹುದು. ಹಾಗೆ ಮಾಡದಿದ್ದರೆ ಬಹುಶಃ 10-20 ವರ್ಷಗಳಾದರೂ ಯೋಜನೆಗಳ ಕೆಲಸವಾಗಿ ಜನರಿಗೆ ಸಹಾಯವಾಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಆದುದರಿಂದ ಈ ರೀತಿಯಾಗಿ ಅಲ್ಪ ಸ್ವಲ್ಪ ಹಂಚುವುದಕ್ಕೆ ಬದಲಾಗಿ 12 ಅಥವಾ 13 ಕೋಟಿಯಲ್ಲಿ ಕೃಷ್ಣ ಯೋಜನೆಗೆ 8 ಕೋಟಿಯನ್ನು ಕೊಟ್ಟು ಕಾವೇರಿ ಬೇಸಿನ್ ಪ್ರಾಜೆಕ್ಟುಗಳಿಗೆ ಉಳಿದುದನ್ನು ಕೊಟ್ಟರೆ ಅನುಕೂಲವಾಗುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ. ಹೀಗೆ ಮಾಡಿದರೆ ಜಾಗ್ರತೆ ಕೆಲಸವೂ ಆಗುತ್ತದೆ, ಜನರಿಗೆ ಸರಿಯಾದ ಸಹಾಯವೂ ಆಗುತ್ತದೆ. ಈಗ 60 ಲಕ್ಷ ಕಪಿನಿ ಪ್ರಾಜೆಕ್ಟಿಗೆ ಕೊಟ್ಟಿದ್ದಾರೆ, ಅದಕ್ಕೆ 30 ಕೋಟಿ ಬೇಕಾಗಿರುವಾಗ ಇಷ್ಟು ಸ್ವಲ್ಪ ಕೊಡುತ್ತಾ ಬಂದರೆ ಆ ಯೋಜನೆ ಪೂರ್ಣಮಾಡಲು 60 ವರ್ಷ ಬೇಕು. ಇದರಿಂದ ಯಾವ ಬಗೆಯ ಪ್ರಯೋಜನವಾಗುವುದಿಲ್ಲ. ಕೇಂದ್ರ ಸರಕಾರವು ನಮಗೆ ಸಹಾಯ ಮಾಡುವಾಗ ಮಲತಾಯಿ ಧೋರಣೆ ತೋರಿಸುತ್ತಿದೆ, ಇದು ಎಲ್ಲರಿಗೂ ಗೊತ್ತಿದೆ.

ಶ್ರೀ ಡಿ. ದೇವರಾಜ ಅರಸ್.—ಯಾವುದಾದರೂ ಒಂದು ಪ್ರಾಜೆಕ್ಟ್‌ಗೆ ದುಡ್ಡು ಕೊಡಿ ಎಂದರೆ ದುಡ್ಡಿಲ್ಲ ಎಂದು ಹೇಳುತ್ತಾರೆ. ಅದಕ್ಕೇ ನಾನು ಒಂದು ಸಲಹೆ ಮಾಡಿದೆ. ಕಾವೇರಿ ಬೇಸಿನ್‌ನಲ್ಲಿ ಇರತಕ್ಕ ಕಷ್ಟ ಏನು ಎಂಬುದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಂಡು ಮಾತನಾಡಿದರೆ ಒಳ್ಳೆಯದು. ಕಾವೇರಿ ಬೇಸಿನ್‌ನಲ್ಲಿರತಕ್ಕ ಯಾವುದೇ ಪ್ರಾಜೆಕ್ಟ್ ಆಗಲಿ, 1974ರ ಅಗ್ರಿಮೆಂಟ್ ಮುಗಿಯುವುದರೊಳಗೆ ನಾವು ನಿರ್ಮಾಣ ಮಾಡಿಕೊಳ್ಳಬೇಕು. ಅದನ್ನು ಗಮನದಲ್ಲಿಟ್ಟುಕೊಂಡು ದಯವಿಟ್ಟು ಯೋಚನೆ ಮಾಡಿ.

ಶ್ರೀ ಡಿ. ಎಂ. ಸಿದ್ದಯ್ಯ.—ಆ ದೃಷ್ಟಿಯಿಂದಲೇ ನಾನು ಹೇಳಿದ್ದು, ಹಾರಂಗಿ ಆಗಲಿ, ಕೃಷ್ಣಾ ಪ್ರಾಜೆಕ್ಟ್ ಆಗಲಿ ಅದಕ್ಕೆ ಹಣ ಅಡ್ವಾನ್ಸ್ ಮಾಡುತ್ತೇವೆ ಅಂತ ಅನ್ನುವುದರಿಂದ ಏನು ಗೊತ್ತಾಗುತ್ತದೆ? ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ ಎನ್ನುವುದು ಸ್ಪಷ್ಟವಾಗುತ್ತದೆ. ಈಗ 12 ಕೋಟಿ ರೂಪಾಯಿ ಇದೆ ಅದನ್ನು ಯಾವ ಪ್ರಾಜೆಕ್ಟಿಗೆ ಹಾಕಿ ಪೂರೈಸಬೇಕು?

ಶ್ರೀ ಡಿ. ದೇವರಾಜಅರಸ್.—12 ಕೋಟಿ ರೂಪಾಯಿ ಇದೆ ಅನ್ನುವುದು ಗೊತ್ತಿದೆ. ಅದನ್ನು 24 ಕೋಟಿ ರೂಪಾಯಿ ಮಾಡುವುದು ಹೇಗೆ ಅನ್ನುವುದನ್ನು ನಾವು ನೀವು ಕೂಡಿ ಯೋಚನೆ ಮಾಡೋಣ. ಯಾವುದಕ್ಕೆ ಕೇಳಿದರೂ ದುಡ್ಡು ಕೊಡುವುದಿಲ್ಲ, ದುಡ್ಡಿಲ್ಲವೇ ಇಲ್ಲವೇನೋ ಎಂಬುದನ್ನು ಎಲ್ಲರೂ ಹೇಳುತ್ತಾರೆ, ನಿಮ್ಮ ಸಲಹೆ ಹೇಳಿ, ನಮ್ಮ ಸಲಹೆಯನ್ನು ಹೇಳುತ್ತೇನೆ. 12 ಕೋಟಿಗೆ ಬದಲಾಗಿ 24 ಕೋಟಿ ರೂಪಾಯಿಗಳನ್ನು ಒದಗಿಸಿಕೊಳ್ಳುವ ಸಾಧನ ಯೋಚನೆ ಮಾಡೋಣ.

ಶ್ರೀ ಡಿ. ಎಂ. ಸಿದ್ದಯ್ಯ.—ಸಂಪನ್ಮೂಲಗಳನ್ನು ಹೆಚ್ಚುಮಾಡಿಕೊಳ್ಳುವ ಕಮಿಟಿ ಇದೆ, ಹಣಕಾಸಿನ ಸಚಿವರು ಅದಕ್ಕೆ ಕನ್‌ವೀನರು ಆಗಿದ್ದಾರೆ. ಆ ಕಮಿಟಿಯಲ್ಲಿ ನಮ್ಮ ಸಲಹೆಗಳನ್ನು ಇಡೋಣ. ಈಗ ಬೃಹತ್ ಪ್ರಾಜೆಕ್ಟ್‌ಗಳನ್ನು ಕಟ್ಟಿ ಪೂರೈಸಬೇಕಾದರೆ ಕೇಂದ್ರ ಸರ್ಕಾರದವರು ಒಪ್ಪಬೇಕು. ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡಿ ಆಂಧ್ರದವರು ನಾಗಾರ್ಜುನ ಸಾಗರವನ್ನು ಕಟ್ಟುವುದಕ್ಕೆ ಹೇಗೆ ಸಲಹೆ ಮಾಡಿದರೋ ಹಾಗೆ ಸಲಹೆ ಮಾಡತಕ್ಕ ಕಾರ್ಯದಲ್ಲಿ ಯಶಸ್ವಿಯಾದರೆ ಉಳಿದ ಹಣದಿಂದ ಸಂಪನ್ಮೂಲಗಳನ್ನು ಹೊಂದಿಸಿಕೊಂಡು ಆ ಪ್ರಾಜೆಕ್ಟನ್ನು 1974 ರೊಳಗೆ ಮುಗಿಸುವುದಕ್ಕೆ ಸಾಧ್ಯವಾಗಬಹುದು. ಅಂತಹ ದಿಟ್ಟವಾದ ಕೆಲಸವನ್ನು ಸರ್ಕಾರದವರು ಮಾಡುವುದಕ್ಕೆ ಅವರು ಸಿದ್ಧರಾಗಬೇಕು. ಕೇಂದ್ರ ಸರ್ಕಾರದವರು ನಮ್ಮ ಸರ್ಕಾರದ ವಿಷಯದಲ್ಲಿ ಈಗ ಮಲತಾಯಿ ಧೋರಣೆಯನ್ನು ಹೊಂದಿದ್ದಾರೆ. ಮೈಸೂರು ರಾಜ್ಯದಲ್ಲಿ ಎರಡು ಕೋಟಿ ಜನರು ವಾಸವಾಗಿಲ್ಲವೆ? ಜನರಿಂದ ಚುನಾಯಿತರಾದ ಸರ್ಕಾರ ಇಲ್ಲವೇ? ಕೇಂದ್ರದವರು ಮತ್ತೆ ಬೇರೆ ಸರ್ಕಾರದವರಿಗೆ ಕೊಡತಕ್ಕ ಮಾನ್ಯತೆಯನ್ನು ನಮ್ಮವನಕ್ಕೆ ಕೊಡುವುದಿಲ್ಲ ಎಂಬ ವಿಷಯವನ್ನು ನಮ್ಮ ಸರ್ಕಾರದವರು ಇವತ್ತು ಕೇಂದ್ರ ಸರ್ಕಾರದ ಮುಂದೆ ಇಟ್ಟು ಈ ಒಂದು ದೊಡ್ಡ ಪ್ರಾಜೆಕ್ಟನ್ನಾದರು ಕಟ್ಟುವ ಕೆಲಸವನ್ನು ಮಾಡಿದರೆ ಒಳ್ಳೆಯದು. ಅದೇ ರೀತಿ ಕಾವೇರಿ ಬೇಸಿನ್‌ನಲ್ಲಿರತಕ್ಕ ಎಲ್ಲಾ ಪ್ರಾಜೆಕ್ಟ್‌ಗಳನ್ನೂ ಕಟ್ಟಿ ಮುಗಿಸುವುದಕ್ಕೆ ನನ್ನ ಸಲಹೆ ಯಾದರೂ ಕೂಡ ಸಂಪನ್ಮೂಲಗಳನ್ನು ಹೊಂದಿಸಬಾರದು ಎಂದು ಅಲ್ಲ, ಅದನ್ನು ಹೊಂದಿಸುವುದರ ಜೊತೆಗೆ ಜನಗಳು ಮುಂದೆ ಬಂದು ಯಾರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ಹೇಳುತ್ತಾರೆ. ಅಂತಹ ಪ್ರಾಜೆಕ್ಟುಗಳಿಗೆ ಸರ್ಕಾರದವರು ನೇರವಾಗಿ ಬ್ಯಾಂಕುಗಳ ಮೂಲಕವಾಗಿ ಆಗಲಿ ಅಥವಾ ಕಾರ್ಪೋರೇಷನ್ ಮೂಲಕವಾಗಿಯಾಗಲಿ ಸಹಾಯ ಮಾಡಬೇಕು.

ಶ್ರೀ ಡಿ. ದೇವರಾಜಅರಸ್.—ಹಣ ಇಲ್ಲ ಅನ್ನುವುದು ಎಲ್ಲರಿಗೂ ಗೊತ್ತಿದೆ. ನಾಗಾರ್ಜುನ ಸಾಗರವನ್ನು ಕಟ್ಟಬೇಕಾದರೆ ಆಂಧ್ರ ಸರ್ಕಾರದವರು ಎಷ್ಟೋ ವರ್ಷಗಳ ಕಾಲ ಅವರ ದೇಶದಲ್ಲಿ ರಸ್ತೆಗಳಿಗೆ ಇಟ್ಟಿದ್ದಂತಹ ಹಣವನ್ನೆಲ್ಲಾ ಅದಕ್ಕೇ ವಿನಿಯೋಗಿಸಿದರು. ಅದೇ ರೀತಿ ನಾವು ಕೆಲವು ಖರ್ಚು ಬಾಬನ್ನು ನಿಲ್ಲಿಸುವ ವಿಚಾರದಲ್ಲಿ ಸರ್ಕಾರದವರಿಗೆ ತಿಳುವಳಿಕೆ ಹೇಳೋಣ ಅಥವಾ ಸಲಹೆ ಕೊಡೋಣ.

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸ್ನೇಹಿತರಿಗೆ ಚಿರಋಣಿಯಾಗಿದ್ದೇನೆ; ಉದ್ದೇಶಪೂರ್ವಕವಾಗಿ 4-5 ವರ್ಷಗಳ ನನ್ನ ಬಡ್ಜೆಟ್ ಭಾಷಣದಲ್ಲಿ ಈ ವಿಷಯವನ್ನು ಹೇಳಿದ್ದೇನೆ. ಆಗಿನ ಪಿ.ಡಬ್ಲ್ಯು.ಡಿ. ಮಿನಿಸ್ಟರು ಮತ್ತು ಈಗಿನ ಮುಖ್ಯಮಂತ್ರಿಗಳು ನಾನು ಹೇಳಿದ್ದನ್ನು, ನಿಜ ಎಂದು ಪುಷ್ಟೀಕರಿಸಿ ರಸ್ತೆಗಳ ಕೆಲಸವನ್ನು ನಿಲ್ಲಿಸಬೇಕು, ಸೇತುವೆಗಳ ಕೆಲಸವನ್ನು ನಿಲ್ಲಿಸಬೇಕು ಆ ಹಣವನ್ನೆಲ್ಲಾ ಇದಕ್ಕೆ ವಿನಿಯೋಗಿಸಬೇಕೆಂದು ಹೇಳಿದ್ದಾರೆ. ಆಗಬಹುದು ಎಂದು ಒಪ್ಪಿಕೊಂಡಿದ್ದಾರೆ. ಶ್ರೀಮಾನ್ ಅರಸ್‌ರವರು ಇದ್ದಂಥ ಆ ಮಂತ್ರಿಮಂಡಲ ಅದನ್ನು ಜಾರಿಗೆ ತರಲಿಲ್ಲ. ಆದ್ದರಿಂದ ಆ ವಿಷಯವನ್ನು ನಾನು ಈಗಲೂ ಕೂಡ ಬಹಳ ಅಗ್ರಹಪೂರ್ವಕವಾಗಿ ಸರ್ಕಾರದವರಿಗೆ ಸಲಹೆ ಮಾಡುತ್ತೇನೆ ರಸ್ತೆಗಳ ನಿರ್ಮಾಣವನ್ನು ನಿಲ್ಲಿಸಿ, ಸೇತುವೆಗಳ ನಿರ್ಮಾಣವನ್ನು ನಿಲ್ಲಿಸಿ ಮತ್ತು ಕಟ್ಟಡಗಳ ನಿರ್ಮಾಣವನ್ನು ನಿಲ್ಲಿಸಿ ಆ ಹಣವನ್ನೆಲ್ಲಾ ವಿನಿಯೋಗಿಸಿ ಆಂಧ್ರದವರು ನಾಗಾರ್ಜುನ ಸಾಗರವನ್ನು ಯಾವ ರೀತಿ ಕಟ್ಟಿದರೋ ಆ ರೀತಿ ಈ ಪ್ರಾಜೆಕ್ಟುಗಳನ್ನು ಕಟ್ಟೋಣ. ಅದರ ಜೊತೆಗೆ ನಮ್ಮ ಸಂಪನ್ಮೂಲಗಳನ್ನು ಹೆಚ್ಚು ಮಾಡುವುದಕ್ಕೆ ಭೂತಲಿಂಗಂ ಕಮಿಟಿಯವರ ಸಲಹೆಯ ಪ್ರಕಾರ ತೆರಿಗೆಗಳನ್ನು ಅಲ್ಪಸ್ವಲ್ಪ ಜಾಸ್ತಿ ಮಾಡಿ ಈ ನೀರಾವರಿ ಬಗ್ಗೆ ಎಷ್ಟು ಕೆಲಸ ಮಾಡಬಹುದೋ ಅಷ್ಟನ್ನು ಮಾಡೋಣ. ಈ ವಿಷಯದಲ್ಲಿ ಈ ಮಾನ್ಯ ಸಭೆಯ ಸಂಪೂರ್ಣವಾದಂತಹ ಬೆಂಬಲ ಇದೆ.

(ಶ್ರೀ ಡಿ. ಎಂ. ಸಿದ್ದಯ್ಯ)

ನನ್ನ ಪರವಾಗಿ ನಾನು ಹೇಳುವುದಾದರೆ ನಾನು ಶಾಸಕನಾಗಿರುವ ನನ್ನ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ನಾವು ಯಾವ ರಸ್ತೆ, ಸೇತುವೆ, ಕಟ್ಟಡಗಳನ್ನೂ ಕೇಳುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಸರ್ಕಾರದವರಿಗೆ ಹಾಗೂ ಶ್ರೀಮಾನ್ ಅರಸ್‌ರವರಿಗೆ ತಮ್ಮ ಮೂಲಕ ತಿಳಿಸುವುದಕ್ಕೆ ಇಚ್ಚೆ ಪಡುಸುತ್ತೇನೆ.

ಇದು ಬಹಳ ಪ್ರಾಮುಖ್ಯವಾದಂಥ ವಿಚಾರ. ಅವರು ಹೇಳಿದ ವಿಚಾರ ಸಹಜವಾಗಿದೆ. ನಾವು ವಾರ್ ಫುಟಿಂಗ್‌ದಲ್ಲಿ ಈ ಕಾರ್ಯ ಮಾಡದಿದ್ದರೆ ಇಂತಹ ಮಹತ್ಕಾರ್ಯವನ್ನು ಮಾಡುವುದಕ್ಕಾಗುವುದಿಲ್ಲ. ನಾವು ನಾಗಾರ್ಜುನ ಸಾಗರವನ್ನು ನೋಡಿದಾಗ ಒಂದು ಕಡೆ ಸಂತೋಷವಾಗುತ್ತದೆ, ಇನ್ನೊಂದು ಕಡೆ ದುಃಖವಾಗುತ್ತದೆ. ಅವರು ಅದನ್ನು ಕಟ್ಟಿದ್ದಕ್ಕೆ ನಮಗೆ ಸಂತೋಷವಾಗುತ್ತದೆ. ಆದು ಮೇಲ್ದಂಡೆಯಲ್ಲಿರುವ ನಾವು ಕೃಷ್ಣಾ ಪ್ರಾಜೆಕ್ಟನ್ನು ಕಟ್ಟಲಿಲ್ಲವಲ್ಲಾ ಎಂದು ನಮಗೆ ದುಃಖವಾಗುತ್ತದೆ. ಅದರಲ್ಲಿ 30 ಲಕ್ಷ ಎಕರೆ ನೀರಾವರಿಯಾಗುತ್ತದೆ. ಈಗಾಗಲೇ 5 ಲಕ್ಷ ಎಕರೆಗೆ ನೀರು ಕೊಡುತ್ತಿದ್ದಾರೆ ಇದನ್ನು ಕಟ್ಟಲು 130 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಹೀಗೆ ಕೋಟ್ಯಾಂತರ ರೂಪಾಯಿಗಳಷ್ಟು ಸಾಲ ಪಡೆದು; ಸರ್ಕಾರದಿಂದ ಇತರ ರೀತಿಯಲ್ಲಿ ಸಹಾಯಗಳನ್ನು ಪಡೆದು, ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡು ಎಲ್ಲಾ ರಿಸೋರ್ಸ್‌ನಿಂದ ಪೂಲಪ್ ಮಾಡಿ ಈ ಕೃಷ್ಣಾದಂತೆ ಕಟ್ಟಬೇಕಾಗಿದೆಯೇ ಹೊರತು ಕೇವಲ ಒಂದು, ಎರಡು ಮೂರು ಕೋಟಿ ರೂಪಾಯಿಗಳಲ್ಲಿ ಇದನ್ನು ಕಟ್ಟುತ್ತೇವೆಂದರೆ. ಈ ಕೆಲಸವಾಗುವುದಿಲ್ಲ. ಇದರ ಬಗ್ಗೆ ಬಹಳ ದಿಟ್ಟತನದಿಂದ, ಬಹಳ ಕಡ್ಡಾಯ ಮನಸ್ಸಿನಿಂದ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಮಂಚನಬೆಲೆ ಪ್ರಾಜೆಕ್ಟ್ ಕೆಲಸವನ್ನೂ ಸಹ ಮಾಡಬೇಕು. ರಸ್ತೆಗಳು, ಸೇತುವೆಗಳು ಮತ್ತು ಇತರ ಕಟ್ಟಡಗಳು ಇಲ್ಲದಿದ್ದರೆ ಜನ ಸಾಯುವುದಿಲ್ಲ. ಮುಂದಿನ ಪೀಳಿಗೆ ಇವತ್ತು ನಾವು ಆಹಾರ ಸಮಸ್ಯೆಯನ್ನು ಬಗೆಹರಿಸದಿದ್ದರೆ ಖಂಡಿತವಾಗಿ ನಮ್ಮನ್ನು ಶಪಿಸುತ್ತಾರೆ. ಇಂತಹ ಸಂದರ್ಭದಲ್ಲಿ ಸರ್ಕಾರದವರು ದಿಟ್ಟ ನಿಲುವನ್ನು ತೆಗೆದುಕೊಂಡು ಇದನ್ನು ಮಾಡಬೇಕು.

5-30. P.M.

ಇನ್ನು ಕೈಗಾರಿಕೆಗಳ ವಿಚಾರ. ಪಬ್ಲಿಕ್ ಸೆಕ್ಟರ್‌ನಲ್ಲಿ ಬಹಳ ಹಣ ಲಾಕಪ್ ಮಾಡಿದ್ದಾರೆ. ಇದರಿಂದ ಬಹಳ ನಷ್ಟವಾಗುತ್ತದೆ. ಪ್ರೈವೇಟ್ ಸೆಕ್ಟರ್‌ಗೆ ಪ್ರೋತ್ಸಾಹ ಕೊಡುವಂತೆ ಹೇಳಿದ್ದಾರೆ.

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಪ್ರೈವೇಟ್ ಸೆಕ್ಟರ್‌ನಲ್ಲಿಯೂ ಲಾಭ ಬರುವುದು.

ಶ್ರೀ ಡಿ. ಎಂ. ಸಿದ್ದಯ್ಯ.—ಇವತ್ತು ಪಬ್ಲಿಕ್ ಸೆಕ್ಟರ್‌ನಲ್ಲಿ ನಷ್ಟ ಬರುವುದು ಇದ್ದರೂ ಇವತ್ತು ಅಲ್ಲಿ ಸರ್ಕಾರದ ಷೇರುಗಳು ಇರುತ್ತವೆ. ಖಾಸಗೀ ಮನುಷ್ಯರ ಹತೋಟಿ ಇರುತ್ತದೆ. ಪಬ್ಲಿಕ್ ಸೆಕ್ಟರ್‌ನಲ್ಲಿ ಅವರೇ ಇದ್ದಾರೆ. 10 ಜನಗಳು ಸೇರಿ ಮಾಡುವ ಕೆಲಸದಲ್ಲಿ ನಷ್ಟವಾಗುವುದು ಉಂಟು. ಆದರೆ ಇವತ್ತು ಪಬ್ಲಿಕ್ ಸೆಕ್ಟರನ್ನು ಕೈಬಿಟ್ಟರೆ ನಮ್ಮ ಮೂಲ ತತ್ವಕ್ಕೆ ಚ್ಯುತಿ ಉಂಟಾಗುತ್ತದೆ. ಕೈಗಾರಿಕೆ ನೀತಿಯಲ್ಲಿ ಈಗಾಗಲೇ ಕುಂಠಿತಮಾಡಿದ್ದೇವೆ. ಶ್ರೀಮಂತರು ಶ್ರೀಮಂತರಾಗಿಯೇ ಉಳಿಯುತ್ತಾರೆ ಆಗ ಸಮಾಜವಾದ ಕಟ್ಟುವುದಕ್ಕೆ ಧಕ್ಕೆವುಂಟಾಗುತ್ತದೆ. ಆದ್ದರಿಂದ ಸರ್ಕಾರದವರು ಪಬ್ಲಿಕ್ ಸೆಕ್ಟರ್‌ನಲ್ಲಿ ಏನು ತೊಂದರೆ ಇದೆಯೆಂಬುದನ್ನು ಎಗ್ಜಾಮಿನ್ ಮಾಡಿ ಅದರಲ್ಲಿರತಕ್ಕ ಲೋಪದೋಷಗಳನ್ನು ಕಂಡುಹಿಡಿದು ಪಬ್ಲಿಕ್ ಸೆಕ್ಟರ್‌ನಲ್ಲಿಯೇ ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆಮಾಡುವುದು ನಮ್ಮ ನೀತಿಗೆ ಶ್ರೇಷ್ಠವಾದ ಕಾರಣ, ಪಬ್ಲಿಕ್ ಸೆಕ್ಟರ್‌ನಲ್ಲಿ ಕಷ್ಟವಾಗಬಹುದು. ಸ್ಯಾಂಪಲ್ಲಾಗಿ, ನಾವು ಯಾವುದಾದರೂ ಒಂದು ವಿಷಯದಲ್ಲಿ ಪ್ರೈವೇಟ್ ಸೆಕ್ಟರ್‌ನಿಂದ ಪಬ್ಲಿಕ್ ಸೆಕ್ಟರಿಗೂ, ಪಬ್ಲಿಕ್ ಸೆಕ್ಟರ್‌ನಿಂದ ಪ್ರೈವೇಟ್ ಸೆಕ್ಟರಿಗೂ ಹೆಚ್ಚು ಪ್ರೋತ್ಸಾಹ ಕೊಟ್ಟರೆ, ನಾವು ಪುನಃ ಬಂಡವಾಳಷಾಹಿಗಳ ಕೈಗೆ ಸಿಕ್ಕಿ ನಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ಪಡೆದಂತಾಗುತ್ತದೆ.

ಕೊನೆಯದಾಗಿ, ನಾನು ಮೊದಲೇ ಹೇಳಿದ ಹಾಗೆ, ತುಕೊಲ್ ಕಮಿಷನ್ನಿನ ವರದಿಯನ್ನು ಅನುಷ್ಠಾನಕ್ಕೆ ತರುವ ಆಶೆಯನ್ನು ಮಾನ್ಯ ಸಚಿವರು ಫೈನಾನ್ಸ್ ಕಮಿಷನ್ ಆಧಾರದ ಮೇಲೆ ನಿಂತಿದ್ದಾರೆ. ಈ ವರ್ಷದ ಆಯುವ್ಯಯದ ತಃಖ್ತೆಯಲ್ಲಿ ನಮ್ಮ ಅಭಿವೃದ್ಧಿ ಕಾರ್ಯಗಳಿಗೆ ನಮಗೇನು ಫೈನಾನ್ಸ್ ಕಮಿಷನ್ನಿನವರು ಸಹಾಯ ನೀಡುತ್ತಾರೋ ನಾವು ನಮ್ಮ ಸಂಪನ್ಮೂಲಗಳನ್ನು ಹೇಗೆ ಹೆಚ್ಚಿಸಿಕೊಳ್ಳುತ್ತೇವೋ ಆ ಎರಡು ತತ್ವಗಳ ಮೇಲೆ ಆದು ನಿಂತಿದೆ. ಫೈನಾನ್ಸ್ ಕಮಿಷನ್ ನಾವು

ಆಶೆವಾಡಿದಂತೆ ಕೊಡಲಾರರು ಎಂಬ ಶಂಕೆಯನ್ನು ನಾನು ಇಟ್ಟುಕೊಂಡಿದ್ದೇನೆ. ನಮ್ಮ ರಾಜ್ಯದ ಸಂಪನ್ಮೂಲಗಳನ್ನು ನಾವು ನಿಷ್ಠೂರವಾಗಿ ಯಾವ ಪಕ್ಷ ಪ್ರತಿಪಕ್ಷ ಮನೋಭಾವವಿಲ್ಲದೆ ಜನತೆಯ ಹಿತದೃಷ್ಟಿಯಿಂದ ಯಾರು ತೆರಿಗೆ ಕೊಡುವುದಕ್ಕೆ ಶಕ್ಯರಿದ್ದಾರೋ ಅವರಿಂದ ವಸೂಲುಮಾಡಿ ಈವತ್ತು ಆ ಸಂಪನ್ಮೂಲಗಳನ್ನು ತಂದರೆ ಆಗ ಫೈನಾನ್ಸ್ ಕಮಿಷನ್ನಿನವರು ಸಾಕಷ್ಟು ಹಣವನ್ನು ನಮಗೆ ಪ್ರೊಪೋರ್ಷನೇಟಾಗಿ ಕೊಡುತ್ತಾರೆ. ಇಲ್ಲದಿದ್ದರೆ ಆ ಪ್ರೊಪೋರ್ಷನೇಟಿನಲ್ಲಿ ಕುಸಿದು ಬೀಳಬೇಕಾಗುತ್ತದೆ. ಅದನ್ನು ನಾವು ವ್ಯವಹಾರಿಕವಾಗಿ ನೋಡಿದರೆ, We have to tighten our belt and proceed with the developmental activity ಎಂದು ಹೇಳಬಹುದು. ಮಾನ್ಯ ಸಚಿವರು ಬಹಳ ಬುದ್ಧಿವಂತರಾಗಿರುವುದರಿಂದ ಈ ಆಯವ್ಯಯ ತಃಖ್ತೆಯನ್ನು ಬಹಳ ಸುಂದರವಾದ ಭಾಷಣದಲ್ಲಿ ಮಂಡಿಸಿದ್ದಾರೆ. ಆದರೆ ವಾಸ್ತವಾಂಶ ಇದು ಏನು ಆಶಾದಾಯಕವಾದ ಚಿತ್ರವಾಗಿದೆಯೋ ಅಷ್ಟು ಸುಗಮವಾಗಿ ಇಲ್ಲ. ಆದರೆ ನಾವೆಲ್ಲರೂ ಮನಸ್ಸು ಮಾಡಿದರೆ ಇವತ್ತು ಸರ್ಕಾರ ಎಲ್ಲಾ ಸಂಪನ್ಮೂಲಗಳನ್ನು ಜಾಸ್ತಿಮಾಡಿಕೊಂಡು, ಅವರಿಂದ ಬರುವ ಹಣವನ್ನು ಪಡೆದುಕೊಂಡರೆ, ಏನೇನು ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೋ ಅವೆಲ್ಲವನ್ನೂ ಚಾಚೂ ತಪ್ಪದೆ ಕೆಲಸಮಾಡಿದರೆ ಆಗ ಆ ಕೆಲಸಕಾರ್ಯಗಳೆಲ್ಲವೂ ಸುಗಮವಾಗಿ ಆಗುತ್ತವೆಂಬುದಾಗಿ ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಂಡು, ನನಗೆ ಈ ಮಾನ್ಯ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri V. N. PATIL (Humnabad).—Hon'ble Sir, the Budget that is presented by the Finance Minister has got several revealing things.

ಶ್ರೀಮತಿ ನಾಗಮ್ಮ (ಕಲಮಲ).—ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡಬೇಕು.

ಶ್ರೀಮತಿ ಕೆ. ಲೀಲಾವತಿ ರೈ.—ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡುತ್ತಾರೆ. ಆದ್ದರಿಂದ ಕನ್ನಡದಲ್ಲಿ ಮಾತನಾಡಲಿ.

ಶ್ರೀ ವಿ. ಎನ್. ಪಾಟೀಲ್.—ನನಗೆ ಕನ್ನಡ ಅಷ್ಟು ಚೆನ್ನಾಗಿ ಮಾತನಾಡುವುದಕ್ಕೆ ಬರುವುದಿಲ್ಲ. ಎಷ್ಟು ಬರುತ್ತದೋ ಅಷ್ಟರಮಟ್ಟಿಗೆ ಮಾತನಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಬಜೆಟ್ ಭಾಷಣವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಯಾವ ಆಧಾರದ ಮೇಲೆ ಈ ಸರ್ಕಾರ ಮುಂದೆ ಈ ದೋಣಿಯನ್ನು ಸಾಗಿಸಿಕೊಂಡು ಹೋಗುತ್ತದೆಂಬುದನ್ನು ನೋಡುತ್ತಾ ಹೋದರೆ, ಈ ದೋಣಿ ಎಲ್ಲಿ ನಡುನೀರಿನಲ್ಲಿ ಮುಳುಗುತ್ತದೋ ಎಂಬ ಸಂಶಯ ನನಗೆ ಬರುತ್ತಾ ಇದೆ. ಇದು ಆಶಾದಾಯಕವಾದ ಬಜೆಟ್ ಅಲ್ಲ. ಬರೀ ನಿರಾಶಾದಾಯಕ ಬಜೆಟ್ ಎಂದು ಹೇಳಬಹುದು. ಅದಕ್ಕೆ ಕೆಲವು ಕಾರಣಗಳನ್ನು ಕೊಡಬೇಕಾಗಿದೆ. ಪಬ್ಲಿಕ್ ಸೆಕ್ಟರ್‌ನಲ್ಲಿ ನಷ್ಟವಾಗುತ್ತಿದೆ, ಆದ್ದರಿಂದ ಅದನ್ನು ನಮ್ಮಿಂದ ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕಾಗಿ ಪ್ರೈವೇಟ್ ಸೆಕ್ಟರಿಗೆ ಕೊಡತ್ತೇವೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಬಹಳವಾಗಿ ಯೋಚನೆ ಮಾಡಬೇಕು. ಈ ದೇಶದಲ್ಲಿ ಆಡಳಿತದೊಳಗೆ ಇರತಕ್ಕ ಲೋಪದೋಷಗಳನ್ನು ಸರ್ಕಾರದವರು ಮೊದಲು ಹೋಗಲಾಡಿಸಬೇಕು. ಇದರಲ್ಲಿರುವ ವಾಸ್ತವಾಂಶವನ್ನು ನೋಡಿದರೆ, ಇದನ್ನು ಆತ್ಮಹತ್ಯಮಾಡಿಕೊಳ್ಳುವಂಥ ವಿಶ್ವಾಸಘಾತುಕಕ್ಕಾಗಿ ಮಾಡಿದರೋ ಅಥವಾ ಜನತೆಯ ಹಿತರಕ್ಷಣೆಗಾಗಿ ಮಾಡಿದರೋ ಎಂಬುದು ಗೊತ್ತಾಗಲಿಲ್ಲ. ಈಗ ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್ ಏನಿವೆ ಅವನ್ನು ಹೆಚ್ಚು ಹೆಚ್ಚಾಗಿ ಬೆಳೆಸುತ್ತೇವೆಂದು ಹೆಚ್ಚು ಹೆಚ್ಚು ಹಣವನ್ನು ಇದರಲ್ಲಿ ತೆಗೆದುಕೊಂಡಿದ್ದಾರೆ. ಕೆಲವು ಕಡೆಗಳಲ್ಲಿ ಐ.ಎ.ಎಸ್. ಅಧಿಕಾರಿಗಳನ್ನು ನೇಮಕಮಾಡಿ ಪಬ್ಲಿಕ್ ಸೆಕ್ಟರ್‌ನಲ್ಲಿ ಯಶಸ್ವಿಯಾಗದೇ ಇರುವಂಥ ನಿದರ್ಶನಗಳೂ ಇವೆ. ಕೆಲವು ಕಡೆಗಳಲ್ಲಿ ಪ್ರೈವೇಟ್ ಸೆಕ್ಟರ್‌ನಿಂದ ಅವರಿಗೆ ಬೇಕಾದ ಎರಡು ಕಾಲಿನ ಹೆಗ್ಗಣಗಳನ್ನು ತಂದು ಅಲ್ಲಿ ಹಾಕುತ್ತಾರೆ. ಇದರಿಂದ ಪಬ್ಲಿಕ್ ಸೆಕ್ಟರಿನಲ್ಲಿ ನಷ್ಟ ಹೆಚ್ಚಾಗುತ್ತದೆ. ಪ್ರೈವೇಟ್ ಸೆಕ್ಟರ್ ಅವರಿಗೆ ಆಮಂತ್ರಣ ಮಾಡುವುದಕ್ಕೆ ಮೊದಲೇ ಒಳಸಂಚು ಮಾಡಿ, ಪ್ರೈವೇಟ್ ಸೆಕ್ಟರ್ ಅವರಿಗೆ ಪ್ರೋತ್ಸಾಹ ಕೊಡಬೇಕೆಂಬ ಮನೋವೃತ್ತಿ ಇಟ್ಟುಕೊಂಡಹಾಗೆ ಕಾಣುತ್ತದೆ. ಪಬ್ಲಿಕ್ ಸೆಕ್ಟರ್ ಹೇಗೋ ಹಾಳಾಗಿ ಹೋಗುತ್ತಿದೆಯೆಂದು, ಪ್ರೈವೇಟ್ ಸೆಕ್ಟರ್ ಅವರಿಗೆ ಮನಸ್ಸು ಬಂದಹಾಗೆ ಓಪನ್ ಇನ್‌ವಿಟೇಷನ್ ಕೊಡುತ್ತಿದ್ದಾರೆ. ಇದರಿಂದ ಸರ್ಕಾರದ್ದು ದ್ರೋಹ ನೀತಿ ಇದೆ. ಜನರ ಆಶಾಕಾಂಕ್ಷೆಗಳನ್ನು ಈಡೇರಿಸುವುದಕ್ಕಾಗುವುದಿಲ್ಲ. ಪಬ್ಲಿಕ್ ಸೆಕ್ಟರ್‌ಗೆ ಹಾಕತಕ್ಕ ದುಡ್ಡು ನಮ್ಮ ದೇಶದ ಜನತೆ ಬೆವರಿನ ರಕ್ತ ಮಿಶ್ರಣ ದುಡ್ಡು. ಇದನ್ನು ಯಶಸ್ವಿಯಾಗಿ ನಡೆಸುವುದು ನಮ್ಮ ಕರ್ತವ್ಯ. ಅಂಥಾದ್ದು ಫೇಲ್ಯೂರ್ ಆಗದಂತೆ ನೋಡಿಕೊಳ್ಳಬೇಕು. ಪ್ರೈವೇಟ್ ಸೆಕ್ಟರ್ ಅವರಿಗೆ ಕೊಡುತ್ತಿರುವ ನಮ್ಮ ಮನೋವೃತ್ತಿ ಸರಿಯಾಗಿಲ್ಲ. ಬ್ಯಾಂಕ್ರಪ್ಸಿ ಪಾಲಿಸಿ ನಿಮ್ಮದು.

(ಶ್ರೀ ವಿ. ಎನ್. ಪಾಟೀಲ್)

ಪಾರ್ಟಿ ಆಫ್ ಫಿಲಾಸಫಿ ಏನಿದೆಯೋ ಆ ಒಂದು ಫಿಲಾಸಫಿ ಅಪ್ರೋಚ್ ಸಹ ನಿಮ್ಮಲ್ಲಿಲ್ಲವೆಂದು ಹೇಳಬಹುದು. ಇವತ್ತು ಬೆಂಗಳೂರು ಡೈರಿಯನ್ನು ತೆಗೆದು ನೋಡಿದರೆ, ಅಲ್ಲಿ ಎಷ್ಟೋ ಲಕ್ಷ ರೂಪಾಯಿಗಳ ಬೆಣ್ಣೆಯನ್ನು ಫ್ಲುಟ್ಟು ಹಾಕಿದ್ದಾರೆ. ಇವತ್ತು ಎಲ್ಲಾ ಕಡೆಯಲ್ಲೂ ಸರ್ಕಾರ ಎಲ್ಲಿ ಕೈ ಹಾಕಿದೆ, ಅಲ್ಲಿ ನಷ್ಟವಾಗುತ್ತಿದೆ. ಇವತ್ತು ಒಬ್ಬ ಪ್ರೈವೇಟ್ ಫರ್ಮಿನ ಯಜಮಾನ ಯಾವ ರೀತಿಯಲ್ಲಿ ಒಳ್ಳೆಯ ಆಡಳಿತವನ್ನು ನಡೆಸಿಕೊಂಡು ತನ್ನ ವ್ಯಾಪಾರ ಅಥವಾ ಕಾರ್ಖಾನೆಯಲ್ಲಿ ಲಾಭ ಸಂಪಾದನೆ ಮಾಡುತ್ತಿದ್ದಾನೆ? ಇವತ್ತು ಅವನು 50 ಪರ್ಸೆಂಟ್ ಲಾಭ ಗಳಿಸುತ್ತಿದ್ದಾನೆ. ಇವತ್ತು ಸರ್ಕಾರದವರು ಪಬ್ಲಿಕ್ ಸೆಕ್ಟರಿನಲ್ಲಿ ಲಾಭ ಬರುವುದಿಲ್ಲ, ನಷ್ಟವಾಗುತ್ತದೆಂದು, ಪ್ರೈವೇಟ್‌ಗೆ ವಹಿಸಿಕೊಡಬೇಕೆಂದು ಹೇಳುತ್ತಿದ್ದಾರೆ. ಇದು ಯಾವ ಕಾರಣದಿಂದ ಹೀಗೆ ಆಗುತ್ತಿದೆ. ಇವರಿಗೆ ಸರಿಯಾಗಿ, ಯೋಗ್ಯ ರೀತಿಯಿಂದ ನಡೆಸಲು ಸಾಧ್ಯವಾಗದೆ ತಾನೆ? ಇನ್ನು ಗ್ರೀನ್ ರೆವೊಲ್ಯೂಶನ್ ಮಾಡುತ್ತೇವೆ ಎಂದು, ''ಗ್ರೀನ್'' ಎಂಬ ಪದವನ್ನು ಉಪಯೋಗಿಸಿದ್ದಾರೆ. ಇವತ್ತು ನೀವು ಮಾಡಬೇಕಾದ ಕರ್ತವ್ಯ, ಕಾರ್ಯಗಳಿಗೆ ಲಕ್ಷ್ಯ ಕೊಟ್ಟಿಲ್ಲ. ನಮ್ಮ ರಾಜ್ಯದಲ್ಲಿ 20-30 ವರ್ಷದಿಂದ ಯಾರು ಲ್ಯಾಂಡ್‌ಲೆಸ್ ಜನರು ಇದ್ದಾರೆ, ಅವರಿಗೆ ನೀವು ಏನು ಮಾಡಿದ್ದೀರಿ? , ಅವರಿಗೆ ಜಮೀನು ಏಕೆ ಕೊಟ್ಟಿಲ್ಲ? ಎಷ್ಟೋ ಎಕರೆ ಜಮೀನುಗಳು ಇವತ್ತು ಬಂಜರುಭೂಮಿಯಾಗಿ ಬಿದ್ದಿವೆ. ಇವತ್ತು ಜಮೀನನ್ನು ಯಾರ್ಯಾರು ಅಧಿಕಾರದಲ್ಲಿದ್ದಾರೆ, ಅವರಿಗೆ, ಮತ್ತು ಅವರಿಗೆ ಬೇಕಾದವರಿಗೆ ಕೊಡುತ್ತಿದ್ದಾರಲ್ಲದೆ, ಇಂಥ ಬಡ ಜನರಿಗೆ ಕೊಡುತ್ತಿಲ್ಲ. ಇವತ್ತು ನೀವು ಸೈಂಟಿಫಿಕ್ ಅಪ್ರೋಚ ಎಂದು ಹೇಳಿ, ಸಣ್ಣ ರೈತರಿಂದ ತೆರಿಗೆವಸೂಲು ಮಾಡುತ್ತಿದ್ದೀರಿ. ಆದರೆ 50 ಎಕರೆ, 100 ಎಕರೆ ನೀರಾವರಿ ಮಾಡತಕ್ಕವರಿಂದ ಏನನ್ನೂ ವಸೂಲು ಮಾಡುತ್ತಾ ಇಲ್ಲ.

ಇನ್ನು ಈ ದೇವಸ್ಥಾನಗಳ ಜಮೀನಿನ ವಿಚಾರ. ಇವತ್ತು ಲಿಂಗಾಯಿತರ, ಬ್ರಾಹ್ಮಣರ ಎಂದು ಸಾವಿರಾರು ದೇವರು ಇದ್ದಾರೆ. ಇವತ್ತು ಇಂಥ ದೇವರುಗಳ ಹೆಸರಿನಲ್ಲಿ ಎಷ್ಟೋ ಲಕ್ಷ ಎಕರೆ ಜಮೀನು ಇವೆ. ಇವುಗಳನ್ನು ಎಲ್ಲಾ ಯಾರು ಅನುಭವಿಸುತ್ತಿದ್ದಾರೆ? ದೇವರಿಗೆ ಇದರಿಂದ ಒಂದು ಕಾಸು ಬರುತ್ತಾ ಇಲ್ಲ. ಉದಾಹರಣೆಗೆ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥ ದೇವರು ಇದ್ದಾರೆ. ಅಲ್ಲಿಗೆ ಭಕ್ತಿಯಿಂದ ಸಾವಿರಾರು ಜನರು ಹೋಗುತ್ತಿದ್ದಾರೆ. ಅಲ್ಲಿಯ ಉತ್ಪತ್ತಿ ಎಲ್ಲಾ ದೇವರಿಗೆ ಹೋಗುತ್ತಿಲ್ಲ. ಅದರ ಆಡಳಿತಗಾರನಿಗೆ ಮನಿ ಆರ್ಡರ್ ಕೂಡ ಹೋಗುತ್ತದೆ. ಅಂದರೆ, ಇವರಿಂದ ದೇವರಿಗೆ ಲಾಭವಾಗುತ್ತದೆಯೇ? ದೇವರ ಹೆಸರು ಹೇಳಿ ಯಾವ ವ್ಯಕ್ತಿಗೆ ಲಾಭವಾಗುತ್ತದೆ? ಇವತ್ತಿನ ದಿವಸ ಯಾವ ಜಮೀನಿನಲ್ಲಿ ಒಬ್ಬ ಎರಡು ಮೂರು ತಲೆಮಾರುಗಳಿಂದ ದುಡಿದುಕೊಂಡು ಬರುತ್ತಿದ್ದಾನೋ, ಅಂಥವನಿಗೆ ಜಮೀನು ಇಲ್ಲವಾಗಿದೆ. ಅವನ ತಂದೆಯೂ ಅದರಲ್ಲಿ ದುಡಿದಿದ್ದಾನೆ, ಅವನ ತಾತನೂ ಅದರಲ್ಲಿ ದುಡಿದಿದ್ದಾನೆ. ಅವನಿಗೆಯೇ ಅದನ್ನು ಕೊಟ್ಟುಬಿಟ್ಟರೆ ಅವನಿಗೆ ಅದರಲ್ಲಿ ಪ್ರೀತಿ ಬರುತ್ತದೆ, ಹೆಚ್ಚು ಬೆಳೆಯನ್ನು ಬೆಳೆಸುವುದಕ್ಕೆ ಉಮೇದ ಬರುತ್ತದೆ. ದೇವರ ಹೆಸರಿನಲ್ಲಿ ರೈತರಿಗೆ ಕೊಟ್ಟರೆ ಎಷ್ಟೋ ಒಳ್ಳೆಯದಾಗುತ್ತದೆ. ಅದಲ್ಲದೆ, ಒಬ್ಬೊಬ್ಬ ಟೆನೆಂಟಿಗೆ ಒಂದೊಂದು ವರ್ಷಕ್ಕೆ ಕೊಟ್ಟರೆ ಇದರಿಂದ ಏನು ಪ್ರಯೋಜನ? ಈ ರೀತಿ ದೇವಸ್ಥಾನಗಳ ಭೂಮಿ ನಷ್ಟವಾಗುತ್ತಿದೆ. ಇದರಿಂದ ನಮ್ಮ ಆಹಾರ ಸಮಸ್ಯೆಯಾದರೂ ಹೇಗೆ ಸುಧಾರಿಸಬೇಕು?

ಇನ್ನು ಟ್ಯಾಕ್ಸ್ ವಿಚಾರ. ಇವತ್ತು ಡೈರೆಕ್ಟ್ ಟ್ಯಾಕ್ಸೇಶನ್ ಹಾಕಿದರೆ, ಯಾರು ಬೇಡ ಎನ್ನುವುದಿಲ್ಲ, ಆದರೆ ಇನ್‌ಡೈರೆಕ್ಟ್ ಟ್ಯಾಕ್ಸೇಶನ್ ಹಾಕಿ ಸಣ್ಣ ರೈತನ ಕುತ್ತಿಗೆ ಕೊಯ್ಯುವಂತೆ ಮಾಡುತ್ತಿದ್ದೀರಿ. ಆದ್ದರಿಂದ ಈ ನಿಮ್ಮ ಇನ್‌ಡೈರೆಕ್ಟ್ ಟ್ಯಾಕ್ಸೇಶನ್ ಏನಿದೆ, ಅದು ಬಹಳ ಮೋಸ ಎಂದು ಹೇಳುತ್ತೇನೆ. ಯಾರ ಹತ್ತಿರ ತೆಗೆದುಕೊಳ್ಳಬೇಕೋ ಅವರಿಂದ ತೆಗೆದುಕೊಳ್ಳುವುದಿಲ್ಲ. ಆದರೆ ಈ ಬಡವರಿಂದ ಅವರಿಗೆ ಗೊತ್ತಾಗದಂತೆ ತೆಗೆದುಕೊಳ್ಳುತ್ತಿದ್ದೀರಿ. ಇದಕ್ಕೆ ಮುಖ್ಯವಾಗಿ ಬಂಡವಾಳದಾರರ ಒಳಸಂಚು ಆಗಿದೆ. ಇವತ್ತು ಸರ್ಕಾರ ದೊಡ್ಡ ದೊಡ್ಡ ಬಂಡವಾಳದಾರರ ಚರ್ಮ ಕೂಡ ಮುಟ್ಟುವುದಕ್ಕೆ ಧೈರ್ಯವಿಲ್ಲ. ಇವರು ತಯಾರಾಗಿಲ್ಲ; ಆದರೆ ಬಡವನ ರಕ್ತದ ಹನಿಯನ್ನು ಮಾತ್ರ ಇವರು ಬಿಡುವುದಿಲ್ಲ. ಲ್ಯಾಂಡ್‌ಲೆಸ್ ಪೆಸೆಂಟ್ರಿಯನ್ನು ಇವರು ಒಂದು ಬಿಸಿನೆಸ್ಸಾಗಿ ಕ್ರಶ್ ಮಾಡುತ್ತಿದ್ದಾರೆ. ಇದು ನಿಮ್ಮ ಪಾಲಿಸಿ, ಇದು ನಿಮ್ಮ ಧೋರಣೆ.

ಇವತ್ತು ತಕಾವಿ ಸಾಲ ಕೊಡುತ್ತಿದ್ದಾರೆ. 10-15 ವರ್ಷಗಳವರೆಗೂ ಅದನ್ನು ಕೊಡದವರೂ ಇದ್ದಾರೆ. ಆದರೆ, ಬಡವರು ಎಲ್ಲಿಯಾದರೂ ಕೊಡದಿದ್ದರೆ, ಅವನ ಜಮೀನನ್ನು ಹರಾಜು ಮಾಡಿಬಿಡುತ್ತಾರೆ. ಬಾವಿಗಳಿಗೆ ಎರಡು ಮೂರು ಸಾವಿರ ತೆಗೆದುಕೊಂಡರೆ, ಅವರ ಬಾವಿಯು ಕೂಡ ಪೂರ್ತಿಯಾಗಿರುವುದಿಲ್ಲ. ಯಾರು ಬಾವಿಯ ಹೆಸರಿನಲ್ಲಿ ತೆಗೆದುಕೊಂಡಿದ್ದಾರೋ, ಅವು ಕೊಟ್ಟಿಲ್ಲ

ವೆಂದು ಅವರ ಬಾವಿಯ ಹೆಸರಿನಲ್ಲಿ 10 ಎಕರೆ ಜಮೀನನ್ನು ಮಾರಿ ಬಿಡುತ್ತಾರೆ. ಯಾವ ರೈತರಿಗೆ ಎರಡು ಸಾವಿರ ಕೊಟ್ಟಿದ್ದಾರೆ ಅದಕ್ಕಾಗಿ ಅವರ 25 ಸಾವಿರ ಬೆಲೆ ಬಾಳುವ ಹೊಲವನ್ನು ಶ್ರೀಮಂತರಿಗೆ ಮಾರುತ್ತಿದ್ದಾರೆ; ಅವನ ಸ್ಟ್ಯಾಂಡಿಂಗ್ ಕ್ರಾಪ್ ಹರಾಜು ಮಾಡುತ್ತಿದ್ದಾರೆ. ಒಂದು ವರ್ಷ ಕ್ಷಾಮ ಬಂದರೆ ರಿಲೀಫ್ ಕಾಮಗಾರಿಗಳನ್ನು ಮಾಡುತ್ತೇವೆಂದು ಹೇಳುತ್ತಾರೆ. ಮಾರುದಿನ ರೆವೆನ್ಯೂ ಇನ್ಸ್‌ಪೆಕ್ಟರ್ ಬಂದು ನಿಮ್ಮ ಹೊಲ ಹರಾಜು ಮಾಡುತ್ತೇವೆಂದು ಹೇಳುತ್ತಾರೆ. ಎರಡು ವರ್ಷದ ಹಿಂದೆ ಬಾವಿಗೆ ಸಾಲ ತೆಗೆದುಕೊಂಡಿದ್ದೀರಿ, ಅದಕ್ಕೋಸ್ಕರ ಹರಾಜು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ ಸರ್ಕಾರ ಇರುವುದು ಯಾರಿಗಾಗಿ? ಯಾರ ಸೇವೆ ಮಾಡುವುದಕ್ಕಾಗಿ? ಬಡವರ ರಕ್ತ ಹರಿಯುವಾಗ ಸರ್ಕಾರವೆಂದು ಕರೆಯೋಣವೇ? ಇವತ್ತು ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? 10–8 ಎಕರೆಗಳಲ್ಲಿ ಕಬ್ಬಿನ ಬೆಳೆ ಇರುವಾಗ ಪಂಪ್‌ಸೆಟ್ಟಿನ ಇಂಜಿನುಗಳನ್ನೇ ನಿಲ್ಲಿಸಿಬಿಡುತ್ತಾರೆ. ಕಬ್ಬು ಸುಟ್ಟು ಹೋಗುತ್ತದೆ. ಇದರಿಂದ ಏನು ಮಾಡಿದಂತಾಗುತ್ತದೆ? ನಿಮ್ಮ ಪಾಲಿಸಿ ಏನು! ನಿಮ್ಮಲ್ಲಿ ಏನು ಪಾಲಿಸಿ ಇದೆ ಎಂದು ಹೇಳುವುದಕ್ಕೆ ನಿಮಗೆ ಧೈರ್ಯವಿಲ್ಲ. ನೀವು ಶೋಷಣೆ ಮಾಡುತ್ತಿದ್ದೀರಿ. ಬ್ರಿಟಿಷರು ಬಿಟ್ಟು ಹೋದ ಮೇಲೆ ಇದನ್ನು ನೀವು ಮಾಡುತ್ತೀರಿ. ನಿಮಗೆ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ಮಂತ್ರಿಗಳು ಟೂರಿನಲ್ಲಿ ಬಂದಾಗ ಮನವಿಗಳನ್ನು ಸಲ್ಲಿಸುತ್ತಾರೆ. ಅದಕ್ಕೆ ಅಲ್ಲಿ ಅವರನ್ನು ಹೆರಾಸ್‌ಮೆಂಟ್ ಮಾಡಬೇಡಿ ಎಂದು ಹೇಳುತ್ತೀರಿ. ಆದರೆ ಜಿಲ್ಲಾಧಿಕಾರಿಗಳನ್ನು ಕರೆದು ಇನ್ ಕೆಮರಾ ಮೀಟಿಂಗ್ ಮಾಡಿ ಎಲ್ಲಾ ವಸೂಲು ಮಾಡಿಬಿಡಿ, ವಸೂಲು ಮಾಡದಿದ್ದರೆ, ಸರ್ಕಾರ ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದೀರಿ. ವಸೂಲು ಮಾಡದಿದ್ದರೆ, ಅವರನ್ನು ಗದರಿಸುತ್ತಿದ್ದೀರಿ. ಯಾರು ಶ್ರೀಮಂತರಿದ್ದಾರೆ, ಅವರು 10 ವರ್ಷದಿಂದಲೂ ಸಾಲ ತೆಗೆದುಕೊಂಡಿದ್ದರೂ, ಅವರಿಗೆ ರಕ್ಷಣೆಯನ್ನು ಕೊಡುತ್ತಿದ್ದಾರೆ. ಅಂಥವರ ಮನೆ ಹರಾಜು ಮಾಡಿದರೆ, ನಮ್ಮ ಕಣ್ಣಲ್ಲಿ ನೀರು ಬರುತ್ತಾ ಇಲ್ಲ. ಆದರೆ ಇವತ್ತು ಪೆಸೆಂಟ್ರಿ ಜನ ಯಾರು ಇದ್ದಾರೆ, ಅವರಿಗೆ ಏಕೆ ಅನ್ಯಾಯ ಮಾಡುತ್ತಿದ್ದೀರಿ! ತೊಂದರೆ ಕೊಡುತ್ತಿದ್ದೀರಿ! ಎರಡು ಸಾವಿರ ರೂಪಾಯಿಗೆ ಅವನ 25 ಸಾವಿರ ರೂಪಾಯಿಯ ಜಮೀನನ್ನ ಶ್ರೀಮಂತರಿಗೆ 5 ಸಾವಿರಕ್ಕೆ ತೆಗೆದುಕೊಳ್ಳುವಂತೆ ಮಾಡುತ್ತೀರಿ. ಇದು ಬಹಳ ಅನ್ಯಾಯ, ಈ ರೀತಿ ಮಾಡಬಾರದು ಎಂದು ಹೇಳಬೇಕಾಗಿದೆ.

ಇನ್ನೊಂದು ಪ್ರಶ್ನೆ. ನಾನು ಹೈದರಬಾದ್ ಕರ್ನಾಟಕದಿಂದ ಬಂದಿದ್ದೇನೆ ಎಂದು ಹೇಳುತ್ತಿಲ್ಲ. ಇದು ಹ್ಯೂಮನ್ ಪ್ರಾಬ್ಲಮ್. ಈಗ ರಿವಿಜನ್ ಆಫ್ ಅಸೆಸ್‌ಮೆಂಟ್ ಏನು ಮಾಡಿದ್ದಾರೆ ಇದು ಆಗಿನ ಕಾಲದ ಜಹಗೀರ್‌ದಾರರಮದುವೆ ಆದರೆ 25 ಪರ್ಸೆಂಟ್ ಲ್ಯಾಂಡ್ ಇನ್‌ಕ್ರೀಜ್ ಮಾಡುತ್ತಿದ್ದ ಹಾಗೆ ಇದೆ. 1947 ನೇ ಇಸವಿಯಲ್ಲಿ ಹೈದರಾದ್ ಕರ್ನಾಟಕದಲ್ಲಿ ನೈಜಾಮು ಸಾಹೇಬರ ಸರ್ಕಾರ ಇದ್ದಾಗ್ಯೆ 20 ಟೈಮ್ಸ್ ಲಾಂಡ್ ರೆವಿನ್ಯೂ ಹಾಕಿ ಅದನ್ನು ಅವರು ತಮ್ಮ ಸ್ವಂತ ಖರ್ಚಿಗೆ ಉಪಯೋಗಿಸುತ್ತಿದ್ದರು. ಈಗ ಚಿಂಚೋಳಿಯಲ್ಲಿ, ಹುಮ್ನಾಬಾದಿನಲ್ಲಿ 25 ಪರ್ಸೆಂಟ್ ಲ್ಯಾಂಡ್ ರೆವಿನ್ಯೂ ಇದೆ. ಜಹಗೀರ್‌ದಾರರಾಗಿರತಕ್ಕವರು ಇಂದಿನ ಕ್ಯಾಬಿನೆಟ್‌ನಲ್ಲಿಯೂ ಸಹ ಇದ್ದಾರೆ. ಅಗ್ರಿಕಲ್ಚರ್ ಬಗ್ಗೆ ಸೈನ್‌ಟಿಫಿಕ್ ಅಪ್ರೋಚ್ ನೀವು ಇಟ್ಟಿದ್ದೀರಾ? ಲ್ಯಾಂಡ್ ರೆವಿನ್ಯೂನಲ್ಲಿ ನೀವು ಏಕರೂಪತೆಯನ್ನು ಸಾಧನೆ ಮಾಡಿಲ್ಲ. ಬೀದರ್ ಮತ್ತು ಗುಲ್ಬರ್ಗ ಡಿಸ್ಟ್ರಿಕ್ಟ್‌ಗಳಲ್ಲಿ ಹೆಲ್ತ್ ಸೆಸ್ ತೆಗೆದುಕೊಂಡು ಹೆಲ್ತ್ ಕೊಡುತ್ತಿಲ್ಲ. ಎಜುಕೇಷನ್ ಸೆಸ್ಸ್ ತೆಗೆದುಕೊಂಡು ಎಜುಕೇಷನ್ ಕೊಡುತ್ತಿಲ್ಲ. 400 ಜನ ವಿಧ್ಯಾರ್ಥಿಗಳು ಇರುವ ಒಂದು ಮಿಡ್ಲ್ ಸ್ಕೂಲ್‌ನಲ್ಲಿ 27 ಮಂದಿ ಉಪಾಧ್ಯಾಯರು ಇದ್ದಾರೆ. ಆ ಸ್ಕೂಲಿನಲ್ಲಿ 3 ಕುರ್ಚಿಗಳು ಇವೆ. ಆ ಉಪಾಧ್ಯಾಯರುಗಳು ಸ್ಕೂಲಿಗೆ ಬಂದಮೇಲೆ ನಿಂತುಕೊಂಡು ವಿಧ್ಯಾರ್ಥಿಗಳಿಗೆ ಪಾಠವನ್ನು ಹೇಳಿಕೊಟ್ಟು ಹೋಗಬೇಕಾದಂತಹ ಸಿಚುಯೇಷನ್ ಬಂದಮೇಲೆ, ಚಾಕ್ ಪೀಸ್ ಮತ್ತು ಬ್ಲಾಕ್ ಬೋರ್ಡಿಗೆ ದುಡ್ಡು ಇಲ್ಲದಿದ್ದರೆ ಎಂತಹ ಒಳ್ಳೆಯ ಶಿಕ್ಷಣವನ್ನು ಉಪಾಧ್ಯಾಯರು ಮಕ್ಕಳಿಗೆ ಕೊಡಬಹುದು? ಎಂತಹ ಒಳ್ಳೆಯ ನೌಕರರನ್ನು ತಯಾರು ಮಾಡುತ್ತಾರೆ ಎಂಬುದನ್ನು ನೋಡಬೇಕಾಗಿದೆ. ಸರ್ಕಾರ ತನ್ನ ಕರ್ತವ್ಯದಲ್ಲಿ ಫೈಲ್ಯೂರ್ ಆದಮೇಲೆ ಈ ಸರ್ಕಾರ ಉಳಿಯಲಿಕ್ಕೆ ಶಕ್ಯ ಇಲ್ಲ. ಜನತೆಯ ಮನಸ್ಸನ್ನು ಒಲಿಸಿಕೊಂಡು ಜನತಾ ಸೇವೆಯನ್ನು ಮಾಡುವ ಸರ್ಕಾರ ಇದೆಯೇ? ಜನತಾ ಕರ್ತವ್ಯವನ್ನು ಮರೆಯುವ ಸರ್ಕಾರವನ್ನು ಕೇಳುವ ಅಧಿಕಾರ ಜನತೆಗೆ ಇಲ್ಲವೇ? ಪಂಡಿತ್ ನೆಹರು ಅವರು ಹೇಳಿದ ಹಾದಿಯಲ್ಲಿ ನೀವು ಹೋಗುತ್ತಿದ್ದೀರಾ? ನಮ್ಮಲ್ಲಿರುವ ಜನತೆ ಏನಿದೆ ಅದು ಅನ್ಯಾಯ ಮಾಡಲಾರದಂತಹ ಜನ. ಅವರನ್ನು ಯಾವರೀತಿ ಉಳಿಸಬೇಕು ಎನ್ನುವ ಫೀಲಿಂಗ್ಸ್ ನಿಮ್ಮಲ್ಲಿ ಬಂದಿದೆಯೇ! ಬೀದರ್ ಡಿಸ್ಟ್ರಿಕ್ಟ್ ಮೈಸೂರು ರಾಜ್ಯದಲ್ಲೇ ಮೋಸ್ಟ್ ಬ್ಯಾಕ್‌ವರ್ಡ ಡಿಸ್ಟ್ರಿಕ್ಟ್ ಎನ್ನುವುದನ್ನು ಸೆಂಟ್ರಲ್ ಗೌರ‍್ನಮೆಂಟಿನವರು ಒಪ್ಪುತ್ತಾರೆಂದು ಮಾನ್ಯ ಮುಖ್ಯ ಮಂತ್ರಿಗಳು ಎಷ್ಟೋ ಸಾರಿ ಹೇಳಿದ್ದಾರೆ. ಬಜೆಟ್ಟಿನಲ್ಲಿ ಮೋಸ್ಟ್ ಬ್ಯಾಕ್‌ವರ್ಡ್ ಡಿಸ್ಟ್ರಿಕ್ಟಿಗೆ ಏನೇನು ಪ್ರೊವಿಜನ್ ಇಟ್ಟಿದ್ದೀರಿ? ಏನು ಪ್ರೊವಿಜನ್ ಇಟ್ಟಿದ್ದೀರಿ ಎಂದು ಕೇಳಿದರೆ ಏನೂ ಇಲ್ಲ. ಮಾಡಲ್ ಎಗ್ಸಾಂಪಲ್

(ಶ್ರೀ ವಿ. ಎನ್. ಪಾಟೀಲ್)

ಮೈಸೂರು ಸ್ಟೇಟಿನಲ್ಲಿ ಯಾವ ತರಹ ಫಂಕ್ಷನ್ ಮಾಡುತ್ತಿದ್ದೀರಿ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಹೈದರಬಾದ್ ಕರ್ನಾಟಕ ಏರಿಯಾದವರಿಗೆ ಮುಖ್ಯ ಮಂತ್ರಿಗಳ ಷಿಪ್ ಕೊಟ್ಟಿದ್ದೇವೆ ಎನ್ನುವುದು ಮುಖ್ಯ ಪ್ರಶ್ನೆ ಅಲ್ಲ. ಅದು ನಮಗೆ ಬೇಕಾಗಿಲ್ಲ. ಅದನ್ನು ಬೇಕಾದರೆ ಹಳೆಯ ಮೈಸೂರಿನವರೇ ತೆಗೆದುಕೊಳ್ಳಿ. ಹೈದರಾಬಾದ್ ಕರ್ನಾಟಕದವರಿಗೆ ಈಗ 12 ವರ್ಷಗಳಿಂದ ಸೆಕ್ರೆಟೇರಿಯಟ್‌ನಲ್ಲಿ ಎಷ್ಟು ಜನಗಳಿಗೆ ಅಪಾಯಿಂಟ್‌ಮೆಂಟ್ ಕೊಟ್ಟಿದ್ದೀರಿ ? ನನ್ನ ಪ್ರಶ್ನೆ 411ಕ್ಕೆ ಉತ್ತರ ಕೊಡುತ್ತಾ 1959 ನೇ ಇಸವಿಯಿಂದ ಎಂದರೆ ರಾಜ್ಯಗಳ ಪುನರ್‌ವಿಂಗಡಣೆಯಾದಮೇಲೆ ಸೆಕ್ರೆಟೇರಿಯೆಟ್ಟಿಗೆ ನೇಮಕ ಮಾಡಿಕೊಂಡ 720 ಹುದ್ದೆಗಳ ಪೈಕಿ 7 ಜನಗಳನ್ನು ಹೈದರಾಬಾದ್ ಕರ್ನಾಟಕದಿಂದ ಆಯ್ಕೆ ಮಾಡಿಕೊಂಡಿದ್ದೀರಿ, ಇದರಲ್ಲಿ ಈಕ್ವಿಟಿ ರಾಷ್‌ನಾಲಟಿ ಚಾಲೆಂಜ್ ಮಾಡುತ್ತೀರಾ ? 9 ಪರ್ಸೆಂಟ್ ಅಪಾಯಿಂಟ್‌ಮೆಂಟ್ ಸೆಕ್ರೆಟೇರಿಯಟ್‌ನಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ಕೊಟ್ಟರೆ ಸಾಕೇ ? ಯಾರಿಗಾದರೂ ಚೀಫ್ ಮಿನಿಸ್ಟರ್ ಮಾಡಿ ಹಿಂದುಳಿದ ಏರಿಯಾದ ಜನಗಳನ್ನು ಎಕ್ಸ್‌ಪ್ಲಾಯಿಟ್ ಮಾಡುತ್ತೀರಾ ? ಇಂಥಾ ಅನ್ಯಾಯವನ್ನು ನಾವು ಸಹಿಸುವುದಕ್ಕಾಗುವುದಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ನಮ್ಮ ಹೈದರಾಬಾದ್ ಕರ್ನಾಟಕಕ್ಕೆ ಈ ಚೀಫ್ ಮಿನಿಸ್ಟರ್ ಷಿಪ್ ಬೇಕಾಗಿಲ್ಲ. ಬೇಕಾದರೆ ಅವರನ್ನು ತೆಗೆಯಿರಿ, ಮತ್ತೊಬ್ಬರನ್ನು ಇಟ್ಟುಕೊಳ್ಳಿ. ಕಾಂಗ್ರೆಸ್ ಪಾರ್ಟಿಯವರು ಹೈದರಬಾದ್ ಕರ್ನಾಟಕಕ್ಕೆ 9 ಪರ್ಸೆಂಟ್ ಅಪಾಯಿಂಟ್ ಮೆಂಟುಗಳನ್ನು ಸೆಕ್ರೆಟೇರಿಯಟ ನಲ್ಲಿ ಕೊಟ್ಟಿದ್ದಾರೆ. ನಿಜವಾಗಿಯೂ ನೀವು ಹೈದರಾಬಾದ್ ಕರ್ನಾಟಕಕ್ಕೆ ನ್ಯಾಯವನ್ನು ದೊರಕಿಸಿಕೊಟ್ಟಿದ್ದೀರಾ? ನಿಮ್ಮಲ್ಲಿ ಸಾಕಷ್ಟು ಸ್ವಾರ್ಥ ಇದೆ, ನಿಮ್ಮಲ್ಲಿ ಸಾಕಷ್ಟು ಕ್ಯಾಸ್ಟ್ ಮತ್ತು ಕ್ರೀಡ್ ಕೂಡ ಇದೆ. ನಿಮ್ಮ ನಿಮ್ಮವರಿಗೆ ಹಂಚಿಕೊಳ್ಳಿ, ನಾನು ಬೇಡ ಎಂದು ಹೇಳುವುದಿಲ್ಲ. ಈ ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಜಾಗವನ್ನು ಸುಭಾಷ್ ನಗರದಲ್ಲಿ ಏನು ಕೊಟ್ಟಿದ್ದೀರಿ ಅದನ್ನು 99 ವರ್ಷ ಲೀಜಿಗೆ ಕೊಟ್ಟಿದ್ದೀರಿ. ಅದನ್ನು 100 ವರ್ಷಕ್ಕೋ ಅಥವಾ 101 ವರ್ಷಕ್ಕೋ ಮುಂದುವರಿಸಿ ಬಿಡಿ. ಪಾಪ 99 ವರ್ಷ ಏತಕ್ಕೆ ಮಾಡಿದ್ದೀರಿ. ಹೈದರಾಬಾದ್ ಕರ್ನಾಟಕದಲ್ಲಿ ಬೀದರ್ ಡಿಸ್ಟ್ರಿಕ್ಟ್ ತುಂಬಾ ಬ್ಯಾಕ್‌ವರ್ಡ್ ಏರಿಯಾ ಎಂದು ಕೇಂದ್ರ ಸರ್ಕಾರದವರು ಕೂಡ ಹೇಳಿದ್ದಾರೆಂದು ಹೇಳುತ್ತೀರಿ. ಆದರೆ ಅದರ ಬಗ್ಗೆ ನೀವು ಏನು ಮಾಡಿದ್ದೀರಿ ? ಕೃಷ್ಣಾ ಗೋದಾವರಿ ನೀರಿನ ಬಗ್ಗೆ ಕೇಂದ್ರ ಸರ್ಕಾರದವರು ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆ. ನೀವು ಎಂದರೆ ರಾಜ್ಯ ಸರ್ಕಾರದವರೂ ಸಹ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದೀರಿ. ಕಾವೇರಿ ಬೇಸಿನ್ನಿನ ಯೋಜನೆಯನ್ನು ತೆಗೆದುಕೊಳ್ಳುವುದರಲ್ಲಿ ನನ್ನ ಸಮ್ಮತಿ ಇದೆ. ನಮ್ಮ ಕಡೆ ಜನತಾ ಪ್ರಾಜೆಕ್ಟಿಗೋಸ್ಕರ ಸ್ಯಾಕ್ರಿಫೈಸ್ ಮಾಡುವುದಕ್ಕೆ ನಾವು ತಯಾರು ಇದ್ದೇವೆ. ಈಗಾಗಲೇ ಆಂಧ್ರ ಸರ್ಕಾರದವರು ನಾಗಾರ್ಜುನ ಸಾಗರದ ಅಣೆಕಟ್ಟಿಗೆ ಕ್ರೆಸ್ಟ್ ಗೇಟ್ ಕಟ್ಟುವವರಿದ್ದಾರೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ ಈ ವರ್ಷ ಬಡ್ಜೆಟ್ಟಿನಲ್ಲಿ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದೆ. ಇದು ಏನೇನೂ ಸಾಕಾಗುವುದಿಲ್ಲ. ಇದರಲ್ಲಿ ಅಲ್ಲಿರತಕ್ಕ ಸಿಬ್ಬಂದಿಗೋಸ್ಕರವಾಗಿಯೇ ಎಷ್ಟೋ ಹಣ ಖರ್ಚಾಗುತ್ತದೆ. ಹಿಂದುಳಿದ ಜಿಲ್ಲೆಯಾದ ಬೀದರ ಜಿಲ್ಲೆಯ ಅಭಿವೃದ್ಧಿಗಾಗಿ ಒಂದು ಕೋಟಿ ರೂಪಾಯಿಗಳ ಪ್ರಾವಿಜನ್ ಇಟ್ಟಿಲ್ಲ. ಈ ಸರ್ಕಾರವನ್ನು ಮೋಸ್ಟ್ ಇರ್ರೆಸ್ಪಾನ್ಸಿಬಲ್ ಗೌರ್ನಮೆಂಟ್ ಎಂದು ಕರೆಯೋಣವೇ ? ಇಂಥಾ ಸಿಚ್ಯುಯೇಷನ್ ಇದ್ದಾಗ ನಿಮಗೆ ಒಂದು ಮಾರಲ್ ಇದೆಯೇ ಎಂದು ನಾನು ಕೇಳುತ್ತೇನೆ. ನೀವು ಗೋದಾವರಿ ಬೇಸಿನ್ನಿನ ಪ್ರಾಜೆಕ್ಟ್ ಅನ್ನು ಕನ್‌ಸ್ಟ್ರಕ್ಟ್ ಮಾಡಿದ್ದೀರಾ ? ಗೋದಾವರಿ ಬೇಸಿನ್ ಇರಿಗೇಷನ್‌ಗೆ ಸಂಬಂಧಪಟ್ಟ ಹಾಗೆ ಯಾವ ಯೋಜನೆಯೂ ಇಲ್ಲ. ಮೈನರ್ ಇರಿಗೇಷನ್ ಬಗ್ಗೆಯೂ ಯಾವ ಯೋಜನೆಯೂ ಇಲ್ಲದೇ ಇದ್ದಾಗ ಅದರ ಕಡೆ ಲಕ್ಷ್ಯ ಕೊಡಲಾರದೆ ಇರುವುದು ಬೇಜವಾಬ್ದಾರಿಯ ಮಾತಾಗಿದೆ. ಈ ಬಡ್ಜೆಟ್ಟಿನಲ್ಲಿ ಮಾಡಲ್ ಎಗ್ಸಾಂಪಲ್ ಇಲ್ಲ. ನಾನು ಬಡ್ಜೆಟ್ಟನ್ನು ನೋಡಿದ್ದೇನೆ. ಇದರಲ್ಲಿ ಬಡವರಿಗೆ, ರೈತರಿಗೆ ಅನುಕೂಲವಾದಂತಹ ವಿಷಯಗಳಾಗಲೀ ಅವರಿಗೆ ಮನೆಕೊಡುವುದು ಯಾವುದೂ ಇಲ್ಲ. ವಿಧಾನ ಸೌಧದಂತಹ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿಕೊಂಡು ಕುಳಿತುಕೊಂಡಿರುತ್ತೀರಿ. ಹೊಸ ಟ್ಯಾಕ್ಸ್ ಹಾಕಲಾರದಂತಹ ಬಡ್ಜೆಟ್ಟನ್ನು ತಂದಿರುವುದು ಏನಿದೆ ಇದರಲ್ಲಿ ರಿಸೋರ್ಸಸ್ ಇದೆಯೆಂದು ಹೇಳುವುದಕ್ಕೆ ತಯಾರು ಇಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡದೆ ವೆಸ್ಟೆಡ್ ಇಂಟರೆಸ್ಟಿನಿಂದ 3 ವರ್ಷಗಳಿಂದ ಹೂತು ಬಿಟ್ಟಿದ್ದೀರಿ. ನಾಲ್ಕನೆಯ ಪಂಚವಾರ್ಷಿಕ ಯೋಜನೆ ಎಂದು ಬರುತ್ತದೆಯೋ ನೋಡೋಣ. ಡಿಫಂಕ್ಟ್ ಪಾಲಿಸಿ, ಪಾವರ್ಟಿ ಫಿಲಾಸಫಿ ಹೇಳಿಕೊಂಡು ಪೊಲಿಟಿಕಲ್ ಪಾರ್ಟಿ ಚೇರ್ ಮಾತ್ರ ಬಿಟ್ಟು ಹೋಗಬಾರದು, ಎಂದು ಅಲ್ಲಿಯೇ ಕುಳಿತು ಕೊಂಡಿರುವ ಪಾಲಿಸಿ ಇದೆ. ಈ ಪಾಲಿಸಿಯಿಂದ ಜನತೆಯನ್ನು ಸ್ಯಾಟಿಸ್‌ಫೈ ಮಾಡುವುದಕ್ಕಾಗುವುದಿಲ್ಲ. ಏನೋ ಒಂದು ದೊಡ್ಡ ಸಂಶೋಧನೆ ಮಾಡು

ವುದಕ್ಕೆ ಭೂತಲಿಂಗಂ ಕಮಿಟಿಯನ್ನು ನೇಮಕ ಮಾಡಿದ್ದಾರೆ. ರಿಸೋರ್ಸಸ್ ಸಲುವಾಗಿ ಭೂತಲಿಂಗಂ ಅವರ ಚೇರ್ಮನ್ ಷಿಪ್‌ನಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿದ್ದಾರೆ. I remember that this gentleman Mr. Boothalingam did the work of a *Bootha* in the Steel Ministry and he was therefore black-listed.

ಇಂಥವರ ಸಲಹೆಗಳನ್ನು ತೆಗೆದುಕೊಂಡು ಮೈಸೂರ ಸ್ಟೇಟಿನಲ್ಲಿ ರಿಸೋರ್ಸಸ್ ಕಮಿಟಿಯಿಂದ ಒಂದು ಒಳ್ಳೆಯ ವರದಿ ಬರುವುದಕ್ಕೆ ಸಾಧ್ಯವಿಲ್ಲ. ತಾವೇನೋ ಭೂತಲಿಂಗಂ ಕಮಿಟಿಯನ್ನು ನೇಮಕ ಮಾಡಿದ್ದೇವೆ ಎಂದು ಸಂತೋಷ ಪಡಬಹುದು. ಆದರೆ ಈ ಕಮಿಟಿಯ ರಿಪೋರ್ಟ್ ಬರುವುದು ಈಗ ತಾವು ಯಾವ ರಿಸೋರ್ಸಸ್ ಅನ್ನು ಟ್ಯಾಪ್ ಮಾಡಬೇಕೆಂದು ಮನಸ್ಸಿನಲ್ಲಿ ಇಟ್ಟುಕೊಂಡಿದ್ದೀರೋ ಅದೇ ರಿಸೋರ್ಸಸ್ ಬಗ್ಗೆ ಬರುತ್ತದೆ. ಮೈಸೂರು ಸ್ಟೇಟಿನಲ್ಲಿ ಇಂಟರೆಸ್ಟ್ ಇರುವವರು ಆ ಕಮಿಟಿಯಲ್ಲಿ ಸೇರಿದರೆ ಸರಿ ಹೋಗಬಹುದು. ಈಗ ಇರತಕ್ಕಂಥ ಭೂತಲಿಂಗಂ ಅವರ ರಿಸೋರ್ಸಸ್ ಕಮಿಟಿಯ ನಿರ್ಣಯ ರಾಕ್ಷಸ ನಿರ್ಣಯ, ಬಕಾಸೂರನ ನಿರ್ಣಯವಾಗುತ್ತದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

6-00 P.M.

†ಶ್ರೀಮತಿ ಚಂಪಾಬಾಯಿ ಭೋಗಲೆ (ಕಾಗ್‌ವಾಡ್).—ಮಾನ್ಯ ಅಧ್ಯಕ್ಷರೇ, 1969-70ನೇ ಇಸವಿಯ ಬಡ್ಜೆಟನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಈ ರಾಜ್ಯವನ್ನು ಕಟ್ಟುವಾಗ ಕೆಲವು ಲೋಪದೋಷಗಳಾಗುತ್ತವೆ. ಅದನ್ನು ಸರಿಪಡಿಸುವುದು ಸರ್ಕಾರದವರ ಮತ್ತು ಜನಗಳ ಕರ್ತವ್ಯ. ಸರ್ಕಾರದವರು ಪ್ರತಿಯೊಂದು ಕೆಲಸಗಳನ್ನು ಮನಸ್ಸು ಹಚ್ಚಿ ದುಡಿಯುವಾಗ ಕೆಲವೊಂದು ಲೋಪದೋಷಗಳು ಬರುತ್ತವೆ. ಅದು ಜನರ ಕಣ್ಣಿಗೆ ಬೀಳುತ್ತದೆ. ಅಂತಹ ಸಮಯದಲ್ಲಿ ಆ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವುದು ಸರ್ಕಾರದ ಮತ್ತು ಜನರ ಕರ್ತವ್ಯವಾಗಿರುತ್ತದೆ. ಈ ಲೋಪದೋಷಗಳ ಬಗೆಗೆ ಕೆಲವೊಂದು ವಿಚಾರಗಳನ್ನು ಹೇಳುತ್ತೇನೆ. ಬಡ್ಜೆಟ್ ಮಾಡಬೇಕಾದರೆ ಮಂತ್ರಿಗಳು ಪ್ರವಾಸ ಮಾಡುವುದನ್ನು ಕಡಿಮೆ ಮಾಡಬೇಕಾಗುತ್ತದೆ. ಒಂದೊಂದು ಸಾರಿಗೆ ಒಂದೊಂದು ಜಿಲ್ಲೆಗಳಿಗೆ 5—6 ಜನ ಮಂತ್ರಿಗಳು ಮತ್ತು ಅವರ ಸಿಬ್ಬಂದಿಗಳು ಪ್ರವಾಸ ಹೋಗುತ್ತಾರೆ. ಇದರಿಂದ ಸರ್ಕಾರಕ್ಕೆ ಬಹಳ ಖರ್ಚು ಬರುತ್ತದೆ. ಇನ್ನು ಮುಂದೆ ಮಂತ್ರಿಗಳು ಹೆಚ್ಚಿನ ಪ್ರವಾಸ ಮಾಡುವುದನ್ನು ನಿಲ್ಲಿಸಿ ಜನರ ಕಲ್ಯಾಣಕ್ಕಾಗಿ ದುಡಿಯಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಅದು ಸತ್ಯವಾದ ಮಾತು.

ಶ್ರೀಮತಿ ಚಂಪಾಬಾಯಿ ಭೋಗಲೆ.—ನಾನು ಮಾತನಾಡುವಾಗ ತಾವು ಸುಮ್ಮನೆ ಕುಳಿತುಕೊಳ್ಳಬೇಕು. ನಾವು ಇರುವ ತಪ್ಪನ್ನು ಒಪ್ಪಿಕೊಳ್ಳುತ್ತೇವೆ. ಮತ್ತು ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ರಾಜ್ಯದ ಪ್ರತಿಯೊಂದು ಭಾಗಗಳಲ್ಲಿಯೂ ಅಭಿವೃದ್ಧಿ ಕಾರ್ಯಗಳನ್ನು ಸರಕಾರದವರು ಮಾಡಿಸುವಾಗ ಎಲ್ಲಿ ಕೆಲಸವಾಗಿದೆ ಎಲ್ಲಿ ಸಾಕಷ್ಟು ಕೆಲಸಗಳು ಆಗಿಲ್ಲ ಎಂಬ ಬಗ್ಗೆ ಸರ್ವೆ ಮಾಡಿಸಬೇಕು. ಈಗ ಮಂತ್ರಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಾತ್ರ ಅಭಿವೃದ್ಧಿ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಇದು ಸರಿಯಲ್ಲ. ಸ್ವರಾಜ್ಯ ಬಂದು 20 ವರ್ಷಗಳಾದರೂ ಸಹ ನಮ್ಮ ಭಾಗದಲ್ಲಿ ಸಾಕಷ್ಟು ಕೆಲಸವಾಗಿದೆಯೋ ಇಲ್ಲವೋ ಎಂಬುದನ್ನು ಸರ್ಕಾರದವರು ಗಮನಿಸಿ ನಮ್ಮ ಭಾಗಕ್ಕೆ ಸ್ವಲ್ಪ ಹೆಚ್ಚು ಹಣವನ್ನು ಖರ್ಚು ಮಾಡಬೇಕು. ಇದು ಬಿಟ್ಟು ಮಂತ್ರಿಗಳು ತಮ್ಮ ಕ್ಷೇತ್ರ, ತಮ್ಮ ಬಳಗದವರ ಕ್ಷೇತ್ರ ಎಂದು ಕೆಲವು ಭಾಗಗಳಲ್ಲಿ ಮಾತ್ರ ಅಭಿವೃದ್ಧಿ ಕೆಲಸಗಳನ್ನು ಮಾಡಿಸಿಕೊಳ್ಳುವುದು ಸರಿಯಲ್ಲ. ಕಾಂಗ್ರೆಸ್ ಸರ್ಕಾರವೇ ತಪ್ಪು ಮಾಡುತ್ತಿರುವುದರಿಂದ ನಾನು ಹೇಳುತ್ತಿದ್ದೇನೆ. ಈ ರೀತಿ ಮಾಡುವುದರಿಂದ ಮುಂದೆ ಕಾಂಗ್ರೆಸ್ ಸಂಸ್ಥೆಗೆ ಕೆಟ್ಟ ಹೆಸರು ಬರುತ್ತದೆ. ಈ ರೀತಿ ಮಾಡುವುದನ್ನು ತಿದ್ದಿಕೊಳ್ಳುವುದಕ್ಕೆ ಇನ್ನು ಮುಂದೆಯಾದರೂ ಪ್ರಯತ್ನ ಮಾಡಬೇಕು. ಇವತ್ತಿನ ದಿವಸ ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡುತ್ತಿರುವ ಕೆಲವು ಅಧಿಕಾರಿಗಳು ಸಿ.ಐ.ಡಿ.ಗಳಾಗಿದ್ದಾರೆ. ಇವರು ಸರ್ಕಾರದ ರಹಸ್ಯದ ವಿಚಾರಗಳನ್ನು ಹೊರಗಿನವರಿಗೆ ತಿಳಿಸುತ್ತಿದ್ದಾರೆ. ಈ ಕಾರಣದಿಂದ ಕೆಲವೊಂದು ವಿಚಾರಗಳು ಇಷ್ಟೊಂದು ವಿಕೋಪಕ್ಕೆ ಹೋಗುವುದಕ್ಕೆ ಕಾರಣವಾಗಿದೆ. ಸರ್ಕಾರೀ ಕಛೇರಿಗಳ ಗೋಡೆಗಳು ಕಿವಿಗಳಾಗಿವೆ. ಅಧಿಕಾರಿಗಳು ತಮ್ಮ ಕರ್ತವ್ಯ ಮಾಡದೆ ಸಿ.ಐ.ಡಿ. ಕೆಲಸ ಮಾಡುತ್ತಿದ್ದಾರೆ. ಇಂತಹವರ ಬಗ್ಗೆ ಸರ್ಕಾರ ಎಚ್ಚರಿಕೆಯಿಂದ ಇರಬೇಕೆಂದು ಘಂಟಾ ಘೋಷವಾಗಿ ಹೇಳುತ್ತಿದ್ದೇನೆ. ನಾವೇನಾದರೂ

(ಶ್ರೀಮತಿ ಚಂಪಾಬಾಯಿ ಭೋಗಲೆ)

ಪ್ರಶ್ನೆಗಳನ್ನು ಕೇಳಿದರೆ ಈ ಅಧಿಕಾರಿಗಳು ಸರಿಯಾದ ಉತ್ತರ ಕಳಿಸದಿರುವುದರಿಂದ ಮತ್ತೆ ನಾವುಗಳು 5—6 ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಇನ್ನು ಮುಂದೆ ಸರಿಯಾದ ಉತ್ತರವನ್ನು ಅಧಿಕಾರಿಗಳು ಒದಗಿಸುವಂತೆ ಸರ್ಕಾರ ನೋಡಿಕೊಳ್ಳಬೇಕು. ನಾನು ಈ ಸಭೆಗೆ ಬಂದು 12 ವರ್ಷಗಳಾಯಿತು. ಸರ್ಕಾರಕ್ಕೆ ನನ್ನ ಕ್ಷೇತ್ರದಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಹೇಳುತ್ತಲೇ ಇದ್ದೇನೆ. ಆದರೆ ಯಾವ ಕೆಲಸಗಳನ್ನು ಮಾಡಿಲ್ಲ. ನನ್ನ ಕ್ಷೇತ್ರ ಈ ಸಂಸ್ಥಾನದ ಮೂಲೆಯಲ್ಲಿದೆ. ನನ್ನ ಕ್ಷೇತ್ರದಲ್ಲಿ 46 ಹಳ್ಳಿಗಳು ಇವೆ. ನಮ್ಮ ಕ್ಷೇತ್ರದ ಮಧ್ಯೆ ಕೃಷ್ಣಾನದಿ ಹರಿಯುತ್ತಿದೆ. ಮಾನ್ಯ ಮಂತ್ರಿಗಳಾದ ಶ್ರೀ ಪವಾರ್ ಅವರ ಕ್ಷೇತ್ರವೂ ಸಹ ಹಳ್ಳಿಗಳಿಂದ ಕೂಡಿದೆ. ನನ್ನ ಕ್ಷೇತ್ರದಲ್ಲಿ ಒಂದು ಒಳ್ಳೆಯ ರಸ್ತೆ ಇಲ್ಲ. ಹೋದವರ್ಷ ನಾನು ಆರ್ಥಿಕ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರನ್ನು ಮತ್ತು ಹಿಂದಿನ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾದ ವೀರೇಂದ್ರ ಪಾಟೀಲರನ್ನು ಒಂದು ರಸ್ತೆಯನ್ನು ನನ್ನ ಕ್ಷೇತ್ರದಲ್ಲಿ ಮಾಡಿಸಿಕೊಡ ಬೇಕೆಂದು ಕೇಳಿದಾಗ 3 ಲಕ್ಷ 50 ಸಾವಿರ ರೂಪಾಯಿಗಳ ವೆಚ್ಚದ ಸಿರಗುಪ್ಪ ಮತ್ತು ಗಂಗಾವತಿ ರಸ್ತೆಯನ್ನು ಮಾಡಿಸಿಕೊಡಲು ಒಪ್ಪಿದರು. ಮತ್ತು ಸರ್ಕಾರದ ಭಾಗವಾದ 2 ಲಕ್ಷ 20 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದರು. ಉಳಿದ ಹಣವಾದ ಒಂದು ಲಕ್ಷದ 30 ಸಾವಿರ ರೂಪಾಯಿಗಳನ್ನು ಅಲ್ಲಿಯ ಸಕ್ಕರೆ ಕಂಪನಿಯವರು ಕೊಡಬೇಕಾಗಿತ್ತು. ಅವರು ತಮ್ಮ ಭಾಗದ ಹಣವನ್ನು ಸರ್ಕಾರಕ್ಕೆ ತುಂಬಲಿಲ್ಲ, ರಸ್ತೆ ಆಗಲಿಲ್ಲ. ಆ ಸಕ್ಕರೆ ಕಂಪನಿಯವರು ಹಣ ಮಾಡಿ ಕೊಳ್ಳುತ್ತಿದ್ದಾರೆಯೇ ವಿನಃ ಈ ರಸ್ತೆಗೆ ಕೊಡಬೇಕಾದ 1 ಲಕ್ಷದ 30 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ತಯಾರಾಗಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಹೆಣ್ಣುಮಗಳ ಕ್ಷೇತ್ರವಾದ ಅಲ್ಲಿ ಜನರು ಓಡಾಡುವುದಕ್ಕೆ ಒಂದು ಒಳ್ಳೆಯ ರಸ್ತೆ ಇಲ್ಲವಾಗಿದೆ. ಅಲ್ಲಿ ಕೃಷ್ಣಾನದಿ ಹರಿಯುತ್ತಿರು ವುದರಿಂದ ಜನರು ಓಡಾಡುವುದಕ್ಕೆ ಒಳ್ಳೆಯ ರಸ್ತೆ ಇಲ್ಲದೆ ಬಹಳ ತೊಂದರೆಯಾಗಿದೆ. ನನ್ನಂತಹ ಹೆಣ್ಣುಮಕ್ಕಳಿಗೆ ಜೀವದಾನ ಮಾಡುವ ಶಕ್ತಿ ಇದೆಯೇ ಹೊರತು ಹಣ ಕೊಡುವ ಶಕ್ತಿ ಇಲ್ಲ. ನನ್ನ ಕ್ಷೇತ್ರದ 6 ಮೈಲಿ ಸುತ್ತಳತೆಯಲ್ಲಿ 17 ಹಳ್ಳಿಗಳಿವೆ. ಈ ಹಳ್ಳಿಯ ಜನರು ಓಡಾಡುವುದಕ್ಕೆ ಈ 6 ಮೈಲಿ ಸುತ್ತಳತೆಯಲ್ಲಿ ಒಂದು ಒಳ್ಳೆಯ ರಸ್ತೆ ಇಲ್ಲ. ಸಿರಗುಂದ್‌ಗೆ ಹೋಗಲು ಯಾವ ಕಡೆಯಿಂದಲೂ ಒಂದು ಅಪ್ರೋಚ್ ರೋಡ್ ಇಲ್ಲ. ಇದೇ ಕಾರಣಕ್ಕಾಗಿ ನನ್ನ ಕ್ಷೇತ್ರದ ಕೆಲವು ಹಳ್ಳಿಯ ಜನರು ಚುನಾವಣೆಯಲ್ಲಿ ಓಟು ಕೊಡದೆ ಬರೀ ಪೆಟ್ಟಿಗೆಯನ್ನು ಕಳಿಸಿದ್ದಾರೆ. ಕಾಂಗ್ರೆಸ್ ಪಕ್ಷ ನನಗೆ ಓಟು ಕೊಡಲು ಅವರು ತಯಾರಿಲ್ಲದ ಮೇಲೆ ನಾನು ಅವರ ಪ್ರತಿನಿಧಿಯಾಗಿದ್ದು ಏನು ಪ್ರಯೋಜನ. ಅಲ್ಲಿಯ ಜನರು ನನ್ನ ವಿಚಾರದಲ್ಲಿ ತಪ್ಪು ತಿಳಿದಿದ್ದಾರೆ. ಕಾರಣ ಸರ್ಕಾರದವರು ಅಲ್ಲಿ ಯಾವ ಕೆಲಸಗಳನ್ನು ಸಹ ಮಾಡಿಸದಿರುವುದು. ಈ ವಿಚಾರದಲ್ಲಿ ಮುಖ್ಯಮಂತ್ರಿಗಳಿಗೆ ಒಂದು ಕಾಗದವನ್ನು ಸಹ ಬರೆದಿದ್ದೇನೆ. ಅವರು ಸೂಕ್ತ ಕ್ರಮ ತೆಗೆದುಕೊಂಡು ನನ್ನ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿಸುತ್ತಾರೆಂದು ನಂಬಿದ್ದೇನೆ. ನಾನೇನು ಇಲ್ಲಿಗೆ ಅಧಿಕಾರಿಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾ ಮಾಡಿಸಿ ಎಂದು ಹೇಳುವುದಕ್ಕೆ ಬಂದಿಲ್ಲ. ನಾನು ಸರ್ಕಾರಕ್ಕೆ ಬೆಂಬಲ ಕೊಡುವುದಕ್ಕೆ ಬಂದಿದ್ದೇನೆ. ಈ ಪರಿಸ್ಥಿತಿಯೊಳಗೆ ಇಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಟೂರುಗಳನ್ನು ಕಡಿಮೆ ಮಾಡಿ ಇದಕ್ಕೆ ಆಗುವ ಖರ್ಚನ್ನು ನಮ್ಮ ಕಡೆ ಇರುವ ಮಹತ್ವವಾದ ಕೆಲಸಗಳಿಗಾದರೂ ವೆಚ್ಚ ಮಾಡಿದರೆ ಅದರಿಂದ ಜನಕ್ಕೆ ಅನುಕೂಲವಾಗುತ್ತದೆ. ನಮ್ಮ ಕಡೆ ಸರಿಯಾದ ರಸ್ತೆಗಳಿಲ್ಲ. ಬರಗಾಲಕ್ಕೆ ಸಿಕ್ಕಿದ ಭಾಗಗಳೇ ಹೆಚ್ಚಾಗಿವೆ. ಅಲ್ಲಲ್ಲಿ ಒಡ್ಡುಗಳನ್ನು ಹಾಕಿದರೆ ರಸ್ತೆಗಳು ಸೇರುವಂತೆ ಆಗಲು ಅನುಕೂಲವಾಗುತ್ತದೆ. ನಮ್ಮ ಕಡೆ ಸರ್ವೆ ಮಾಡಿಸಿದರೆ ಏನೇನು ಕೆಲಸ ಮಾಡಬೇಕು ಎನ್ನುವುದು ಗೊತ್ತಾಗುತ್ತದೆ ಎಂದು ಸುಮಾರು ಎರಡು ವರ್ಷದಿಂದಲೂ ಹೇಳುತ್ತಿದ್ದರೂ ಸರಕಾರ ಇದರ ಕಡೆಗೇ ಗಮನ ಕೊಡುತ್ತಿಲ್ಲ. ಕೆಲವು ಕಡೆ ಎಸ್ಟಿಮೇಟು ಪ್ಲಾನುಗಳು ಆಗಿದ್ದರೂ ಇನ್ನೂ ಕೆಲಸಗಳನ್ನು ತೆಗೆದುಕೊಂಡು ಪೂರ್ತಿ ಮಾಡಲಿಲ್ಲ. ಇನ್ನು ನಮ್ಮಲ್ಲಿ ಸರಿಯಾದ ದವಾಖಾನೆಗಳೇ ಇಲ್ಲ. ದವಾಖಾನೆ ಬೇಕಾದರೆ ಜನ ಆರು ಮೈಲಿಗಳ ದೂರ ಹೋಗಬೇಕಾಗಿದೆ. ಇದರ ಕಡೆಗೆ ಸರ್ಕಾರ ಲಕ್ಷ ಕೊಟ್ಟು ಹೆಚ್ಚು ದವಾಖಾನ್‌ಗಳು ಆಗುವಂತೆ ಏರ್ಪಾಡು ಮಾಡಬೇಕು. ಹಿಂದೆ ಇಲ್ಲಿ ಚುನಾವಣೆ ನಡೆದಾಗ ವೋಟು ಕೊಡಬೇಕೆಂದು ನಮ್ಮ ಜನ ಹೋಗಲು ಸರಿಯಾದ ರಸ್ತೆಗಳೇ ಇರಲಿಲ್ಲ. ಹೇಗೋ ಇಲ್ಲಿ ಕಾಂಗ್ರೆಸ್ಸು ಸದಸ್ಯಳಾಗಿ ನನ್ನ ಕ್ಷೇತ್ರದಿಂದ ಬಂದಿದ್ದರೂ ನಮ್ಮ ಕಡೆಯಲ್ಲಿರುವ ಜನರು ನಾನು ಸರಕಾರದಲ್ಲಿ ಹೋಗಿ ಏನೂ ಹೇಳುತ್ತಿಲ್ಲ. ಇದರಿಂದ ಸರಕಾರದವರೂ ಯಾವ ಕೆಲಸಗಳನ್ನೂ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ನಮ್ಮ ಏರಿಯಾ ತುಂಬಾ ಹಿಂದುಳಿದಿದೆ ಇದಕ್ಕಾಗಿ ಇದನ್ನು ಒಂದು ಸ್ಪೆಷಲ್ ಏರಿಯಾ ಎಂದು ಗಮನಕ್ಕೆ ತೆಗೆದುಕೊಂಡು ಇಲ್ಲಿ ಹೆಚ್ಚು

ಕೆಲಸಗಳಾಗುವಂತೆ ಸರಕಾರ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮ ಕಡೆ ಮೊದಲು ರೋಡುಗಳನ್ನು ಮಾಡಿಕೊಡಿ. ಪಂಪುಸೆಟ್ಟುಗಳನ್ನು ಕೊಡಿ ಹಾಗೂ ಇನ್ನಿತರ ಸೌಕರ್ಯಗಳನ್ನೂ ನಮ್ಮ ಜನಕ್ಕೆ ಮಾಡಿಕೊಡಿ. ರೈತರಿಗೆ ಆದಷ್ಟು ಕೆಲಸಗಳು ಸಿಗುವಂತೆ ಏರ್ಪಾಡು ಮಾಡಿ. ಇದಕ್ಕಾಗಿ ನಮ್ಮ ಭಾಗಕ್ಕೆ ಹೆಚ್ಚು ದುಡ್ಡು ಕೊಟ್ಟು ಇವೆಲ್ಲಾ ಕೆಲಸಗಳು ಬೇಗನೆ ಆಗುವಂತೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈಗ ಗಾಂಧಿ ಶತಾಬ್ದಿ ಮಾಡಬೇಕೆಂದು ಬಹಳ ದೊಡ್ಡದಾಗಿ ಸರಕಾರ ಅಲ್ಲಲ್ಲಿ ಬೇಕಾದಷ್ಟು ಕೆಲಸಗಳನ್ನು ಮಾಡಬೇಕೆಂದು ಇದ್ದಾರೆ. ಮಹಾತ್ಮ ಗಾಂಧಿಯವರು ಸತ್ತು ಸುಮಾರು ಇಪ್ಪತ್ತು ವರ್ಷಗಳಾದವು. ಅವರು ಹೇಳುತ್ತಿದ್ದ ಅಸ್ಪೃಶ್ಯತಾ ನಿವಾರಣೆ ಕೆಲಸ ಇನ್ನೂ ಏನೂ ಆಗಲಿಲ್ಲ. ಬರೀ ಬಾಯಲ್ಲಿ ಅಸ್ಪೃಶ್ಯತಾ ನಿವಾರಣೆಯಾಗುತ್ತಿದೆ ಎಂದು ಮಾತ್ರ ಹೇಳುತ್ತಿದ್ದಾರೆ. ಈ ದೇಶದ ಜನತೆಯ ಕಲ್ಯಾಣ ಮಾಡಬೇಕಾದರೆ ಮಹಾತ್ಮ ಗಾಂಧಿಯವರು ಹೇಳುತ್ತಿದ್ದ ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮಗಳು ಸಫಲಗೊಳ್ಳುವಂತೆ ಮಾಡಿದರೆ ಆಗ ನಮ್ಮ ಸರಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇದರ ಕಡೆಗೆ ಒಂದು ಸರಿಯಾದ ಸ್ಕೀಂ ಹಾಕಿಕೊಂಡು ಸೂಕ್ತವಾದ ಕೆಲಸಗಳನ್ನು ಮಾಡಲು ಏರ್ಪಾಡು ಮಾಡುವುದು ಆವಶ್ಯಕ. ವರ್ಷೇ ವರ್ಷೇ ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಹೆಚ್ಚಾಗಿ ಎನ್.ಇ.ಎಸ್. ಬಾಬಿಗೆ ಖರ್ಚಾಗುತ್ತಿದೆ. ಆದರೆ ಯಾವ ರೀತಿಯಾದ ಹೆಚ್ಚು ಕೆಲಸಗಳೂ ಇಲ್ಲಿ ಆಗುತ್ತಿಲ್ಲ. ಆದುದರಿಂದ ಗಾಂಧಿ ಶತಾಬ್ದಿ ಮಾಡಬೇಕು ಎಂದು ಇರುವ ಈ ಕಾಲದಲ್ಲಿ ಇದಕ್ಕಾಗಿ ಪ್ರತ್ಯೇಕವಾದ ಒಂದು ಸ್ಪೆಷಲ್ ಸ್ಕೀಂ ಹಾಕಿಕೊಂಡು ಸುಧಾರಣೆ ಮಾಡಬೇಕು ಮತ್ತು ದೇಶದಲ್ಲಿ ಅಸ್ಪೃಶ್ಯತಾ ನಿವಾರಣೆ ಮಾಡಬೇಕು. ನಾನಾಗಲೇ ಹೇಳಿದ ಕೆಲವು ಸಲಹೆಗಳನ್ನು ಸರಕಾರದವರು ಕಾರ್ಯಗತಮಾಡುತ್ತಾರೆ ಎಂದು ಆಶಿಸಿ ನನಗೆ ಇಷ್ಟು ಮಾತಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಬೋಳಾ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಆರ್ಥಿಕ ಮಂತ್ರಿಗಳು 1969-70 ನೇ ಸಾಲಿನ ಆಯವ್ಯಯಪತ್ರವನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಸಾಮಾನ್ಯವಾಗಿ ಆರ್ಥಿಕ ಮಂತ್ರಿಗಳು ನಮ್ಮ ದೇಶದ ಪರಿಸ್ಥಿತಿಗಳನ್ನು ಸರಿಯಾಗಿ ಅನಲೈಸು ಮಾಡಿಕೊಂಡು ಅವರ ಅಭಿಪ್ರಾಯಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುತ್ತಾ ಕೆಲವಾರು ವಿಚಾರಗಳನ್ನು ಇಲ್ಲಿ ಹೇಳಬಯಸುತ್ತೇನೆ. ಕೈಗಾರಿಕೆ ಬಗ್ಗೆ ನಮ್ಮ ಆರ್ಥಿಕ ಧೋರಣೆ ಯಾವ ರೀತಿ ಇದೆ ಎನ್ನುವುದನ್ನು ಈ ಬಜೆಟ್ಟಿನಲ್ಲಿ ಏನೋ ಹೇಳಿರುವಂತೆ ಕಾಣುವುದಿಲ್ಲ. ಇದಕ್ಕೆ ಅವರ ಭಾಷಣದಲ್ಲಿ ಇವನ್ನೆಲ್ಲಾ ಎನ್‌ಕ್ವೈರಿ ಮಾಡಲು ಶ್ರೀ ಭೂತಲಿಂಗಂ ಎನ್ನುವವರ ನೇತೃತ್ವದಲ್ಲಿ ಒಂದು ಕಮಿಷನ್ ಮಾಡಿದ್ದೇವೆ, ಅವರು ಎಲ್ಲಾ ವಿಚಾರಗಳನ್ನು ಪರಿಶೀಲಿಸಿ ಮುಂದೆ ತಿಳಿಸುತ್ತಾರೆ ಎಂದು ಹೇಳಿದ್ದಾರೆ. ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅವರ ಜವಾಬುದಾರಿಯನ್ನು ಸರಿಯಾಗಿ ನಿರ್ವಹಿಸಲಿಲ್ಲ ಎಂದು ನಾನು ಹೇಳಬಯಸುತ್ತೇನೆ. ಮುಖ್ಯವಾಗಿ ಸರಕಾರದವರು ಮಾಡುತ್ತಿರುವ ಸಾಲಗಳು ನಮ್ಮ ಜನತೆಯನ್ನು ಹೆಚ್ಚು ಬಾಧಿಸುತ್ತಿದೆ. ಈಗಿನ ಕಾಲದಲ್ಲಿ ಇಷ್ಟು ಹೆಚ್ಚು ಬಡ್ಡಿ ದರದಲ್ಲಿ ಸಾಲವನ್ನು ಮರುಪಾವತಿ ಮಾಡುವುದಕ್ಕಾಗುತ್ತದೆಯೇ? ಸಾಲಗಳೇನೇ ಇರಲಿ ಈಗಿನ ಕಾಲದಲ್ಲಿ ಬಡ್ಡಿ ಕೊಡುವುದೇ ಕಷ್ಟವಾಗುತ್ತಿದೆ. ಇದರ ಮೇಲೆ ಅಸಲನ್ನು ಕೊಡಬೇಕಾದರೆ ಅದಕ್ಕೆ ಎಷ್ಟೋ ಸಮಯ ಬೇಕಾಗುತ್ತದೆ. ಇದರ ಬಗ್ಗೆ ಯಾವ ಧೋರಣೆ ಇದೆ ಎನ್ನುವುದರ ವಿಚಾರದಲ್ಲಿ ಯಾವುದನ್ನು ಇಲ್ಲಿ ಹೇಳಲಿಲ್ಲ ಮತ್ತು ನಮ್ಮ ಸರಕಾರ ಸಾಲ ಮಾಡುತ್ತಿರುವುದು ಬಹಳ ಹೆಚ್ಚಾಗುತ್ತಿದೆ. ಇದನ್ನು ತೀರಿಸುವುದರ ಕಡೆಗೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಸಾಲದ ರೂಪದಲ್ಲಿ ತೆಗೆದುಕೊಂಡ ಹಣವನ್ನು ಉತ್ತಮವಾದ ವ್ಯವಹಾರಗಳಿಗಾಗಿ ಖರ್ಚು ಮಾಡಬೇಕು. ಈಗ ನಾವು ಸರಿಯಾಗಿ ಯೋಜನೆಗಳಿಗೆ ಖರ್ಚು ಮಾಡುತ್ತಿಲ್ಲ ಎಂದು ಪಶ್ಚಾತ್ತಾಪ ಪಡುತ್ತಿದ್ದರೆ ನಮ್ಮ ಜವಾಬುದಾರಿ ಅಲ್ಲಿಗೇ ನಿಲ್ಲುವುದಿಲ್ಲ. ಮುಖ್ಯವಾಗಿ ಸರಕಾರದವರು ಸರಕಾರಿ ಉದ್ಯಮಗಳಲ್ಲಿ ಹೇರಳವಾದ ಸಂಪತ್ತನ್ನು ಬಂಡವಾಳವಾಗಿ ಹಾಕಿದ್ದಾರೆ. ಇಂತಹ ಉದ್ಯಮಗಳನ್ನು ಫಲದಾಯಕವಾಗಿ ನಡೆಸುವುದಕ್ಕೆ ಸಾಧ್ಯವೇ ಎಂದು ನಮ್ಮ ಅನುಭವದಲ್ಲಿ ನೋಡಿದರೆ ಇದು ಸರಿಯಾಗಿ ನಡೆಯುತ್ತಿಲ್ಲ ಎನ್ನುವುದು ಗೊತ್ತಾಗುತ್ತದೆ. ಇದರ ಬಗ್ಗೆ ವಿಚಾರ ಮಾಡುವುದು ಅಗತ್ಯವಾಗಿದೆ. ಸರಕಾರದ ಉದ್ಯಮಗಳಲ್ಲಿ ತಯಾರಾಗುವ ಪದಾರ್ಥಗಳಿಗೆ ಮಾರ್ಕೆಟ್ಟಿನಲ್ಲಿ ಇನ್ನೂ ಕಡಿಮೆ ಬೆಲೆ ಇರುವುದರಿಂದ ಇಂತಹ ಕೈಗಾರಿಕೆಗಳಿಂದ ಉತ್ಪತ್ತಿಯಾದ ಪದಾರ್ಥಗಳನ್ನು ಸರಕಾರಕ್ಕೆ ಲಾಭ ಬರುವಂತೆ ಹೇಗೆ ಮಾರಿ ಇದನ್ನು ಮುಂದುವರಿಸಬೇಕು ಎನ್ನುವುದು ಇದರಲ್ಲಿ ಒಂದು ಮುಖ್ಯ ಪ್ರಶ್ನೆಯಾಗಿದೆ.

(ಶ್ರೀ ಬೋಳಾ ರಘುರಾಮ ಶೆಟ್ಟಿ)

ಈ ರೀತಿ ನಮ್ಮ ಸಾರ್ವಜನಿಕರ ಹಣ ಹಾಳಾಗುತ್ತಿದೆ. ಅದನ್ನು ಅವರೂ ಕೂಡ ಸರಿಯಾಗಿ ಅರ್ಥ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ನಮ್ಮ ದೇಶದ ಹಿತದೃಷ್ಟಿಯಿಂದ ಇಂತಹ ಸರಕಾರಿ ಉದ್ದಿಮೆಗಳಿಗೆ ಖಾಸಗಿ ಬೇಡಿಕೆ ಬಂದರೆ, ಯೋಗ್ಯರಿಗೆ ಕೊಟ್ಟರೆ ಒಳ್ಳೆಯದು ಎಂದು ಹೇಳಿದ್ದಾರೆ. ಅದಲ್ಲದೆ ಈ ಉದ್ದಿಮೆಗಳ ಲೋಪದೋಷಗಳನ್ನು ಸರಿಪಡಿಸಲು ಮತ್ತು ದಕ್ಷತೆಯನ್ನು ಹೆಚ್ಚುಮಾಡಲು ವಿಧಾನಮಂಡಲದ ಪ್ರತ್ಯೇಕ ಸಮಿತಿಯೊಂದನ್ನು ಮಾಡಬೇಕೆಂದು ಹೇಳಿದ್ದಾರೆ. ಅಂಥ ಒಂದು ಸಮಿತಿಗೆ ಸರಿಯಾದವರನ್ನು ನೇಮಿಸಬೇಕು. ಈ ವಿಧಾನ ಮಂಡಲದ ಒಂದು ಸಮಿತಿ ಮಾಡಿದರೂ ಕೂಡ ಅದರಿಂದ ಸರಿಯಾದ ಒಂದು ನಿರ್ಣಯ ಮಾಡುವುದಕ್ಕೆ ಬರುವುದಿಲ್ಲ. ಉದ್ದಿಮೆಗಳನ್ನು ನಡೆಸುವಂಥಾವರು, ಎಕನಾಮಿಸ್ಟ್ಸ್ ಅದಂಥವರು, ಜವಾಬ್ದಾರಿ ಉಳ್ಳಂಥವರ ಒಂದು ಸಮಿತಿ ಮಾಡಿದರೆ ಸರಿಯಾದ ನಿರ್ಣಯ ಬರಬಹುದು ಎಂದು ಹೇಳುತ್ತೇನೆ.

ಇನ್ನು ಶಿಕ್ಷಣ ಕ್ಷೇತ್ರದಲ್ಲಿ 65–66 ರಲ್ಲಿ 24 ಕೋಟಿ ಇದ್ದುದು 1969–70 ರಲ್ಲಿ 46 ಕೋಟಿ ರೂಪಾಯಿ ಖರ್ಚು ಮಾಡಲು ಈ ಬಡ್ಜೆಟ್ಟಿನಲ್ಲಿ ತೋರಿಸಿದ್ದಾರೆ. ಆದರೆ ಅದರಲ್ಲಿ ಮುಖ್ಯವಾಗಿ ವಿಮರ್ಶೆ ಮಾಡುವ ವಿಷಯ ನಾವು ಶಿಕ್ಷಣದಲ್ಲಿ ಏನು ಖರ್ಚು ಮಾಡುತ್ತೇವೋ ಆ ಒಂದು ಮಾಲ್ಯ ಅಷ್ಟು ನ್ಯಾಯವಾದ ರೀತಿಯಲ್ಲಿ ಖರ್ಚು ಮಾಡುತ್ತೇವೆಯೇ ಎಂದು ಶಿಕ್ಷಣ ಇಲಾಖೆಯಲ್ಲಿ ಸಲಹೆಗಾರರು ಬಂದಾಗಲೆಲ್ಲಾ ತಮಗೆ ಅನುಕೂಲವಾದ ಹಾಗೆ ಸಲಹೆಗಳನ್ನು ಬದಲಾಯಿಸುತ್ತಾರೆ, ಎಕ್ಸ್‌ಪೆರಿಮೆಂಟ್ ಮಾಡುತ್ತಾರೆ ಎಂದು ಹೇಳುತ್ತಾರೆ. ಅವರು ತಮ್ಮ ತಪ್ಪನ್ನು ಜಾರಿಸಿಕೊಳ್ಳುವಂಥ ನೀತಿಯನ್ನು ಈ ವಿದ್ಯಾಕ್ಷೇತ್ರದಲ್ಲಿ ಮಾಡಬಾರದು. ಈ ರೀತಿ ಮಾಡಿದರೆ ಅನ್ಯಾಯವಾಗುತ್ತದೆ. ಇದರ ಗುಣ ಯಾವರೀತಿಯಲ್ಲಿ ಉಂಟು ಎನ್ನುವುದನ್ನು ನೋಡಿದರೆ ಪರೀಕ್ಷೆಯಲ್ಲಿ ಬರತಕ್ಕಂಥ ಒಂದು ರಿಸಲ್ಟ್ ನೋಡಿದರೆ ಗೊತ್ತಾಗುತ್ತದೆ. ಈವೊತ್ತಿನ ದಿವಸ ಅದರ ಬಗ್ಗೆ ನಾನು ಹೇಳುವುದಾದರೆ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಈವೊತ್ತಿನವರೆಗೂ ಏಕರೂಪತೆ ಬರಲಿಲ್ಲ. ಅದನ್ನು ಅಗತ್ಯವಾಗಿ ಮಾಡಬೇಕು.

ಎರಡನೆಯದಾಗಿ ತಾಲ್ಲೂಕು ಮಟ್ಟದಲ್ಲಿರುವ ಶಾಲೆಗಳನ್ನು ತಾಲ್ಲೂಕು ಬೋರ್ಡ್ ಮ್ಯಾನೇಜ್‌ಮೆಂಟಿಗೆ ಬಿಟ್ಟಿದ್ದಾರೆ. ಅದು ಸರಿಯಲ್ಲ. ಅಲ್ಲಿ ಅನೇಕ ಉಪಾಧ್ಯಾಯರುಗಳು ಅಲ್ಲಿ ಯಾವ ರೀತಿಯ ಪ್ರಮೋಷನ್ ಆಗಲಿ, ಟ್ರಾನ್ಸ್‌ಫರ್ ಆಗಲಿ ಇಲ್ಲ ಎಂದು ಹೇಳುತ್ತಾರೆ. ಬೇರೆ ಬೇರೆ ತಾಲ್ಲೂಕು ಮಟ್ಟದಲ್ಲಿ ಅವರ ಅನುಭವ ಯೋಗ್ಯತೆ ನೋಡಿಕೊಂಡು ಕೆಲಸ ನಡೆಯುತ್ತದೆ. ಅಂಥಾದ್ದನ್ನೆಲ್ಲಾ ನೋಡಿ ಸರಿಪಡಿಸಬೇಕು. ಅದಕ್ಕೋಸ್ಕರ ಜಿಲ್ಲಾ ಮಟ್ಟದಲ್ಲಿ ಒಂದು ಬೋರ್ಡ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಇಷ್ಟರವರೆಗೂ ಮಾಡಲಿಲ್ಲ. ಮೊದಲೇ ಮಾಡಬೇಕಾಗಿತ್ತು. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಏಕರೂಪತೆ ತರಬೇಕು ಮತ್ತು ಜಿಲ್ಲಾ ಮಟ್ಟದಲ್ಲಿರುವ ಆಡಳಿತವನ್ನು ಮತ್ತು ಬೇರೆ ಬೇರೆ ವಿಷಯಗಳನ್ನು ನೋಡಿಕೊಳ್ಳಲಿಕ್ಕೂ ಜಿಲ್ಲಾ ಬೋರ್ಡುಗಳನ್ನು ರಚಿಸಬೇಕು.

ಇನ್ನು ಶಿಸ್ತಿನ ವಿಷಯ ಹೇಳುವುದಾದರೆ ಈ ಶಿಸ್ತು ಮಕ್ಕಳಿಗೆ ಅಲ್ಲದೆ ಉಪಾಧ್ಯಾಯರುಗಳಿಗೂ ಇರಬೇಕು ಎಂದು ಹೇಳುತ್ತೇನೆ. ಮೊನ್ನೆ ಒಬ್ಬ ಉಪಾಧ್ಯಾಯರು ಬೆಂಗಳೂರಿಗೆ ಬಂದಿದ್ದರು. ಅವರ ಊರಿನಲ್ಲಿ ಹೈಸ್ಕೂಲ್ ಮಾಸ್ತರುಗಳು ಬೆಳಗ್ಗೆ 4 ಗಂಟೆ, ಸಾಯಂಕಾಲ 4 ಗಂಟೆ ಟ್ಯೂಷನ್ ಕೊಟ್ಟು ಅವರು ಕ್ಲಾಸ್‌ನಲ್ಲಿ ಆರಾಮ ಪಡೆಯುತ್ತಾರೆ ಇದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೇವೆ ಎಂದು ಹೇಳುತ್ತಾರೆ. ಈ ವಿಷಯ ಅವರ ಊರಿನಲ್ಲಿ ಮಾತ್ರವಲ್ಲ ಇಡೀ ಮೈಸೂರು ರಾಜ್ಯದಲ್ಲಿ ಇದೆ. ಮಕ್ಕಳುಗಳು ಪರೀಕ್ಷೆಯಲ್ಲಿ ತೇರ್ಗಡೆ ಆಗುವುದನ್ನು ನೋಡಿದರೆ ಗೊತ್ತಾಗುತ್ತದೆ. ಈ ವಿಷಯವನ್ನು ಸರ್ಕಾರ ಗಮನದಲ್ಲಿಡಬೇಕು. ಮತ್ತು ಈ ರೀತಿ ಮಾಡಿದಂಥವರ ಮೇಲೆ ಸರ್ಕಾರ ಶೀಘ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಇನ್ನು ಮಾನ್ಯ ಮಂತ್ರಿಗಳು ನಮ್ಮ ರಾಜ್ಯದಲ್ಲಿರತಕ್ಕಂಥ ನಿರುದ್ಯೋಗಿಗಳ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಪ್ರಸ್ತಾಪ ಮಾಡಲಿಲ್ಲ. ಅಷ್ಟು ಮಟ್ಟಿಗೆ ಇದರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕು. ವಿದ್ಯಾವಂತರನ್ನು ನಿರುದ್ಯೋಗಿಯನ್ನಾಗಿ ಮಾಡಿದರೆ ಬಹುಶಃ ನಮ್ಮ ಪ್ರಜಾಪ್ರಭುತ್ವಕ್ಕೆ ಖಂಡನೀಯವಾದುದು ಎಂದು ನಾನು ಭಾವಿಸುತ್ತೇನೆ. ಕಾಲೇಜಿನಲ್ಲೂ ಈ ತರಹ ಕಂಡೀಷನ್ ಇರುವುದರಿಂದ ಅದರ ನಿವಾರಣೆ ಬಗ್ಗೆಯೂ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು 1966–67 ನೇ ಇಸವಿಯಲ್ಲಿ ನಮ್ಮ ಕೃಷಿಕರ ಉತ್ಪತ್ತಿ ಕೃಷಿಕರ ಸಮಸ್ಯೆ ಬಹಳ ತೀವ್ರಮಟ್ಟದಲ್ಲಿದೆಯೆಂದು ಹೇಳಿದ್ದಾರೆ. ಮತ್ತು ಕೃಷಿಕರಿಗೆ ಬಹಳ ನೆರವನ್ನು

ನೀಡಿದ್ದೇವೆ, ದೊಡ್ಡ ದೊಡ್ಡ ನೀರಾವರಿ ಯೋಜನೆಯನ್ನು ಮಾಡಿದ್ದೇವೆ. ಇನ್ನೂ ಅನೇಕ ಸುಧಾರಣೆಗಳನ್ನು ಮಾಡಿದ್ದೇವೆ ಮತ್ತು ಕೃಷಿಕರಲ್ಲಿ ಒಂದು ವರ್ಗ ಬಹಳ ಸಂಪತ್ತುಳ್ಳವರಾಗಿದ್ದಾರೆ ಎಂದು ಹೇಳಿದ್ದಾರೆ. 1967ನೇ ಇಸವಿಯಲ್ಲಿ ನಮ್ಮ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಮಳೆ ಅಭಾವ ಪರಿಸ್ಥಿತಿ ಇದ್ದಾಗ ನೀರು ಇಲ್ಲದೇ ಫ್ಯಾಮಿನ್ ರಿಲೀಫ್‌ನಲ್ಲಿ ಕೆಲಸ ಮಾಡಿಸಿದರೂ ಕೂಡ ಈ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಸಾಧ್ಯವಾಗಲಿಲ್ಲ. ಕೇಂದ್ರ ಸರ್ಕಾರದಿಂದ 10 ಕೋಟಿ ರೂಪಾಯಿ ನೆರವನ್ನು ಪಡೆದಿದ್ದರೂ ಸಹ ಜನರನ್ನು ಸಂರಕ್ಷಣೆ ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ಮತ್ತು ಉತ್ಪತ್ತಿಯ ಕಾರ್ಯಕ್ರಮವನ್ನು ಸರಿಯಾಗಿ ಮಾಡಲಿಲ್ಲ. ಈ ದಿವಸ ಈ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ತಿರುಪತಿಯಲ್ಲಿ ಕ್ಷೌರ ಮಾಡಿದಹಾಗೆ ಆಯಿತು ಎನ್ನುವ ಮಾತನ್ನು ಹೇಳಿದ್ದಾರೆ. ನೀರಾವರಿ ಯೋಜನೆಗೆ ಹಣ ಹಾಕಿದ್ದರೂ ಕೂಡ ಸಂಪೂರ್ಣವಾಗಿ ಅದರ ಕಾರ್ಯವನ್ನು ಮುಗಿಸಲಿಲ್ಲ. ಮತ್ತು ಈಗ ಇರುವ ಪರಿಸ್ಥಿತಿ ನೋಡಿದರೆ ಅದನ್ನು ಮುಗಿಸುವಂತೆಯೂ ಇಲ್ಲ. ಅದೂ ಅಲ್ಲದೆ ಕೃಷಿಕರಿಗೆ ಬೇಕಾದ ಪಂಪುಸೆಟ್ಟುಗಳಾಗಲಿ ವಿದ್ಯುಚ್ಛಕ್ತಿ ಪೂರೈಕೆಯಾಗಲಿ ಅಥವಾ ಗೊಬ್ಬರದ ಪೂರೈಕೆಯಾಗಲಿ ಅಥವಾ ಟ್ರಾಕ್ಟರ್ ಪೂರೈಕೆಯಾಗಲಿ ಯಾವುದನ್ನೂ ಕೂಡ ಸರ್ಕಾರ ಪೂರೈಸಿಲ್ಲ. ಬೇಡಿಕೆಗಳು ಸಾವಿರಾರು ಇದ್ದರೂ $\frac{1}{4}$ ಅಂಶದಷ್ಟು ಒದಗಿಸುವ ಯೋಗ್ಯತೆಯೂ ಇಲ್ಲ. ಸರ್ಕಾರದಲ್ಲಿ ಹೀಗಿರುವಾಗ ನಮ್ಮ ರೈತರಲ್ಲಿ ಒಂದು ವರ್ಗ ಬಹಳ ಶ್ರೀಮಂತರಾಗಿದ್ದಾರೆ ಆದರೆ ಅವರು ಟ್ಯಾಕ್ಸ್ ಕೊಡುವುದನ್ನು ತಪ್ಪಿಸಿಕೊಂಡಿದ್ದಾರೆಯೇ ? ಅವರ ಮೇಲೆ ಟ್ಯಾಕ್ಸ್ ಹಾಕುವುದನ್ನು ತಪ್ಪಿಸುವ ಹಾಗೆ ಇದ್ದರೆ ಅವರು ಕ್ರಮ ತೆಗೆದುಕೊಳ್ಳಬಹುದು. ಅವರು ಒಂದು ವರ್ಗ ಶ್ರೀಮಂತರಾಗಿದ್ದಾರೆ ಎಂದು ಹೇಳಿದ್ದಾರೆಯೇ ಹೊರತು ಅದು ಯಾವ ವರ್ಗ ಎಂದು ಹೇಳಲಿಲ್ಲ. ಹೇಳಲೂ ತಯಾರಾಗಿಲ್ಲ. ಯಾವ ವರ್ಗ ಎಂದು ಹೇಳಿದರೆ ನಾವು ಸುಲಭವಾಗಿ ತಿಳಿದುಕೊಳ್ಳಬಹುದಾಗಿತ್ತು.. ಆದರೆ ನಾವು ಒಂದು ವಿಚಾರ ಅರಿತುಕೊಳ್ಳಬೇಕು. ಅದೇನೆಂದರೆ ರೈತರ ಸ್ಥಿತಿ ಸುಧಾರಿಸಿದರೆ, ಅದರಿಂದ ನಿಜವಾಗಿಯೂ ನಮ್ಮ ರಾಜ್ಯಕ್ಕೂ ಒಳ್ಳೆಯದು, ದೇಶಕ್ಕೂ ಒಳ್ಳೆಯದು. ನಮ್ಮ ದೇಶದಲ್ಲಿ ಒಟ್ಟು ಔದ್ಯೋಗೀಕರಣದ ಪ್ರತಿಫಲವನ್ನು ಪಟ್ಟಣದವರೇ ಪಡೆಯುತ್ತಿದ್ದಾರೆ. ಶೇಕಡ 80 ಪರ್ಸೆಂಟು ಜನ ಹಳ್ಳಿಯಲ್ಲಿ ಇರುವುದರಿಂದ ಅವರಿಗೆ ಇದರ ಲಾಭ ಪಡೆಯುವುದಕ್ಕೆ ಆಗಲಿಲ್ಲ. ಒಂದೆರಡು ವರ್ಷಗಳಿಂದ ಗ್ರೀನ್ ರೆವಲ್ಯೂಷನ್‌ನಿಂದ ಅವರು ಲಾಭ ಪಡೆಯುವುದಕ್ಕೆ ಅವಕಾಶ ಉಂಟು. 20 ವರ್ಷದಿಂದಲೂ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ರೈತರ ಮೇಲೆ ಒಂದು ನಿರ್ಲಕ್ಷ್ಯ ಮನೋಭಾವನೆಯನ್ನು ತೋರಿಸಿದ್ದಾರೆ. ಈ ರೀತಿ ಆದರೆ ಈ ಔದ್ಯೋಗೀಕರಣಕ್ಕೆ ಪುಷ್ಟಿ ಶಕ್ತಿ ಇಲ್ಲದೇ ಒಂದೆರಡು ವರ್ಷದಲ್ಲೇ ನಮ್ಮ ಕಾರ್ಖಾನೆಗಳ ಪರಿಸ್ಥಿತಿ ಹೇಗಾಗುತ್ತದೆ ಎನ್ನುವುದು ತಿಳಿಯುತ್ತದೆ. ಆದುದರಿಂದ ಈ ಒಂದು ಧೋರಣೆಯನ್ನು ಬದಲಾವಣೆ ಮಾಡಬೇಕು ಮತ್ತು ಇದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಈಗಲೇ ಒಂದು ದಿಟ್ಟ ತೀರ್ಮಾನಕ್ಕೆ ಬರುವುದು ಸರಿಯೆಂದು ನಾನು ಆರ್ಥಿಕ ಮಂತ್ರಿಗಳಿಗೆ ಹೇಳ ಬಯಸುತ್ತೇನೆ. ಅವರೂ ಕೂಡ ರೈತರ ಮನೆಯಲ್ಲಿ ಹುಟ್ಟಿದವರು. ಆದರೆ ಅನೇಕ ತರಹದ ನಗರದ ಜೀವನದಿಂದ ಸ್ವಲ್ಪ ಮರೆಯುವ ಸಂದರ್ಭ ಉಂಟು. ಈ ರೀತಿ ಮಾಡಬಾರದೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮಗೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಸಹಾಯ ಕಡಿಮೆಯಾಗಿದೆ ಮತ್ತು ನೆರೆಯ ರಾಜ್ಯದವರಿಗೆ ಎಷ್ಟು ಸಹಾಯ ಸಿಕ್ಕುತ್ತದೆಯೋ ಅಷ್ಟು ಸಿಕ್ಕಲಿಲ್ಲ ಎಂದು ಹೇಳಿದ್ದಾರೆ.

6-30 P.M.

ಐದನೇ ಫೈನಾನ್ಸ್ ಕಮಿಷನ್ ಮಾಡಿದ್ದಾರೆ. ಆದರಿಂದ ನಮಗೆ ಸಹಾಯ ಬರುತ್ತದೆ ಎಂದು ಮಾನ್ಯ ಅರ್ಥ ಮಂತ್ರಿಗಳು ಕೂಡ ಆಸೆ ಇಟ್ಟುಕೊಂಡಿದ್ದಾರೆ. ಸಹಾಯ ಬರಬಹುದು ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದಾರೆ. ಗಡಿ ಸಮಸ್ಯೆ, ಕೃಷ್ಣ ಗೋದಾವರಿ ನೀರಿನ ವಿಷಯ, ಕಾವೇರಿ ನೀರಿನ ವಿಷಯ ಎಲ್ಲವೂ ನ್ಯಾಯವಾದ ರೀತಿಯಲ್ಲಿ ಬಗೆಹರಿಯುತ್ತವೆ ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದೇವೆ. ನಮಗೆ ಅನ್ಯಾಯವಾಗುವುದಾದರೆ ನಾವು ಹೋರಾಟ ಮಾಡಬೇಕು ; ಮುಖ್ಯವಾಗಿ ನಮ್ಮ ಆರ್ಥಿಕ ಮಂತ್ರಿಗಳ ಮೂಲಕ ಮಾಡಬೇಕು. ಕೇಂದ್ರ ಸರ್ಕಾರದವರು ಕೊಡುವಂಥ ಹಣ ರಾಜ್ಯ ಸರ್ಕಾರಗಳೇ ತೆಗೆದುಕೊಂಡು ಕೆಲಸಗಳನ್ನು ಮಾಡಿಸಬೇಕು. ಕೇಂದ್ರ ಸರ್ಕಾರದ ಹಣದಿಂದ ಬಹಳ ಕೆಲಸವಾಗಬೇಕಾದರೆ ಅವರು ಆ ಕೆಲಸಗಳನ್ನು ರಾಜ್ಯ ಸರ್ಕಾರಗಳ ಮೂಲಕವೇ ಮಾಡಬೇಕಾಗುತ್ತದೆ. ರಾಜ್ಯ ಸರ್ಕಾರದವರು ಜನರ ಸಂಪರ್ಕವನ್ನು ಇಟ್ಟುಕೊಂಡಿರುವುದರಿಂದ ಅವರು ಮಾಡುವಂಥ ಕೆಲಸ ಸರಿಯಾಗಿದೆಯೋ ಇಲ್ಲವೋ ಹಾಳಾಗಿ ಹೋಗಿದೆಯೋ ಎನ್ನುವ ನಿರ್ಣಯ ಕೊಡುವವರು ಜನರು. ಆ ನಿರ್ಣಯವನ್ನು ತೆಗೆದು

(ಶ್ರೀ ಬೋಳಾ ರಘುರಾಮ ಶೆಟ್ಟಿ)

ಕೊಂಡು ರಾಜ್ಯ ಸರ್ಕಾರದವರು ಅದರ ವಿಷಯದಲ್ಲಿ ಹೆಚ್ಚು ಗಮನಕೊಟ್ಟು ಸಮರ್ಥವಾಗಿ ಯೋಜನಾಬದ್ಧವಾಗಿ ಸರಿಯಾದ ರೀತಿಯಲ್ಲಿ ಕೆಲಸಕಾರ್ಯ ಮಾಡುವುದಕ್ಕೆ ಸಾಧ್ಯವುಂಟು. ಆ ಪ್ರಕಾರ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸನ್ಮಾನ್ಯ ಸಭಾಪತಿಗಳೇ, 1969 70ನೇ ಸಾಲಿಗೆ ರಾಜ್ಯದ ಅರ್ಥ ಮಂತ್ರಿಗಳು ಈ ಸಭೆಯಲ್ಲಿ ಮಂಡಿಸಿರತಕ್ಕ ಮುಂಗಡ ಪತ್ರವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆ ಸ್ವಾಗತಿಸಿ ಅರ್ಥ ಮಂತ್ರಿಗಳಿಗೂ ಹಾಗೂ ರಾಜ್ಯದ ಮುಖ್ಯ ಮಂತ್ರಿಗಳಿಗೂ ಎರಡು ಮಾತು ಹೇಳಲು ಇಷ್ಟಪಡುತ್ತೇನೆ.

ಒಂದನೆಯದು ಈ ಬಜೆಟ್ಟನ್ನು ನೋಡಿದಾಗ ಅದು ಖೋತಾ ಬಜೆಟ್ ಎಂದು ಕಂಡು ಬಂದರೂ ಸಹ ಯಾವುದೇ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಲೀ ಖೋತಾ ಬಜೆಟ್ಟನ್ನು ಮಾಡುವುದು ಅನಿವಾರ್ಯವೆಂದು ಕಾಣಿಸುತ್ತದೆ. ಅರ್ಥ ತಜ್ಞರು ಕೂಡ ಇದೇ ಮಾತನ್ನು ಹೇಳಿದ್ದಾರೆ. ನಮ್ಮ ದೇಶದ ಪರಿಸ್ಥಿತಿಯನ್ನು ನೋಡಿದರೂ ಅಂಥ ಅಟ್ಯಾಕ್ ಮಾಡಬೇಕಾದ, ಉಗ್ರವಾಗಿ ಟೀಕೆ ಮಾಡಬೇಕಾದ ಅವಶ್ಯಕತೆ ಇಲ್ಲ ಕಂಡುಬರುತ್ತಿಲ್ಲ. ಆ ದೃಷ್ಟಿಯಿಂದ ಈ ಮುಂಗಡ ಪತ್ರವನ್ನು ನಾನು ಸ್ವಾಗತ ಮಾಡುತ್ತೇನೆ. ಈ ಸಾರಿಯ ಬಜೆಟ್ಟನಲ್ಲಿ ಒಂದು ಸಂತೋಷಕರವಾದ ವಿಷಯವೇನೆಂದರೆ ಸಾಮಾನ್ಯ ಜನತೆಯ ಮೇಲೆ ಬೀಳತಕ್ಕ ಯಾವ ಹೊರೆಯೂ, ತೆರಿಗೆಗಳೂ ಇಲ್ಲದೆ ಇರುವುದು. ಇಂಥ ಮುಂಗಡ ಪತ್ರವನ್ನು ಮಂಡಿಸಿರುವುದಕ್ಕಾಗಿ ನಾನು ಅರ್ಥ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

ಮೈಸೂರಿನ ಮುಖ್ಯ ಮಂತ್ರಿಗಳಿಗೆ ಒಂದು ವಿನಂತಿ ಏನೆಂದರೆ ಕಳೆದ ಒಂದು ವರ್ಷದಿಂದ ಅರ್ಥ ಮಂತ್ರಿಗಳು ಹಾಗೂ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಧೋರಣೆ ನಮ್ಮ ಮೈಸೂರು ರಾಜ್ಯದ ಬಗ್ಗೆ ಏನಿದೆ ಅದನ್ನು ಹಲವು ಬಾರಿ ಖಂಡಿಸಿ ಮಾತನಾಡಿದ್ದಾರೆ. ಮಹಾತ್ಮ ಗಾಂಧಿ ಯವರು ಒಂದೇ ಒಂದು ಮಾತನ್ನು ಹೇಳಿದ್ದಾರೆ :

"Strength does not come from physical capacity.
It comes from indomitable will."

ಕಳೆದ ಏಳೆಂಟು ತಿಂಗಳಿನಿಂದ ನಮ್ಮ ರಾಜ್ಯಕ್ಕೆ ಹೊಸ ನಾಯಕತ್ವ ಬಂದ ಮೇಲೆ ಕೇಂದ್ರ ಸರ್ಕಾರದ ನೀತಿಯನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸಿ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಮೈಸೂರು ರಾಜ್ಯದ ವಿಚಾರದಲ್ಲಿ ಒಂದು ತಾತ್ಸಾರ ಭಾವನೆ ಕೇಂದ್ರಕ್ಕೆ ಇತ್ತು. ಇತ್ತೀಚೆಗೆ ಕೇಂದ್ರ ಸರ್ಕಾರದ ನೀತಿಯನ್ನು ನೋಡಿದರೆ ತಾತ್ಸಾರ ಮಾಡುವ ಮಟ್ಟದಲ್ಲಿ ಮೈಸೂರು ರಾಜ್ಯದಲ್ಲಿ ನಾಯಕತ್ವ ಇಲ್ಲ, ಅವರನ್ನು ಸ್ನಬ್ ಮಾಡಬಹುದು ಎನ್ನುವ ಮಟ್ಟದಲ್ಲಿ ಇಲ್ಲ ಎಂದು ಹೇಳುವಂಥ ಧೋರಣೆಯನ್ನು ಈವಾಗ ಮೈಸೂರು ಸರ್ಕಾರದ ಬಗ್ಗೆ ತಾಳು ತ್ತಿದ್ದಾರೆ. ಮೈಸೂರು ಸರ್ಕಾರದವರು ಹಾಗೂ ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳು ಮತ್ತು ಅರ್ಥ ಮಂತ್ರಿಗಳು ಕೆಲವು ಸಂದರ್ಭಗಳಲ್ಲಿ ಇನ್ನೂ ಹೆಚ್ಚು ಒತ್ತಡವನ್ನು ಕೇಂದ್ರ ಸರ್ಕಾರದ ಮೇಲೆ ತರಬೇಕೆಂದು ಹೇಳುತ್ತೇನೆ.

ಆಯವ್ಯಯ ಪಟ್ಟಿಯ ವಿಷಯವಾಗಿ ಹೇಳುವುದಾದರೆ 1969–70ನೇ ಇಸವಿಯಲ್ಲಿ ವಿದ್ಯಾ ಭ್ಯಾಸಕ್ಕಾಗಿ 46 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇದು ತುಂಬ ಸ್ವಾಗತಾರ್ಹವಾದ ವಿಷಯ. ಕ್ವಾಂಟಿಟೇಟಿವ್ ಆಗಿ ಯೋಚನೆ ಮಾಡುವುದಾದರೆ ಪೂರ್ಣವಾಗಿ ಸ್ವಾಗತ ಮಾಡತಕ್ಕ ವಿಷಯ. ಕ್ವಾಲಿಟಿ ಬಗ್ಗೆ ಯೋಚನೆ ಮಾಡುವುದಾದರೆ ತುಂಬ ನಿರಾಶಾದಾಯಕವಾದ ಸ್ಥಿತಿ ನಮ್ಮ ವಿದ್ಯಾಭ್ಯಾಸ ಕ್ಷೇತ್ರದಲ್ಲಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಯಾವರೀತಿಯಲ್ಲಿತ್ತು ಅದೇ ರೀತಿಯಲ್ಲಿ ವಿದ್ಯಾಭ್ಯಾಸ ಮುಂದುವರಿಯುತ್ತಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇತ್ತೀಚೆಗೆ ಹಲವಾರು ವಿಷಯಗಳನ್ನು ನಾವು ನೋಡುತ್ತಿರುತ್ತೇವೆ. ಇದೇ ಬೆಂಗಳೂರು ನಗರದಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ಒಂದು ವಾರ್ಷಿಕೋತ್ಸವ ನಡೆದ ಸಂದರ್ಭ ದಲ್ಲಿ ಅದೇ ಆಶ್ರಮಕ್ಕೆ ಸಂಬಂಧಪಟ್ಟ ಒಬ್ಬ ಗುರುಗಳು ಅಧ್ಯಕ್ಷತೆಯನ್ನು ವಹಿಸಿದ್ದರು. ಅಲ್ಲಿ ಭಾಷಣಕಾರರಾಗಿ ಒಬ್ಬರು ಸಾಮಾಜಿಕ ಕಾರ್ಯಕರ್ತರು ಬಂದಿದ್ದರು. ಅವರು ಮಾತನಾಡುತ್ತ ಮನುಷ್ಯಮಾತ್ರನಾದವನು ತನ್ನ ಸಾಧನೆಯಿಂದ ಜೀವನದ ಉನ್ನತ ಶಿಖರವನ್ನು ಏರಬಲ್ಲ, ಸ್ವಾಮಿ ವಿವೇಕಾನಂದರಂತೆ ಬದುಕಬಲ್ಲ ಎಂದು ಹೇಳಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಸನ್ಯಾಸಿ ಗಳು ಮಾತನಾಡುತ್ತಾ ಸ್ವಾಮೀಜಿಯನ್ನು ನಿಮ್ಮಂತೆ ಓರ್ವ ಮನುಷ್ಯ ಎಂದು ಪರಿಗಣಿಸಬಾರದು,

ಆತನು ದೇವತೆಯ ಅವತಾರ ಎಂದು ಹೇಳಿದರು. ಈ ರೀತಿಯಾಗಿ ಹೇಳುತ್ತಾ ಬಂದರೆ ನಮ್ಮ ಮುಂದಿನ ಪೀಳಿಗೆಯ ಮೇಲೆ ಏನು ಪರಿಣಾಮವಾಗುತ್ತದೆ? ನಮ್ಮ ವಿದ್ಯಾಭ್ಯಾಸದ ಕ್ರಮದಲ್ಲಿ ಬದಲಾವಣೆಯಾಗಬೇಕು ಎಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೈಸೂರು ದೇಶದಲ್ಲಿ ಎಲ್ಲಿ ಹೋದರೂ ಕೂಡ ಜಾತಿಗೆ ಸಂಬಂಧಪಟ್ಟಂಥ ಬೋರ್ಡ್‌ಗಳನ್ನು ಕಾಣುತ್ತೇವೆ. ಇದರಿಂದ ನಮ್ಮಲ್ಲಿ ದುಷ್ಪರಿಣಾಮವಾಗುತ್ತಿದೆ. ನಾವು ವಿದ್ಯಾಭ್ಯಾಸಕ್ಕೆ ದುಡ್ಡು ಖರ್ಚು ಮಾಡುವುದು ಮಾತ್ರವಲ್ಲ, ವಿದ್ಯಾಭ್ಯಾಸದ ಕ್ವಾಲಿಟಿ ಬದಲಾವಣೆಯಾಗುವುದಕ್ಕೆ, ಅದು ಉತ್ತಮವಾಗುವುದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು. ರಾಜ್ಯ ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಕಮಿಟಿಗಳನ್ನು ಮಾಡತಕ್ಕ ಕಾಲದಲ್ಲಿ ಕ್ಲಾಸ್ ಲೆಸ್ ಸೊಸೈಟಿ ಎಂದು ಏನು ಹೇಳುತ್ತೇವೆ ಅದಕ್ಕೆ ಅನುಗುಣವಾಗಿ ಅವುಗಳನ್ನು ಮಾಡಬೇಕು ಎನ್ನುವ ದೂರದೃಷ್ಟಿಯನ್ನು ಇಟ್ಟುಕೊಳ್ಳಬೇಕು. ವಿದ್ಯಾಭ್ಯಾಸ ಸಂಬಂಧದಲ್ಲಿ ಗ್ರಾಂಟ್ ಕೊಡುವ ಪದ್ಧತಿ ಇರುವುದರಿಂದ ಕೆಲವು ಪಕ್ಷಗಳವರು, ಜಾತಿಗಳವರು ಸಂಸ್ಥೆಗಳನ್ನು ಪ್ರಾರಂಭ ಮಾಡುತ್ತಾರೆ. ಅದರಿಂದ ಭಾವೈಕ್ಯತೆ ಬರುವುದಿಲ್ಲ ಆದ್ದರಿಂದ ಈ ವಿಷಯವನ್ನು ಸೂಕ್ಷ್ಮವಾಗಿ ಆಳವಾಗಿ ಪರಿಶೀಲನೆ ಮಾಡಬೇಕು. ನನ್ನ ದೃಷ್ಟಿಯಿಂದ ಹೇಳುವುದಾದರೆ ವಿದ್ಯಾಭ್ಯಾಸವನ್ನು ಸರ್ಕಾರದವರೇ ಪೂರ್ತಿಯಾಗಿ ನಡೆಸುವಂಥ ವ್ಯವಸ್ಥೆ ಮಾಡಿದರೆ ನಮ್ಮ ಸಮಾಜದಲ್ಲಿನ ಅವ್ಯವಹಾರದ ತೀಕ್ಷ್ಣ ನಿವಾರಣೆಗೆ ಅನುಕೂಲವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಇದೇ ರೀತಿಯ ಅಭಿಪ್ರಾಯವನ್ನು ನಮ್ಮ ರಾಜ್ಯದ ಮೇಧಾವಿಗಳು ಹಾಗೂ ತಜ್ಞರು ಕೂಡ ಹೇಳಿದ್ದಾರೆ. ಪ್ರೊಫೆಸರ್ ಪೊಯೆಟ್ ಗೋಪ್ಪುರಿಸ್ ರವರು ವಿದ್ಯಾ ತಜ್ಞರು. ಅವರು ಒಂದು ಕಡೆ ಹೀಗೆ ಹೇಳಿದ್ದಾರೆ:

> "Our young men seem to have lost the capacity to form correct intelligible answers. Every year we are producing hundreds and thousands of not employed young men but unemployable young men. The problem is not men without jobs but jobs without men."

ಐದಾರು ತಿಂಗಳ ಹಿಂದೆ ಮೈಸೂರಿನವರು ಕೆಲವರು ಫಸ್ಟ್‌ಕ್ಲಾಸಿನಲ್ಲಿ ಪಾಸಾದವರು ಅಪ್ಲಿಕೇಷನ್ ಗಳನ್ನು ಒಂದು ಸಂದಂರ್ಭದಲ್ಲಿ ಕರೆದಾಗ ಹೋಗಿದ್ದರು, ಅವರಿಗೆ ಬಾಯಲ್ಲಿ ಉತ್ತರ ಹೇಳುವು ದಕ್ಕೆ ಬರುತ್ತಿರಲಿಲ್ಲ. ಇಂಥ ಪರಿಸ್ಥಿತಿ ಇದೆ. ಹೇಗೋ ಪಾಸುಮಾಡಿಬಿಡುತ್ತಾರೆ. ಆದರೆ ಅವರಿಗೆ ಏನಾದರೂ ಕೇಳಿದರೆ ಹೇಳುವುದಕ್ಕೆ ಶಕ್ತಿಯಿರುವುದಿಲ್ಲ, ಭಯಪಡುತ್ತಾರೆ.

ಇನ್ನು ಅನಿಮಲ್ ಹಸ್ಬೆಂಡ್ರಿ ವಿಷಯದಲ್ಲಿ ಒಂದೆರಡು ಮಾತನ್ನು ಹೇಳುತ್ತೇನೆ. ಮೈಸೂರು ರಾಜ್ಯದಲ್ಲಿ ಸುಮಾರು ಮೂರೂಮುಕ್ಕಾಲು ಕೋಟಿ ಜಾನುವಾರಿದೆ; 2 ಕೋಟಿ 65 ಲಕ್ಷ ಜನರಿದ್ದಾರೆ, ಪ್ರತಿ ವರ್ಷ 30-40 ಎ. ಎನ್. ಪಿ. ಪ್ರೋಗ್ರಾಂ ಹಾಕುತ್ತಾರೆ. ಏಕೆ? ನಮ್ಮ ದೇಶದ ಜನರು ಬಡತನದಲ್ಲಿರುವುದರಿಂದ ಅವರಿಗೆ ಪುಷ್ಟಿಕರವಾದ ಆಹಾರ ತೆಗೆಯುಕೊಳ್ಳುವುದಕ್ಕೆ ಅವಕಾಶವಿಲ್ಲದೆ, ಕ್ಷಯ ಮುಂತಾದ ರೋಗಗಳಿಗೆ ತುತ್ತಾಗುತ್ತಲಿದ್ದಾರೆ, ಮುಂದೆ ಅದರಿಂದ ಮಕ್ಕಳೂ ದುರ್ಬಲರಾಗುತ್ತಾರೆ ಎಂದು ಅದಕ್ಕೆ ಒಂದು ಪ್ರೋಗ್ರಾಂ ಹಾಕಿದ್ದಾರೆ. ಪುಷ್ಟಿಯಾದ ಆಹಾರ ದೊರೆಯುವಂತೆ ಮಾಡಲು, ಅದರ ಕೊರತೆಯನ್ನು ನಿವಾರಣೆ ಮಾಡಲು ಪುಷ್ಟಿಕರವಾದ ಆಹಾರವನ್ನು ದೊರಕಿಸಬೇಕಾದ್ದು ಅಗತ್ಯವಾಗಿದೆ. ಎ ಸೌಂಡ್ ಮೈಂಡ್ ಇನ್ ಎ ಸೌಂಡ್ ಬಾಡಿ ಎಂದು ಹೇಳುತ್ತಾರೆ. ಅದಕ್ಕಾಗಿ ಒಳ್ಳೆಯ ಹಾಲನ್ನು ಕುಡಿಯಬೇಕೆಂದು ಹೇಳುತ್ತಾರೆ. ಹಾಗೆ ಹೇಳುವ ಸರಕಾರ ಹೆಚ್ಚು ಹಾಲನ್ನು ದೊರಕಿಸಲು ಅದಕ್ಕೆ ತಕ್ಕಷ್ಟು ಹಣ ಒದಗಿಸಿಲ್ಲ; ಮೂರೂವರೆ ಕೋಟಿ ಜಾನುವಾರಿಗೆ ಕೇವಲ 195 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ, ಇದರಲ್ಲಿ ಸೇಕಡ 30 ರಷ್ಟು ಸಿಬ್ಬಂದಿ ಖರ್ಚಿಗೆ ಹೋಗುವುದು, ಅಂದರೆ ಆರನೆಯ ಒಂದು ಭಾಗ ಸಿಬ್ಬಂದಿಗೆ ಖರ್ಚಾಗುವುದು. ಇನ್ನು ಉಳಿಯುವುದು ಕೇವಲ ಕಡಿಮೆ ಹಣವಾದುದರಿಂದ ಅದರಿಂದ ಜಾನು ವಾರುಗಳ ಅಭಿವೃದ್ಧಿ ಸಾಕಷ್ಟು ಆಗಲು ಸಾಧ್ಯವಿಲ್ಲ. ಈಗ ಈ ಬಾಬಿಗೆ ಕೊಟ್ಟಿರುವುದು ಕೇವಲ ಕಡಿಮೆ, ಡೆವಲಪ್‌ಮೆಂಟಿಗೆ ಹಣವಿಲ್ಲ, ಹೆಚ್ಚು ಪುಷ್ಟೀಕರವಾದ ಆಹಾರ ತೆಗೆದುಕೊಳ್ಳಬೇಕೆಂದು ಹೇಳುವಾಗ ಆ ಆಹಾರವನ್ನು ಹೆಚ್ಚಾಗಿ ಉತ್ಪತ್ತಿಮಾಡಲು ನೆರವು ಸಾಕಾದಷ್ಟು ಕೊಟ್ಟಿಲ್ಲ. ಖಂಡಿತ 1 ಕೋಟಿ 95 ಲಕ್ಷ ಕೊಟ್ಟಿರುವುದು ಬಹಳ ಕಡಮೆ. ಅದರ ಎರಡು ಮೂರರಷ್ಟಾದರೂ ಕೊಡಬೇಕು. ಇತರ ಕೆಲವು ಬಾಬುಗಳಿಂದಲಾದರೂ ಹಣ ತೆಗೆದು ಈ ಬಾಬಿಗೆ ಕೊಟ್ಟು ಪ್ರೋತ್ಸಾಹ ನೀಡಬೇಕೆಂದು ಒತ್ತಾಯಮಾಡುತ್ತೇನೆ.

(ಶ್ರೀ ಎಂ. ಬಸವರಾಜು)

ಹಾರಂಗಿ ವಿಷಯ ಬಹಳ ಪ್ರಾಮುಖ್ಯವಾದುದು, ಇದು ಸಾವು ಬದುಕಿನ ಪ್ರಶ್ನೆ, ಕಳೆದ ಎರಡು ಸಾಲುಗಳಲ್ಲೂ ಈ ವಿಚಾರದಲ್ಲಿ ಈ ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಿದ್ದಾರೆ. ಕೃಷ್ಣರಾಜನಗರ, ಅರಕಲಗೂಡು ಮುಂತಾದ ಭಾಗದವರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡಲು ತಯಾರಿದ್ದಾರೆಂದು ಹೇಳಿದ್ದಾರೆ. ಹಣವಿಲ್ಲವೆಂದು ಕೆಲಸಗಳನ್ನು ತೆಗೆದುಕೊಳ್ಳುವುದು ನಿಧಾನಮಾಡಿದರೆ ತೊಂದರೆಯಾಗುವುದು. ಶ್ರೀ ನಾಗಪ್ಪನವರು ಹೇಳಿದಂತೆ ಬೇಗ ಯೋಜನೆಗಳ ಕೆಲಸ ಪೂರ್ಣವಾಗಬೇಕು, ಹೆಚ್ಚು ಕೆಲಸಗಳನ್ನು ತೆಗೆದುಕೊಂಡು ಎಲ್ಲವನ್ನೂ ಅರ್ಧಂಬರ್ಧ ಮಾಡುವುದಕ್ಕಿಂತ ಒಂದೊಂದಾಗಿ ಪೂರ್ಣಮಾಡುವುದು ಒಳ್ಳೆಯದು. ಮೈಸೂರು ದೇಶದಲ್ಲಿ ಬತ್ತದ ಬೆಳೆ ಉತ್ಪತ್ತಿ ಹೆಚ್ಚಾಗಬೇಕಾದರೆ ಯಾವ ಕಡೆ ಭೂಮಿ ಚೆನ್ನಾಗಿದೆ, ಎಲ್ಲಿ ಹೆಚ್ಚು ಬೆಳೆಯಲು ಸಾಧ್ಯ ಎಂಬುದನ್ನು ಗಮನಿಸಬೇಕು. ಅರಕಲಗೂಡು ಮತ್ತು ಕೃಷ್ಣರಾಜನಗರ ತಾಲ್ಲೂಕುಗಳಲ್ಲಿ ಒಳ್ಳೆಯ ಫಲವತ್ತಾದ ಭೂಮಿ ಇದೆ, ಉತ್ಪತ್ತಿ ಹೆಚ್ಚಿಸಲು ಅವಕಾಶವಿದೆ ಎಂದು ತಜ್ಞರು ಹೇಳುತ್ತಿದ್ದಾರೆ, ಅವರೊಂದಿಗೆ ಚರ್ಚೆಮಾಡಿದಾಗ ಇಡೀ ದೇಶದಲ್ಲಿ ಉತ್ತಮವಾದ ಫಸಲು ಬರುವುದಕ್ಕೆ ಕೃಷ್ಣರಾಜನಗರ ಮತ್ತು ಅರಕಲಗೂಡು ತಾಲ್ಲೂಕುಗಳಲ್ಲಿ ಅವಕಾಶವಿದೆ ಎಂದು ತಿಳಿಸಿದ್ದಾರೆ. ಹಳೇ ಮೈಸೂರಿನಲ್ಲಿ ಬಹಳ ಉತ್ತಮವಾದ ಅಕ್ಕಿಯನ್ನು ಕೃಷ್ಣರಾಜನಗರದಿಂದ ಅರಮನೆಗೆ ತರಿಸುತ್ತಾ ಇದ್ದರು, ಆ ಪ್ರದೇಶದ ಜನರು ಅಂತಹ ಉತ್ತಮವಾದ ವ್ಯವಸಾಯಗಾರರಾಗಿದ್ದಾರೆ. ತುಂಗಭದ್ರಾ ಪ್ರಾಜೆಕ್ಟ್‌ನಲ್ಲಿ ಕೋಟ್ಯಾಂತರ ರೂಪಾಯಿ ಹಾಕಿ ಉತ್ತಮವಾದ ಭತ್ತ ಬೆಳೆಯಿರಿ ಎಂದರೆ ಅದಕ್ಕೆ ಜನ ತಯಾರಾಗಿಲ್ಲ. ಬೆಳೆ ಬೆಳೆಯಲು ಉತ್ಸಾಹದಿಂದ ಇರತಕ್ಕವರು ದೇಶದ ಸೇವೆಗೆ ಅಳಿಲು ಸೇವೆ ಸಲ್ಲಿಸಬೇಕೆಂದು ಇದುವರೆಗೆ ಕೇವಲ 3 ಲಕ್ಷ ರೂಪಾಯಿ ಕೊಟ್ಟಿರುವುದು ಬಹಳ ದುಃಖದ ಸಂಗತಿ. ಹಾರಂಗಿ ಉತ್ತಮವಾದ ಪ್ರಾಜೆಕ್ಟು ಅವಕ್ಕೆ ಬೇಕಾಗುವಷ್ಟು ಹಣವನ್ನಾದರೂ ಒದಗಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಉತ್ತಮವಾದ ಭತ್ತವನ್ನು ಬೆಳೆದರೆ ಆಹಾರ ಪದಾರ್ಥಕ್ಕೆ ಒಳ್ಳೆಯ ಧಾರಣೆ ಬರುತ್ತದೆ ಮತ್ತು ಅವರಿಗೆ ಹೆಚ್ಚಿನ ಸೌಲಭ್ಯ ಸಿಕ್ಕುತ್ತದೆ.

ಲೋನ್ಸ್ ಟು ಗವರ್ನಮೆಂಟ್ ಆಫೀಸರ್ಸ್ ಅಂತ ಹೇಳಿ 155 ಲಕ್ಷ ರೂಪಾಯಿ ಇಟ್ಟಿದ್ದೀರಿ, ಒಂದು ಸೈಕಲ್ ಇಲ್ಲದೇ ಇದ್ದರೂ ಕೂಡ ನಡೆಯುತ್ತದೆ, ಬೆಂಗಳೂರು ಸಿಟಿಯಲ್ಲಿ ವಾಹನ ಸೌಕರ್ಯ ಬೇಕಾದಷ್ಟು ಇರುತ್ತದೆ. ಎರಡು ಲಕ್ಷ ಜನಗಳಿಗೆ 155 ಲಕ್ಷ ರೂಪಾಯಿಗಳನ್ನು ಇಟ್ಟಿರುವಾಗ ಎರಡೂವರೆ ಕೋಟಿ ಜನಕ್ಕೆ 3 ಲಕ್ಷ ರೂಪಾಯಿ ಇಟ್ಟಿರುವುದು ತುಂಬಾ ಅನ್ಯಾಯ ಎಂದು ಕಾಣುತ್ತದೆ. ಸುಮಾರು 55 ಲಕ್ಷ ರೂಪಾಯಿಗಳನ್ನು ಅವರಿಗೆ ಕೊಟ್ಟು ಇನ್ನುಳಿದ ಹಣವನ್ನು ಹಾರಂಗಿ ಪ್ರಾಜೆಕ್ಟಿಗೆ ಕೊಡಬೇಕೆಂದು ಹೇಳಬಯಸುತ್ತೇನೆ.

ಲೋನ್ಸ್ ಫಾರ್ ವಾಟರ್ ಸಪ್ಲೈ 632 ಲಕ್ಷ ರೂಪಾಯಿ ಇದೆ ಅದರಲ್ಲೂ ಕೂಡ ಸುಮಾರು 200 ಲಕ್ಷ ರೂಪಾಯಿಗಳನ್ನಾದರೂ ಕೂಡ ಹಾರಂಗಿ ಪ್ರಾಜೆಕ್ಟಿಗೆ ಕೊಡಬೇಕೆಂದು ತಿಳಿಸಲು ಇಚ್ಛಿಸುತ್ತೇನೆ.

ಲೋನ್ಸ್ ಫಾರ್ ಡ್ರೈನೇಜ್, 217 ಲಕ್ಷ ರೂಪಾಯಿ ಇದೆ, ಈ ಮೂರು ಐಟಂಗಳಲ್ಲದೆ ಅಡ್ವಾನ್ಸಸ್ ಟು ಕಲ್ಟಿವೇಟರ್ಸ್ ಅಂತ 1750 ಲಕ್ಷ ರೂಪಾಯಿ ಇಟ್ಟಿದ್ದೀರಿ, ಇದರಲ್ಲಿ ಅರ್ಧಭಾಗವನ್ನು ಅವರಿಗೆ ಕೊಟ್ಟು ಇನ್ನರ್ಧ ಭಾಗವನ್ನು ಹಾರಂಗಿ ಪ್ರಾಜೆಕ್ಟಿಗೆ ಒದಗಿಸಿದರೆ ನಮ್ಮ ದೇಶದ ಪ್ರಗತಿಯಾಗುತ್ತದೆ, ಮತ್ತು ತಮಗೂ ಒಂದು ಕೀರ್ತಿ ಸಂಪಾದನೆ ಮಾಡಿಕೊಂಡ ಹಾಗಾಗುತ್ತದೆ. ಆ ರೀತಿ ಮಾಡಿ ಮೈಸೂರು ರಾಜ್ಯದ ಆಹಾರ ಸಮಸ್ಯೆ, ಮತ್ತು ಜನರ ನಿರುದ್ಯೋಗ ನಿವಾರಣೆಗೆ ಅನುಕೂಲ ಮಾಡಿಕೊಡಲು ಮನಸ್ಸು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ (ಭರಮಸಾಗರ).—ಸ್ವಾಮಿ, ಈ ಸಭೆಯ ಮುಂದೆ ಬಹಳವಾಗಿ ಮನಸ್ಸು ಇಲ್ಲದ ಮನಸ್ಸಿನಿಂದ—ಏನೋ ಅನುಮಾನ ಇದ್ದಂತಹ ಡೋಲಾಯಮಾನ ಪರಿಸ್ಥಿತಿಯಲ್ಲಿ ಮಂಡಿಸಿರತಕ್ಕ ಈ ಆಯವ್ಯಯ ಪಟ್ಟಿಯನ್ನು ನಾನು ವಿರೋಧಿಸುತ್ತೇನೆ. ಇದಕ್ಕೆ ಹೆಚ್ಚು ಕಾರಣ ಕೊಡಬೇಕಾಗಿಲ್ಲ, ಏಕೆಂದರೆ ಯಾವುದೊಂದೂ ನಿರ್ದಿಷ್ಟ ಇಲ್ಲ, ನೀವು ನಿಮ್ಮ ಭಾಷಣದಲ್ಲಿ ಹೇಳಿದ ಹಾಗೆ ಯಾವುದೊಂದೂ ಖಚಿತ ಇಲ್ಲ. ನಿಮ್ಮ ವ್ಯವಹಾರಗಳು ಖಚಿತ ಇಲ್ಲ. ನಿಮ್ಮ ಅಂದಾಜು ಪ್ರಕಾರ ನೀವು ಖಚಿತವಾಗಿ ಖರ್ಚು ಮಾಡತಕ್ಕ ಧೈರ್ಯ ನಿಮಗೆ ಇಲ್ಲ ಎಂದು ನಿಮ್ಮ ಭಾಷಣದಿಂದಲೇ ವ್ಯಕ್ತವಾಗುತ್ತಾ ಇದೆ. ಅಂಥಾದ್ದರಲ್ಲಿ 1970ನೇ ಇಸವಿ ಮಾರ್ಚಿ 31ರ ವರೆಗೂ ಖಚಿತವಾಗುತ್ತದೆಯೋ ಇಲ್ಲವೋ ದೇವರೇ ಬಲ್ಲ. ಏಕೆಂದರೆ ನಿಮ್ಮ ಭಾಷಣವನ್ನು ನೋಡಿದರೆ

ಅಷ್ಟು ಅನಿಶ್ಚಿತ ಪರಿಸ್ಥಿತಿಯಲ್ಲಿ ನೀವು ಇದ್ದೀರಿ. ಶ್ರೀಮಾನ್ ಪಾಟೀಲ್‌ರವರು ನಿಮ್ಮ ದೋಣಿ ಸಾಗಲಿ ಎಂದು ಹೇಳಿದರು. ಸರ್ಕಾರದ ದೋಣಿ ಬಹಳ ದುಸ್ಥಿತಿಯಲ್ಲಿ ಇದೆ, ಈ ದೋಣಿ ಸಾಗಲಿ ಎಂಬುದೇ ನನ್ನ ಆಸೆ. ಈ ಸರ್ಕಾರ, ಈ ಮಂತ್ರಿಮಂಡಲ ಯುವಕರಿಂದ ಕೂಡಿದೆ, ನನಗೆ ಸ್ವಲ್ಪ ಆಶಾಭಾವನೆ ಇದೆ, ಚೆನ್ನಾಗಿ ಕೆಲಸ ಮಾಡಲಿ, ಅವರನ್ನು ಬರೀ ಟೀಕೆ ಮಾಡುವುದೇ ನಮ್ಮ ಉದ್ದೇಶವಲ್ಲ. ಒಳ್ಳೆಯ ಕೆಲಸ ಮಾಡಿದರೆ ಸ್ವಲ್ಪ ಬೆಂಬಲ ಕೊಡೋಣ ಎಂಬ ಅಭಿಪ್ರಾಯವೂ ಕೂಡ ಇತ್ತು. ಆದರೆ ಈ ಮಂತ್ರಿಮಂಡಲದ ಚಲನವಲನಗಳನ್ನೆಲ್ಲಾ ನೋಡಿದರೆ ನಮ್ಮ ಅಭಿಪ್ರಾಯವನ್ನು ಸ್ವಲ್ಪ ಬದಲಾವಣೆ ಮಾಡಬೇಕಾಗುತ್ತದೆ. ಮಾಡಬೇಕಾಗಿದೆ, ಏಕೆಂದರೆ ಈ ಮಗುವಿಗೆ ಹುಟ್ಟುತ್ತಲೇ ಬಾಲಗ್ರಹ ಹಿಡಿದು ಬಿಟ್ಟಿತು. ಹುಟ್ಟಿದ ನಕ್ಷತ್ರ ನೋಡಿದರೆ ಪರಿಸ್ಥಿತಿ ಬಹಳ ಚೆನ್ನಾಗಿರಲಿಲ್ಲ. ಸಪ್ತದೋಷದಿಂದ ಕೂಡಿರತಕ್ಕ, ಬಾಲಗ್ರಹ ಪೀಡಿತ ಶಿಶು ಈ ಮಂತ್ರಿಮಂಡಲ. ಈ ಮಂತ್ರಿಮಂಡಲದ ಪರವಾಗಿ ಯಾವ ಒಂದು ವಿಚಾರವನ್ನೂ ಖಚಿತವಾಗಿ ತಮಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಪಾಪ; ಅಂತಹ ಒಂದು ಕಷ್ಟ ಪರಿಸ್ಥಿತಿಯಲ್ಲಿ ಈ ಒಂದು ಮುಂಗಡ ಪತ್ರವನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಬಹಳ ಯುವಕರು, ಏನಾದರೂ ಧೈರ್ಯ ಮಾಡಿದರೆ, ಮನಸ್ಸು ಮಾಡಿದರೆ ಆ ಕಾರ್ಯವನ್ನು ಮಾಡಿಬಿಡುತ್ತಾರೆ. ಅಂತಹ ರಾಮಕೃಷ್ಣ ಹೆಗಡೆಯವರು ಇಡಬೇಕಾಗಿ ಬಿರಿದುದು ಅವರ ದೌರ್ಭಾಗ್ಯ, ಇದು ಅವರ ಪಾಲಿಗೆ ನಿಜವಾಗಿಯೂ ದುರ್ದೈವ.

ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ).—ಅದು ನಿಮ್ಮ ಅಭಿಪ್ರಾಯ ಇರಬಹುದು.

ಶ್ರೀ ಜಿ. ದುಗ್ಗಪ್ಪ.—ಸಪ್ತ ದೋಷಗಳು ಯಾವುವು ಎಂಬುದನ್ನು ಶ್ರೀಮಾನ್ ಶ್ರೀನಿವಾಸ್‌ರವರೇ ಕೇಳಿ. ತಾವು ತತ್ವರಹಿತವಾದ ರಾಜಕೀಯವನ್ನು ನಡೆಸುತ್ತಾ ಇದ್ದೀರಿ ಇದು ಮೊದಲನೆಯದು ದೋಷ, ಎರಡನೆಯದು ನೀತಿ ವಿಹೀನ ವಾಣಿಜ್ಯ, ಮೂರನೆಯದು ಶೀಲವಿಲ್ಲದ ಶಿಕ್ಷಣ, ನಾಲ್ಕನೆಯದು ದುಡಿಮೆ ಇಲ್ಲದ ಸಂಪತ್ತು ನಿಮಗೆ ಬೇಕು, ಅದನ್ನು ಅನುಸರಿಸುತ್ತಾ ಇದ್ದೀರಿ, ಐದನೆಯದು ವಿಚಕ್ಷಣೆ ಇಲ್ಲದ ಆಡಳಿತ, ಆರನೆಯದು ಸ್ವಜನ ಪಕ್ಷಪಾತ, ಏಳನೆಯದು, ಇದು ಬಹಳ ಗುರುತರವಾದದ್ದು, ನಿಮ್ಮ ಸಮಾಜ ಕಲ್ಯಾಣದ ಕಪಟ ನೀತಿ. ಈ ಸಪ್ತ ದೋಷಗಳಿಂದ ಕೂಡಿ ಪ್ರಾರಂಭದಲ್ಲೇ ಬಾಲಗ್ರಹದಿಂದ ಪೀಡಿತವಾದ ಈ ಶಿಶು ಹೇಗೆ ಮುಂದುವರಿಯಬೇಕು? ನಿಮ್ಮ ರಾಜಕಾರಣ ಹೊಲಸಾಗಿದೆ, ನಿಮ್ಮ ಆಡಳಿತ ಹದಗೆಟ್ಟು ಹೋಗಿಬಿಟ್ಟಿದೆ. ಇಂಥಹ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವ ಕುಸಿದು ಬಿದ್ದು ಹೋಗುತ್ತದೆ. ಪ್ರಜಾಪ್ರಭುತ್ವ ಕುಸಿದು ಬಿದ್ದು ಹೋಗುತ್ತದೆ ಅನ್ನುವುದಕ್ಕೆ ಒಂದು ದೃಷ್ಟಾಂತ—ನೀವು ದೇಶದ ಹಿತದೃಷ್ಟಿಯನ್ನು ಮರೆತು—ಬೆಂಗಳೂರು ನಾಗರೀಕರ ಹಿತದೃಷ್ಟಿಯನ್ನು ಮರೆತು, ಪಕ್ಷದ ಹಿತವನ್ನೇ ಗಮನದಲ್ಲಿಟ್ಟುಕೊಂಡು ಸುಭಾಷನಗರ ಪ್ರದೇಶವನ್ನು—ಧರ್ಮಾಂಬುಧಿ ಕೆರೆ ಅಂತ ಮುಂಚೆ ಕರೆಯುತ್ತಿದ್ದರು—ಕಾಂಗ್ರೆಸ್ ವಸ್ತು ಪ್ರದರ್ಶನಕ್ಕೆ ಕೊಡುತ್ತಾ ಇದ್ದೀರಲ್ಲಾ ಅದರ ಚಿಹ್ನೆ ಏನು ತೋರಿಸುತ್ತದೆ ? ಇದು ನಿಮ್ಮ ತತ್ವ ರಹಿತ ರಾಜಕೀಯ ಎಂದು ನಾನು ಹೇಳುತ್ತೇನೆ. ದಯವಿಟ್ಟು ಕೇಳಬೇಕು, ಈ ಮಗು ಹುಟ್ಟಿದ್ದು ಎಂತಹ ಪರಿಸ್ಥಿತಿಯಲ್ಲಿ? ಶರಾವತಿ ಕರ್ಮಕಾಂಡ, ಪಿ ಡಬ್ಲ್ಯು ಡಿ ಆಫೀಸರ್ಸು ಮತ್ತು ಕಂಟ್ರಾಕ್ಟ ದಾರರ ಅವಾಂತರ ಅದರ ಮೇಲೆ ಶ್ರೀಮಾನ್ ನಿಜಲಿಂಗಪ್ಪನವರ ಕಾಂಗ್ರೆಸ್ ಅದು ಎ. ಐ. ಸಿ. ಸಿ. ಅಲ್ಲ ಎನ್. ಐ. ಸಿ. ಸಿ. ಇಂತಹ ನಕ್ಷತ್ರದಲ್ಲಿ ಉದ್ಭವಿಸಿದ ಶಿಶು ಏನಾಗಿದೆ ? ನಿಮಗೆ ಹೇಳುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ ಗ್ರಾಮಾಂತರ).—ಭಾಗ್ಯವಾನ್ ಶಿಶು.

ಶ್ರೀ ಜಿ. ದುಗ್ಗಪ್ಪ.—ನಿಮ್ಮ ಭಾಗ್ಯ ಎಷ್ಟಿದೆ ಎಂಬುವನ್ನು ಹೇಳುತ್ತೇನೆ. ಮಹಾಜನ್ ವರದಿ ಏನಾಯಿತು ಎಂಬುದನ್ನು ನೋಡಿದರೆ ನಿಮ್ಮ ಭಾಗ್ಯಕ್ಕೆ ಎಣೆಯೇ ಇಲ್ಲ. ಇಷ್ಟಾದ ಮೇಲೆ ನೀವು ರಾಜಕೀಯ ಮಾಡಬೇಕು. ಹೇಳಿಕೇಳಿ ರಾಜಕೀಯದಿಂದಲೇ ನೀವು ಅಧಿಕಾರಕ್ಕೆ ಬಂದಿದ್ದೀರಿ ಆದರೆ ಈ ರಾಜಕೀಯ ನಿಚ್ಚಳವಾಗಿರಬೇಕು. ಬಳ್ಳಾರಿಯಲ್ಲಿ ಸಿರಿಗೆರೆ ಸ್ವಾಮಿಗಳು ಬಸವೇಶ್ವರರ 8ನೇ ಶತಮಾನೋತ್ಸವವನ್ನು ನೆರವೇರಿಸಲಿಕ್ಕೆ ಹೋದರು, ಅಲ್ಲಿಯ ಮಹಾಜನರು ಸೇರಿ ಅಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯ ಇಲ್ಲ ಒಂದೊಂದು ಕೋಮಿಗೆ ಒಂದೊಂದು ವಿದ್ಯಾರ್ಥಿನಿಲಯ ಇದೆ. ಎಲ್ಲಾ ಕೋಮಿನ ವಿದ್ಯಾರ್ಥಿಗಳು ಸೇರಿ ಅಭ್ಯಾಸಮಾಡತಕ್ಕ ಒಂದು ಸಾರ್ವಜನಿಕ ವಿದ್ಯಾರ್ಥಿನಿಲಯವನ್ನು ತಾವು ಸ್ಥಾಪನೆ ಮಾಡಬೇಕು, ಅದೇ ರೀತಿ ಎಲ್ಲಾ ಕೋಮಿನವರೂ ಸೇರಿ ಮದುವೆ ಕಾರ್ಯಗಳನ್ನು ನೆರವೇರಿಸಲು ಒಂದು ಕಲ್ಯಾಣ ಮಂದಿರವನ್ನು ಕಟ್ಟಬೇಕು ಎಂದು ಕೇಳಿಕೊಂಡರು.

ಶ್ರೀ ಕೆ. ಎಚ್. ಶ್ರೀನಿವಾಸ್.—ಇಂಟರಕ್ಯಾಸ್ಟ್ ಮ್ಯಾರೇಜ್ ಕಲ್ಯಾಣ ಮಂದಿರವೇ ?

ಶ್ರೀ ಜಿ. ದುಗ್ಗಪ್ಪ.—ಆ ಕೆಲಸ ಕೂಡ ಆಗಿದೆ. ಶೈಲಜ್ ಅನ್ನತಕ್ಕ ಜರ್ಮನ್ ಹುಡುಗಿಯನ್ನು ಪ್ರೊಫೆಸರ್ ಹೀರೇಮಲ್ಲೂರ ಈಶ್ವರನ್ ಅನ್ನುವವರು ಮದುವೆ ಆಗಿದ್ದಾರೆ, ಅದು ತಮಗೆ ಗೊತ್ತಿರಬಹುದು. ಅಂತಹ ಸುತ್ತ್ಯವಾದ ಕಾರ್ಯಕ್ಕೆ ಒಂದು ಸರ್ಕಾರದ ಜಮೀನನ್ನು ಕೊಡಬೇಕು ಎಂದು ಡೆಪ್ಯೂಟಿ ಕಮಿಷನರನ್ನು ಕೇಳಿದರೆ ತಮ್ಮ ರಾಜಕೀಯ ಬೆಂಬಲಿಗರು ಸಿರಿಗೆರೆ ಸ್ವಾಮಿಗಳಿಗೆ ಸರ್ವಥಾ ಜಮೀನು ಕೊಡಕೂಡದು ಎಂದು ರಿಪೋರ್ಟ್ ಬರೆಸಿ ಇವತ್ತಿನವರೆಗೂ ಕೂಡ ರೆವಿನ್ಯೂ ಮಂತ್ರಿಗಳ ಹತ್ತಿರ ಆ ಫೈಲು ಇದ್ದುದು ಈಗ ಮತ್ತೆ ಬಳ್ಳಾರಿಗೆ ಹೋಗಿದೆ. ಇಂತಹ ರಾಜಕಾರಣ ಮಾಡಬೇಡಿ, ಇದು ಮೊದಲನೆಯ ದೋಷ ತಿದ್ದಿಕೊಳ್ಳಬೇಕು. ನಾನು ಹೇಳುವುದು ಇಷ್ಟೆ, ಯಾರಾದರೂ ಆಗಲಿ ಒಳ್ಳೆಯ ಕೆಲಸ ಮಾಡಿದರೆ ಮಾಡಲಿ, ಬೆಂಬಲ ಕೊಡಿ. ರಾಜಕಾರಣ ಮಾಡುವಾಗ ನ್ಯಾಯ ಮಾಡಬೇಕೆನ್ನುವುದು ಒಂದು ಅಂಶ. ಎರಡನೆಯದು ನೀತಿ ವಿಹೀನ ವಾಣಿಜ್ಯ. ಈಗ ವಾಣಿಜ್ಯ ಇಲಾಖೆಯ ಮಂತ್ರಿಗಳು ಮೈಸೂರಿನವರು. ಹಿಂದೆ ಸರ್. ಎಂ. ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಭದ್ರಾವತಿಯಲ್ಲಿರತಕ್ಕ ಕಬ್ಬಿಣದ ಕಾರ್ಖಾನೆ ಮತ್ತು ಇನ್ನೂ ಇತರ ಅನೇಕ ಕಾರ್ಖಾನೆಗಳನ್ನು ಎಷ್ಟೇ ಲುಕ್ಸಾನಾಗಲಿ ಬಿಳೀ ಆನೆ ಸಾಕಿದ ಹಾಗೆ ಸಾಕುತ್ತೇವೆ ಬಿಟ್ಟುಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಇವತ್ತು ಪೋರ್ಸಲೀನ್ ಫ್ಯಾಕ್ಟರಿ ಇದೆ ಅದನ್ನು ಬಿಳಿ ಆನೆ ಸಾಕಿದ ಹಾಗೆ ಸಾಕಬೇಕಾಗಿದೆ. ಈ ಕೈಗಾರಿಕಾ ಪ್ರಪಂಚದಲ್ಲಿ ಇಂಡಿಯಾ ದೇಶದಲ್ಲಿ ಮೈಸೂರಿಗೆ ಇರತಕ್ಕ ಸ್ಥಾನ ಇವತ್ತು, ಅಧೋಗತಿಗೆ ಹೋಗುತ್ತಾ ಇದೆ. ನೀವು ಇದರ ಬಗ್ಗೆ ನಿಚ್ಚಳವಾದ ನಿರ್ದಿಷ್ಟವಾದ ನೀತಿಯನ್ನು ಅನುಸರಿಸಿ, ಯಾವುದನ್ನೂ ಕೈ ಬಿಡಬೇಡಿರಿ.

7-00 P. M.

ಮೂರನೆಯದು ಶೀಲವಲ್ಲದ ಶಿಕ್ಷಣ. ಯಾವುದಾದರೂ ಒಂದು ಸಾಹಿತ್ಯದ ಪುಸ್ತಕ ಪ್ರಕಟಣೆಯಾದರೆ, ಅದು ಈ ದೇಶದ ಮಟ್ಟವನ್ನು ಎತ್ತಿ ತೋರಿಸುತ್ತದೆ. ನಮ್ಮ ದೇಶದಲ್ಲಿ ಪ್ರಕಟವಾಗತಕ್ಕ ಪುಸ್ತಕಗಳ ದರ್ಜೆಯ ಮಟ್ಟ ಯಾವ ರೀತಿಯಲ್ಲಿದೆಯೆಂದರೆ, ಸರ್ಕಾರಕ್ಕೆ ಯಾರು ಬೆಂಬಲ ಕೊಡುತ್ತಾರೋ, ಸರ್ಕಾರದ ಬೆಂಬಲ ಯಾರಿಗೆ ಇದೆಯೋ ಅವರ ಒಂದು ಬೆಂಬಲದಿಂದ ಪುಸ್ತಕಗಳು ಪ್ರಕಟಣೆಯಾಗಿವೆ. ಅಂತಹ ಪುಸ್ತಕಗಳನ್ನು ಓದಿದರೆ, ನಾವು ಯಾವ ಮಟ್ಟದಲ್ಲಿದ್ದೇವೆ ಎಂಬುದು ಗೊತ್ತಾಗುತ್ತದೆ. ಇಂಗ್ಲೆಂಡಿನಲ್ಲಿ ಹ್ಯಾಮಲೇಟ್ ಡ್ರಾಮಾ ಪುಸ್ತಕ ಪ್ರಕಟಣೆಯಾದಾಗ ಅಲ್ಲಿನ ಸಂಸ್ಕೃತಿ ಯಾವರೀತಿ ಇತ್ತೆಂಬುದನ್ನು ಗಮನಿಸಬೇಕು. ಮೈಸೂರು ದೇಶದಲ್ಲಿ ಸರ್ಕಾರದ ಬೆಂಬಲ ಇರತಕ್ಕವರು ಯಾವರೀತಿಯಾದಂಥ ಪುಸ್ತಕಗಳನ್ನು ಪ್ರಕಟಣೆ ಮಾಡುತ್ತಾರೆಂಬುದನ್ನು ನೋಡಿದರೆ ಸಾಕು ನಿಮ್ಮ ಸಾಹಿತ್ಯ ಮತ್ತು ರಾಜಕೀಯ ಮಟ್ಟ ಹೇಗಿದೆಯೆಂಬುದಕ್ಕೆ ನಿಮ್ಮ ಬೆಂಬಲ ಪಡೆದವರಿಂದ ಪ್ರಕಟಿತವಾದ "ಶೂನ್ಯಪೀಠಪ್ರಭಾವ" ಎಂಬ ಪುಸ್ತಕವೇ ಸಾಕ್ಷಿಯಾಗಿದೆ. ಆದ್ದರಿಂದ ಸಾಹಿತ್ಯಮಟ್ಟವನ್ನು ಹೆಚ್ಚಿಸಬೇಕು ಮತ್ತು ಶೀಲದಿಂದಕೂಡಿದ ಶಿಕ್ಷಣವಿರಬೇಕು.

ನಾಲ್ಕನೆಯದು, ದುಡಿಮೆ ಇಲ್ಲದ ಸಂಪತ್ತು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮಾನ್ಯ ಶ್ರೀ ಸಂಜೀವರೆಡ್ಡಿಯವರೆ ಇದನ್ನು ಹೇಳಿ ಹೆಸರಾಗಿದ್ದಾರೆ.

ಐದನೆಯದು, ವಿಚಕ್ಷಣೆಯಿಲ್ಲದ ಆಡಳಿತ. ಇದಕ್ಕೆ ಒಂದು ಉದಾಹರಣೆ, ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಎಷ್ಟು ಜನ ಇಂಜನಿಯರ್ಸ್ ಬೇಕು, ಒಬ್ಬ ಇಂಜನಿಯರಿಗೆ ಕಣ್ಣು ಇಲ್ಲ, ಒಬ್ಬರಿಗೆ ತಲೆ ಇಲ್ಲ, ಒಬ್ಬ ಇಂಜನಿಯರ್ ಆಲ್‌ಮೋಸ್ಟ್ ಸಿನಿಕ್. ಇನ್ನೊಬ್ಬ ಇಂಜಿನಿಯರ್, he walks on his head and not on his legs; ಇನ್ನೊಬ್ಬ ಚೀಫ್ ಇಂಜನಿಯರ್ ಹಿ ಈಸ್ ಎ ಥರೋ ಜಂಟಲ್‌ಮನ್, ಬಟ್ ಹಿ ಹ್ಯಾಸ್‌ನೋ ಪವರ್ಸ್. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರ ಒಂದು ಸಾರಿ ಒಂದು ಮಾತನ್ನು ಹೇಳಿದ್ದಾರೆ, ಸರ್ಕಾರದ ನೌಕರರು ಒಂದು ದಿವಸಕ್ಕೆ 3 ಘಂಟೆ ಕೆಲಸ ಮಾತ್ರ ಕೆಲಸ ಮಾಡುತ್ತಾರೆ, ಅದು ಅವರ ಗಮನಕ್ಕೆ ಬಂದಿದೆಯೆಂದು ಹೇಳಿದ್ದಾರೆ. ಅವರು ಆ ಮಾತನ್ನು ಹೇಳಿದ್ದು ನನಗೆ ಬಹಳ ಸಂತೋಷವಾಗುತ್ತದೆ. ಈ ದಿವಸ ಕೆಲಸಗಾರರ ಬಗ್ಗೆ ಆಡಳಿತವನ್ನು ಸರ್ಕಾರದವರು ಬಿಗಿಮಾಡುತ್ತಾರೆಂಬುದಾಗಿ ಮಾನ್ಯ ಶ್ರೀ ಅರಸ್ ಅವರು ಹೇಳಿದರು. ಅದಕ್ಕೆ ನಾನು ಸಂಪೂರ್ಣವಾಗಿ ಬೆಂಬಲವನ್ನು ಕೊಡುತ್ತಿದ್ದೇನೆ. ಕೋ ಆಪರೇಟಿವ್ ಇಲಾಖೆಯಲ್ಲಿರತಕ್ಕ ಇಲಿಗಳನ್ನು ಮತ್ತು ಹೆಗ್ಗಣಗಳನ್ನು ಓಡಿಸಿ ಬಿಗಿಯಾಗಿ ಆಡಳಿತ ಮಾಡಿ. ಒಟ್ಟಿನಲ್ಲಿ ವಿಚಕ್ಷಣೆ ಇಲ್ಲದ ಆಡಳಿತವನ್ನು ಖಂಡಿತವಾಗಿ ಮಾಡಬೇಡಿ.

ಆರನೆಯದು, ಸ್ವಜನ ಪಕ್ಷಪಾತ. ಇದು ಒಂದು ದೊಡ್ಡ ಕಾಯಿಲೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗೆ ಯಾರ್ಯಾರದು ಬೆಂಬಲವಿಲ್ಲವೋ ಅಂತಹವರ ಬಗ್ಗೆ ಎಲೆಕ್ಷನ್ ಇನ್ನೇನು ಆಗ

ಬೇಕು ಎನ್ನುವಾಗ ಬಹಳ ವಿಚಿತ್ರ ನಡೆದಿದೆ. ಚಿತ್ರದುರ್ಗ ಮುನಿಸಿಪಾಲಟಿ ಚುನಾವಣೆಗೆ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕಿದಾಗ ನಡೆದ ವಿಷಯ. ಅದು 24 ಜನರು ಇರತಕ್ಕ ಕೌನ್ಸಿಲ್. 12 ಜನ ಸದಸ್ಯರು ಬಂದು, ಏನಿದು, ಇಷ್ಟು ಅನ್ಯಾಯವಾಗುತ್ತಿದೆ, ಮುನಿಸಿಪಾಲಟಿಯವರು ಮೀಟಿಂಗ್ ಕರೆಯಲಿಲ್ಲ, ನೀವು ವಿಚಾರಮಾಡಬೇಡವೇ ಎಂದು ಕೇಳಿದಾಗ, ಒಬ್ಬ ಡೆಪ್ಯುಟಿ ಕಮಿಷನರ್ ದರ್ಜೆಯಲ್ಲಿರತಕ್ಕ ಅಧಿಕಾರಿಯನ್ನು ಕಳುಹಿಸಿ ಅದನ್ನು ವಿಚಾರಮಾಡಿ ಎಂಬುದಾಗಿ ಹೇಳಿದರು. ಇದರ ಬಗ್ಗೆ 24 ಜನರ ಸದಸ್ಯರ ಪೈಕಿ 12 ಜನರು ಸರ್ಕಾರಕ್ಕೆ ಅರ್ಜಿ ಕೊಟ್ಟರು. ನಾನೂ ಸಹ ಒಂದು ಅರ್ಜಿಯನ್ನು ಈ ಸಭೆಯಲ್ಲಿಯೇ ಕೊಟ್ಟಿದ್ದೇನೆ. 28ನೇ ಡಿಸೆಂಬರ್‌ನಲ್ಲಿ ಡೆಲಿಗೇಷನ್ ಸಹ ಬಂದಿದ್ದರು. ಆದರೆ 31ನೇ ತಾರೀಖಿನಲ್ಲಿ ಒಂದು ಜಿ. ಓ. ಆಗಿ ಆ ಕೌನ್ಸಿಲನ್ನು 6 ತಿಂಗಳುಗಳ ಕಾಲ ಮುಂದುವರಿಸಿದ್ದೇವೆಂದು ಹೇಳಿದರು. ಅಂದಮೇಲೆ ಕಾನೂನು ಎಲ್ಲಿ ಗಾಳಿಗೆ ಹೋಯಿತೋ ಗೊತ್ತಾಗಲಿಲ್ಲ.

ಶ್ರೀ ಎಸ್. ಶಿವಪ್ಪ.—ಇದು ಕಾಂಗ್ರೆಸ್ ಡೆಮೊಕ್ರಸಿ.

ಶ್ರೀ ಬಿ. ಎಂ. ಪಾಟೀಲ್ (ನಗರಾಡಳಿತ ಮಂತ್ರಿಯವರು).—ಹೈಕೋರ್ಟಿನಿಂದ ಆರ್ಡರ್ ಬಂದಿದೆ. ಸರ್ಕಾರ ಆರ್ಡರ್ ಮಾಡಿದೆ.

ಶ್ರೀ ಎಸ್. ಶಿವಪ್ಪ.—ಅದಕ್ಕೆ ಆಕ್ಟ್‌ನಲ್ಲಿ ಪ್ರಾವಿಷನ್ ಇದೆಯೋ ಇಲ್ಲವೋ ?

ಶ್ರೀ ಬಿ. ಎಂ. ಪಾಟೀಲ್.—ಆಕ್ಟ್‌ನಲ್ಲಿ ಅವಕಾಶವಿದೆ.

ಶ್ರೀ ಜಿ. ದುಗ್ಗಪ್ಪ.—ಆ ಅವಕಾಶವನ್ನು ಇವರು ದುರುಪಯೋಗಮಾಡಿಕೊಂಡು ಅವರಿಗೆ ಬೇಕಾದವರಿಗೆ ಅನುಕೂಲವಾಗಲೆಂದು ಸ್ವಜನ ಪಕ್ಷಪಾತ ದೃಷ್ಟಿಯಿಂದ ಇದನ್ನು ಮಾಡಿದ್ದಾರೆ.

ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ಬಗ್ಗೆ ಒಂದು ಆಕ್ಟನ್ನು ಪಾಸ್‌ಮಾಡಿದ್ದಾರೆ. ಮೊನ್ನೆ ತಾನೇ ಹೈಕೋರ್ಟಿನಲ್ಲಿ ಒಂದು ಇಂಟರ್‌ಪ್ರಿಟೇಷನ್ ಕೊಟ್ಟಿದ್ದಾರೆ. ಅದರ ಪ್ರಕಾರ ಪ್ರತಿಯೊಂದು ಕಮಿಟಿಯನ್ನು ಸರ್ಕಾರದವರು ನಾಮಿನೇಟ್ ಮಾಡಬೇಕೆಂದು ವ್ಯಾಖ್ಯಾನಮಾಡಿದ್ದಾರೆ. ನ್ಯಾಯವಾಗಿ ಸರ್ಕಾರ ಆಡಳಿತ ನಡೆಸುವ ಬಗ್ಗೆ ಶಾಸಕರ ಅಭಿಪ್ರಾಯವೇನೆಂಬುದನ್ನು ತಿಳಿದುಕೊಳ್ಳಬೇಕು. ಅಕಸ್ಮಾತ್ ನ್ಯೂನತೆ ಕಂಡಲ್ಲಿ ಅದಕ್ಕೆ ಸರಿಯಾಗಿ ತಿದ್ದುಪಡಿ ತರಬೇಕು. ಸರ್ಕಾರದವರು ಇದನ್ನೆಲ್ಲಾ ಬಿಟ್ಟು ಚೆನ್ನಾಗಿ ಇದೆ ಎಂದು ಹೇಳಿ ಪ್ರತಿಯೊಂದು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳಿಗೆ ಸರ್ಕಾರದವರು ನಾಮಿನೇಟ್ ಮಾಡಲು ಹೊರಟರು. ಹೈಕೋರ್ಟು ಡಿಸಿಷನ್ ಬಂದರೆ ಏನು ತಪ್ಪು ? ಶಾಸಕರ ಅಭಿಪ್ರಾಯಕ್ಕೆ ತಾವು ಮನ್ನಣೆ ಕೊಡಬೇಕು. ಆಕ್ಟು ತಪ್ಪು ಇದ್ದರೆ ಸರಿಯಾದ ತಿದ್ದುಪಡಿ ತರಬೇಕು. ನಿಮಗೆ ಬೇಕಾಗಿರತಕ್ಕದ್ದನ್ನು ಜಾರಿಗೆ ತರುವುದು ನಿಮಗೆ ಹಿತವಿಲ್ಲದಿದ್ದರೆ ಜಾರಿಗೆ ತಾರದೆ ಇರುವುದು ಸರಿಯಲ್ಲ.

ಶ್ರೀ ಬಿ. ಎಂ. ಪಾಟೀಲ್.—ಹೊಸ ಆಕ್ಟು ಬಂದಮೇಲೆ ಅಲ್ಲಿ ಚುನಾವಣೆಯಾಗಬೇಕಾಗಿತ್ತು. ಅದಕ್ಕೆ ವಿರೋಧವಾಗಿ ಕೆಲವರು ಹೈಕೋರ್ಟಿಗೆ ಹೋದರು. ಹೈಕೋರ್ಟಿಗೆ ಹೋದಾಗ್ಗೆ, ನಾವು ತೀರ್ಮಾನಮಾಡಿದ್ದರೆ, ಅದು ಹೈಕೋರ್ಟಿಗೆ ವಿರೋಧವಾಗಿ ಮಾಡಬೇಕಾಗಿ ಬರುತ್ತಿತ್ತು.

ಶ್ರೀ ಜಿ. ದುಗ್ಗಪ್ಪ.—ಆ ರೀತಿಯಾಗಿ ನಾನು ಹೇಳುವುದಿಲ್ಲ. ನಿಮ್ಮ ಸ್ನೇಹಿತರು ಹೇಳಿದ ಹಾಗೆ ನಾನು ಅಡ್ವೈಸ್ ಮಾಡುವುದಿಲ್ಲ. ಅದರ ಬಗ್ಗೆ ಈ ಮಾನ್ಯ ಸಭೆಯ ಅಭಿಪ್ರಾಯವೇನಿತ್ತು, ಯಾವ ಹಿನ್ನೆಲೆಯಲ್ಲಿ ಈ ಆಕ್ಟನ್ನು ಪಾಸ್ ಮಾಡಿದ್ದಾರೆ ಮತ್ತು ಹೈಕೋರ್ಟಿನ ಅಭಿಪ್ರಾಯವನ್ನು ನೋಡಿಕೊಂಡು ತೀರ್ಮಾನ ಮಾಡಬೇಕು. ಹಾಗಿದ್ದರೆ ಮಾತ್ರ ನ್ಯಾಯವಾಗಿ ಆಡಳಿತ ಮಾಡುವುದಕ್ಕೆ ಸಾಧ್ಯವಿದೆಯೇ ವಿನಹ ಇಲ್ಲದಿದ್ದರೆ ತಪ್ಪು ಆಡಳಿತವಾಗುತ್ತದೆ.

ಏಳನೆಯದು, ಕೊನೆಯದಾಗಿ ಕಪಟ ಸಮಾಜ ಕಲ್ಯಾಣನೀತಿ. ಯಾರಿಗೋಸ್ಕರ ಕಲ್ಯಾಣ ? ಈ ಇಲಾಖೆಗೆ ಉಪಮಂತ್ರಿಯಾಗಿ ಮಕ್ಕಳ ತಾಯಿಂದಿರು ಇದ್ದಾರೆ. ನಿಜವಾಗಿ ಯಾರು ಸಮಾಜದಲ್ಲಿ ನತದೃಷ್ಟರು ಇದ್ದಾರೋ, ಮತ್ತು ಅತ್ಯಂತ ಕೆಳಮಟ್ಟದಲ್ಲಿರತಕ್ಕ ಜನರು ಇದ್ದಾರೋ ಅಂತಹವರ ಕಲ್ಯಾಣವಾಗಬೇಕು. ಸರ್ಕಾರದವರು ಏನು ಹಿಂದುಳಿದವರನ್ನು ಮುಂದಕ್ಕೆ ತರಬೇಕೆಂಬ ನೀತಿಯನ್ನು ಇಟ್ಟುಕೊಂಡಿದ್ದಾರೋ ಅದರಲ್ಲಿ ಒಂದು ಪಕ್ಷದವರನ್ನೇ ಎತ್ತಿಕಟ್ಟಿ ನಾಟಕವಾಡಿಸುತ್ತಿದ್ದಾರೆ. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ, ಯಾರನ್ನು ಷೆಡ್ಯೂಲ್ ಕ್ಯಾಸ್ಟ್ ಲಿಸ್ಟಿಗೆ ಸೇರಿಸಬೇಕೆಂಬ ಅಭಿಪ್ರಾಯವನ್ನು ಕೇಳಿದಾಗ, ಸರ್ಕಾರದವರು ಏನು ಮಾಡಿದರೆಂದರೆ, ಯಾರು ಅಸ್ಪೃಶ್ಯರು ಇದ್ದಾರೋ ಆ ಒಂದು ಅರ್ಹತೆಯ ಮೇಲೆ ಅವರನ್ನು ಮಾತ್ರ ಆ ಪಟ್ಟಿಯಲ್ಲಿ ಅಂದರೆ

(ಶ್ರೀ ಜಿ. ದುಗ್ಗಪ್ಪ)

ಪರಿಶಿಷ್ಟದ ವರ್ಗಪಟ್ಟಿಗೆ ಸೇರಿಸಬೇಕೆಂದು ಶಿಫಾರಸ್ಸು ಕಳುಹಿಸಿದರು. ಮತ್ತೆ ಪುನಃ ಈ ವರ್ಗದಲ್ಲಿ ಭಿನ್ನಾಭಿಪ್ರಾಯ ತರುವುದಕ್ಕೆ ಬೋವಿಗಳನ್ನು ಆ ವರ್ಗದಲ್ಲಿ ಸೇರಿಸಬೇಕೆನ್ನುವ ಅಭಿಪ್ರಾಯವನ್ನು ಇಟ್ಟುಕೊಂಡು ಆ ವರ್ಗದ ಮಾನ್ಯ ಸದಸ್ಯರಾಗಿರುವ ಪ್ರತಿನಿಧಿಗಳನ್ನು ಕೇಳದೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದಾರೆ. ಇದು ತಪ್ಪು. ಈ ವರ್ಗದ ನತದೃಷ್ಟ ಜನರನ್ನು ಪ್ರತಿನಿಧಿಸತಕ್ಕ ನಮ್ಮ ಪ್ರತಿನಿಧಿಗಳದೇ ತಪ್ಪು. ಆ ತಪ್ಪು ನಮ್ಮ ಮೇಲೆ ಇರುವಾಗ ಇತರ ಕಡೆ ಬೆಟ್ಟು ತೋರಿಸುವುದಕ್ಕೆ ಸಾಧ್ಯವಿಲ್ಲ. ಇವತ್ತಾದರೂ ಕಿವಿ ಕೊಡಲಿ. ಇಡೀ ಇಂಡಿಯಾದೇಶದಲ್ಲಿರತಕ್ಕ ಪ್ರತಿಯೊಂದು ಸಂಸ್ಥಾನದಲ್ಲಿ ಯಾವ ಒಂದು ಆಧಾರದ ಮೇಲೆ ಹಿಂದುಳಿದ ಪಟ್ಟಿಯನ್ನು ಮಾಡಿದ್ದಾರೋ ಅದೇ ರೀತಿ ಅದು ಮೈಸೂರಿಗೆ ಲಾಗುವಾಗಬೇಕೇ ವಿನಹ ಮೈಸೂರಿಗೆ ಬೇರೆ ಆಗಕೂಡದು. ಇವತ್ತು ನಾನು ಅಸ್ಪೃಶ್ಯ ಎಂದು ಹೇಳುವುದಕ್ಕೆ ನಿಜವಾಗಿ ನನಗೆ ಸಂತೋಷವಾಗುತ್ತದೆ. ನನ್ನ ಮಗನನ್ನು ಕೇಳಿದರೆ ಆತನು ಆ ರೀತಿ ಹೇಳುವುದಕ್ಕೆ ತಯಾರು ಇಲ್ಲ. ಆದರೆ ಇದು 2 ಸಾವಿರ ವರ್ಷಗಳಿಂದ ಬಂದಿದೆ. ನಾನು ಒಂದು ವಿಷಯವನ್ನು ಹೇಳುತ್ತೇನೆ. ನಾನು ಇಲ್ಲಿ ಅಸೆಂಬ್ಲಿ ಮೆಂಬರ್ ಆಗುವುದಕ್ಕೆ ಸಾಧ್ಯವಿರಲಿಲ್ಲ. ನಮ್ಮ ಜನಾಂಗದವರ ಹಿತರಕ್ಷಣೆಯನ್ನು ಸಹ ಕಾಪಾಡುವ ಸಲುವಾಗಿ ನಾನು ಅವರ ಪ್ರತಿನಿಧಿಯಾಗಿ ಇಲ್ಲಿದ್ದೇನೆ. ನೀವು ಈ ಒಂದು ರಾಜಕೀಯ ಕಾರಣಕ್ಕಾಗಿ, ನಿಮ್ಮ ಸ್ಥಾನವನ್ನು ಭದ್ರಮಾಡಿಕೊಳ್ಳುವುದಕ್ಕಾಗಿ ಈ ಪರಿಶಿಷ್ಟವರ್ಗದವರಲ್ಲಿ ಭಿನ್ನಾಭಿಪ್ರಾಯ ತಂದು ಅವರವರಿಗೆ ಹೊಡೆದಾಟ ಹಚ್ಚಿ ನಾಟಕಮಾಡುತ್ತಿದ್ದೀರಿ. ಒಟ್ಟಿನಲ್ಲಿ ಮಾನ್ಯ ಶ್ರೀಮತಿ ಬಸವರಾಜೇಶ್ವರಿಯವರಿಗೆ ಸಮಾಜಕಲ್ಯಾಣ ಮಾಡಬೇಕೆಂಬ ಆಸಕ್ತಿ ಇದೆ. ಈ ಇಲಾಖೆಯಲ್ಲಿರತಕ್ಕ ದೋಷಗಳನ್ನು ನಿವಾರಿಸಿಕೊಂಡರೆ ನಿಮಗೂ ಒಳ್ಳೆಯದು, ದೇಶಕ್ಕೂ ಒಳ್ಳೆಯದು. ಆ ರೀತಿ ಮಾಡದಿದ್ದರೆ ಅದು ಬಾಲಗೃಹದ ಹಾಗೆ ಇರುತ್ತದೆ. ಇದರಿಂದ ಪ್ರಜಾಪ್ರಭುತ್ವ ಕುಸಿದುಬೀಳುತ್ತದೆ. ಇದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—We shall now adjourn and meet at 1 P. M. on Monday.

The House adjourned at Five Minutes past Seven of the Clock to meet again at One of the Clock, on Monday, the 3rd March 1969.

WD 12496—GPB—600—19-6-1969